ಮಂಗಳವಾರ, ಜುಲೈ 2, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 183 | ಪುಟ 12 • www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಚಿಕಿತ್ಸೆಯಲ್ಲಿ ಮಾತ್ರೆಯಂತೆ ವೈದ್ಯರ ಮಾತು ಕೂಡ ಔಷಧವಾಗಬಲ್ಲದು

ಆಳ-ಅಗಲ: ವಿದ್ಯಾರ್ಥಿಗಳ ನಿಲಯ; ಸಮಸ್ಯೆಗಳ ಆಲಯ

ವಾಹನಗಳ ಸಗಟು ಮಾರಾಟ ಏರಿಕೆ 8

ಜಿಎಸ್‌ಟಿ ಸಂಗ್ರಹ ಶೇ 8 ಹೆಚ್ಚಳ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,476	24,141	₹73,900 (ಬೆಂಗಳೂರು)	₹92,200 (ಬೆಂಗಳೂರು)	83.44

‘ದ್ವೇಷದಲ್ಲಿ ನಿರತ’ ಹೇಳಿಕೆಗೆ ಸ್ವತಃ ಆಕ್ಷೇಪ ವ್ಯಕ್ತಪಡಿಸಿದ ಮೋದಿ • ನೆರವಿಗೆ ನಿಂತ ಮಂತ್ರಿಮಂಡಲ

ರಾಹುಲ್ ಅಬ್ಬರ: ಸದನ ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿರೋಧ ಪಕ್ಷದ ನಾಯಕರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಲೋಕಸಭೆಯಲ್ಲಿ ಮೊದಲ ಭಾಷಣ ಮಾಡಿದ ರಾಹುಲ್ ಗಾಂಧಿ ಅವರು ಆಡಳಿತರೂಢ ಬಿಜೆಪಿ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿದರು. ‘ತಮ್ಮನ್ನು ತಾವು ಹಿಂದೂಗಳೆಂದು ಕರೆದುಕೊಳ್ಳುವವರು ಹಿಂಸಾಚಾರ ಹಾಗೂ ದ್ವೇಷದಲ್ಲಿ ಹಗಲಿರುಳು ನಿರತರಾಗಿದ್ದಾರೆ’ ಎಂದು ಟೀಕಾಪ್ರಹಾರ ನಡೆಸಿದರು. ಈ ಹೇಳಿಕೆಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಸದನದಲ್ಲಿ ಕೋಲಾಹಲ ಉಂಟಾಯಿತು.

ಸದನದಲ್ಲಿ ರಾಹುಲ್ ಅವರೊಂದಿಗಿನ ಮೊದಲ ನೇರ ಮುಖಾಮುಖಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ‘ಇಡೀ ಹಿಂದೂ ಸಮಾಜವು ಹಿಂಸಾ ಪ್ರವೃತ್ತಿಯಿಂದ ಕೂಡಿದೆ ಎಂದು ಕರೆಯುವುದು ತುಂಬಾ ಗಂಭೀರ ವಿಷಯ’ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಡಳಿತ ಪಕ್ಷ ಹಾಗೂ ಅದರ ಸೈದ್ಧಾಂತಿಕ ಮಾರ್ಗದರ್ಶಕ ಆರ್‌ಎಸ್‌ಎಸ್ ಮೇಲೆ ಕಾಂಗ್ರೆಸ್ ನಾಯಕನ ಮೊನಚಾದ ದಾಳಿಗೆ ಪ್ರಧಾನಿ ಎರಡು ಸಲ ಮಧ್ಯಪ್ರವೇಶಿಸಿ ಆಕ್ಷೇಪಿಸಿದರು.

ರಾಹುಲ್ ಭಾಷಣಕ್ಕೆ ಆಡಳಿತ ಪಕ್ಷದ ಸದಸ್ಯರು ಪದೇ ಪದೇ ಅಡ್ಡಿಪಡಿಸಿದರು. 6–7 ಸಚಿವರು ಎದ್ದು ನಿಂತು ಕ್ಷಮೆಯಾಚನೆಗೆ ಪಟ್ಟು ಹಿಡಿದರು. ಆಗ ರಾಹುಲ್ ಜೋರಾಗಿ, ‘ನಾನು ಹಿಂದೂ ಸಮುದಾಯದ ಬಗ್ಗೆ ಹೇಳಿಲ್ಲ. ಹಿಂದೂ ಯಾವತ್ತೂ ದ್ವೇಷ ಹಾಗೂ ಹಿಂಸೆಯನ್ನು ಹರಡುವುದಿಲ್ಲ. ಮೋದಿ ಎಂದರೆ ಇಡೀ ಹಿಂದೂ ಸಮಾಜವಲ್ಲ, ಬಿಜೆಪಿ ಎಂದರೆ ಇಡೀ ಹಿಂದೂ ಸಮಾಜವಲ್ಲ. ಆರ್‌ಎಸ್‌ಎಸ್ ಇಡೀ ಹಿಂದೂ ಸಮಾಜವಲ್ಲ. ಬಿಜೆಪಿ ದ್ವೇಷ ಹಾಗೂ ಹಿಂಸಾಚಾರವನ್ನು ಹರಡುತ್ತದೆ’ ಎಂದು ತಿರುಗೇಟು ಕೊಟ್ಟರು.

9ನೇ ಪುಟ ನೋಡಿ



ರಾಹುಲ್ ಹೇಳಿದ್ದೇನು?

- ಪ್ರತಿಪಕ್ಷಗಳು ನಿಮ್ಮ ಶತ್ರುವಲ್ಲ. ದೇಶವನ್ನು ಪ್ರಗತಿಯತ್ತ ಕೊಂಡೊಯ್ಯಲು ಸಂಪೂರ್ಣ ಸಹಕಾರ ಮತ್ತು ಬೆಂಬಲ ನೀಡುತ್ತೇವೆ
- ಫೈಜಾಬಾದ್‌ನ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸುವ ಮೂಲಕ ಅಯೋಧ್ಯೆಯ ಜನರು ಆ ಪಕ್ಷಕ್ಕೆ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ. ತಮ್ಮ ಮನೆ ನೆಲಸಮ-ಗೊಳಿಸಿದ್ದಕ್ಕೆ ಹಾಗೂ ಪರಿಹಾರ ನೀಡದಿರುವುದಕ್ಕೆ ಅಲ್ಲಿನ ಜನರಿಗೆ ಬಿಜೆಪಿ ವಿರುದ್ಧ ಕೋಪ ಹಾಗೂ ಅಸಮಾಧಾನವಿದೆ
- ನರೇಂದ್ರ ಮೋದಿ ಅವರು ಅಯೋಧ್ಯೆಯಿಂದ ಸ್ಪರ್ಧಿಸಲು ಬಯಸಿದ್ದರು ಹಾಗೂ ಅದಕ್ಕಾಗಿ ಎರಡು ಸರ್ವೆಗಳನ್ನು ಮಾಡಿಸಿದ್ದರು. ಅವರು ಸೋಲುತ್ತಾರೆ ಎಂದು ಎರಡೂ ಸರ್ವೆಗಳು ತಿಳಿಸಿದ್ದವು. ತದನಂತರ ಮೋದಿ ವಾರಾಣಾಸಿಗೆ ಓಡಿಹೋದರು
- ನೀಟ್ ವೃತ್ತಿಪರ ಪರೀಕ್ಷೆಯಿಂದ ವ್ಯಾಪಾರೀ ಪರೀಕ್ಷೆಯಾಗಿ ಬದಲಾಗಿದ್ದರಿಂದ ವಿದ್ಯಾರ್ಥಿಗಳು ಅದರಲ್ಲಿ ನಂಬಿಕೆ ಕಳೆದುಕೊಂಡಿದ್ದಾರೆ. ಶ್ರೀಮಂತರಿಗೆ ಅನುಕೂಲವಾಗುವಂತೆ ರೂಪಿಸಲಾಗಿದೆ

ಪ್ರಧಾನಿ ನಗುವುದಿಲ್ಲ, ಸದನದಲ್ಲಿರುವ ಸದಸ್ಯರನ್ನು ಸ್ವಾಗತಿಸುವುದಿಲ್ಲ
ರಾಹುಲ್ ಗಾಂಧಿ, ವಿಪಕ್ಷ ನಾಯಕ

ಪ್ರಜಾಪ್ರಭುತ್ವ, ಸಂವಿಧಾನ ನನಗೆ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಗೌರವಿಸುವುದನ್ನು ಕಲಿಸಿದೆ
ನರೇಂದ್ರ ಮೋದಿ, ಪ್ರಧಾನಿ

ಹಿಂದೂಗಳು ಹಿಂಸಾಚಾರ ಮಾಡುತ್ತಾರೆ, ದ್ವೇಷ ಹರಡುತ್ತಾರೆ... ಹೀಗೆ ಹೇಳಿ ರಾಹುಲ್ ಹಿಂದೂ ಗಳನ್ನು ಅವಮಾನಿಸಿದ್ದಾರೆ. ಅವರು ಕ್ಷಮೆಯಾಚಿಸಬೇಕು
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಆರ್‌ಎಸ್‌ಎಸ್ ವಿರುದ್ಧ ಖರ್ಗೆ ಟೀಕೆ

ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಚುನಾವಣಾ ಭಾಷಣಗಳನ್ನು ರಾಜ್ಯಸಭೆಯ ವಿರೋಧ ಪಕ್ಷದ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು. ಆಡಳಿತಾರೂಢ ಬಿಜೆಪಿಯ ಸೈದ್ಧಾಂತಿಕ ಮಾತೃಸಂಸ್ಥೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿರುದ್ಧ ವಾಗ್ದಾಳಿ ನಡೆಸಿದರು. ಖರ್ಗೆ ಅವರ ಬಹುತೇಕ ಟೀಕೆಗಳನ್ನು ಸಭಾಪತಿ ಜಗದೀಪ್ ಧನಕರ್ ಕಡತದಿಂದ ತೆಗೆಸಿದರು.

ಆರ್‌ಎಸ್‌ಎಸ್ ಅನ್ನು ಧನಕರ್ ಸಮರ್ಥಿಸಿಕೊಂಡರು. ಇದು ರಾಷ್ಟ್ರಕ್ಕಾಗಿ ಕೆಲಸ ಮಾಡುವ ಪ್ರಸಿದ್ಧ ಸಂಸ್ಥೆ ಎಂದು ಬಣ್ಣಿಸಿದರು. ಆರ್‌ಎಸ್‌ಎಸ್ ಹಾಗೂ ಅದರ ಸಿದ್ಧಾಂತದ ವಿರುದ್ಧ ಖರ್ಗೆ ಪದೇ ಪದೇ ಹೇಳಿಕೆ ನೀಡಿದ್ದಕ್ಕೆ ಧನಕರ್ ಆಕ್ಷೇಪಿಸಿದರು. ಬಿಜೆಪಿ ಸದಸ್ಯರೂ ಆಕ್ರೋಶ ವ್ಯಕ್ತಪಡಿಸಿದರು.

9ನೇ ಪುಟ ನೋಡಿ

ಅಗ್ನಿಪಥ ಜಟಾಪಟಿ

ಅಗ್ನಿಪಥ ಯೋಜನೆಗೆ ತಮ್ಮ ತೀವ್ರ ವಿರೋಧವನ್ನು ಪುನರುಚ್ಚರಿಸಿದ ವಿಪಕ್ಷ ನಾಯಕ, ‘ಇದು ಸೇನೆಯ ಯೋಜನೆ ಅಲ್ಲ. ಆದರೆ, ಇದು ಪ್ರಧಾನಿಯ ಯೋಜನೆ. ಕಾಂಗ್ರೆಸ್ ಸರ್ಕಾರ ಬಂದ ಕೂಡಲೇ ಈ ಯೋಜನೆಯನ್ನು ರದ್ದುಗೊಳಿಸಲಾಗುತ್ತದೆ’ ಎಂದರು. ‘ಸರ್ಕಾರವು ಅಗ್ನಿವೀರರನ್ನು ಬಳಸಿ-ಬಿಸಾಕುವ ಕಾರ್ಮಿಕರು ಎಂದು ಪರಿಗಣಿಸುತ್ತದೆ ಮತ್ತು ಅವರಿಗೆ ‘ಶಹೀದ್ (ಹುತಾತ್ಮ)’ ಸ್ಥಾನಮಾನವನ್ನೂ ನೀಡುವುದಿಲ್ಲ’ ಎಂದು ಹೇಳಿದರು.

9ನೇ ಪುಟ ನೋಡಿ

ರಾಹುಲ್ ಅವರು ಹಿಂದೂಗಳನ್ನು ಅವಮಾನಿಸಿಲ್ಲ. ಅವರು ಅದನ್ನು ಸ್ಪಷ್ಟವಾಗಿ ಹೇಳಿದರು. ಅವರು ಬಿಜೆಪಿ ಹಾಗೂ ಆ ಪಕ್ಷದ ನಾಯಕರ ಬಗ್ಗೆ ಮಾತನಾಡಿದರು
ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ರಾಹುಲ್ ಅವರು ತಮ್ಮ ಭಾಷಣದಲ್ಲಿ ಸುಳ್ಳು ಮತ್ತು ದ್ವೇಷವನ್ನು ಸಂಯೋಜಿಸಿದ್ದಾರೆ. ವಿಪಕ್ಷ ನಾಯಕರಾಗಿ ಅವರ ಮೊದಲ ದಿನದ ಅತ್ಯಂತ ಕೆಟ್ಟ ಪ್ರದರ್ಶನವಾಗಿದೆ.
ಜೆ.ಪಿ.ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಮೀನು....

ಮಂಗಳೂರಿನ ದಕ್ಕೆಯಲ್ಲಿ ಸೋಮವಾರ ಬೆಳಿಗ್ಗೆ ತುಂತುರು ಮಳೆಯಲ್ಲಿಯೇ ಮೀನಿನ ವ್ಯಾಪಾರ ನಡೆಯಿತು
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಹೊಸ ಕಾನೂನುಗಳಿಂದ ಪೊಲೀಸ್ ಆಳ್ವಿಕೆ: ರಾಜ್ಯದ ವಾದ

ಕೇಂದ್ರದ ಕಾನೂನುಗಳಿಗೆ ರಾಜ್ಯ ಸರ್ಕಾರದ ಸಡ್ಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳು ದೇಶದಾದ್ಯಂತ ಜಾರಿಯಾದ ಮೊದಲ ದಿನವೇ ರಾಜ್ಯದ ಕಾಂಗ್ರೆಸ್ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ. ಇದೇ ಜುಲೈ 15ರಿಂದ ಆರಂಭವಾಗುವ ವಿಧಾನ ಮಂಡಲ ಅಧಿವೇಶನದಲ್ಲೇ ಕೇಂದ್ರದ ಹೊಸ ಕಾನೂನುಗಳಿಗೆ ತಿದ್ದುಪಡಿ ತರುವುದಾಗಿ ಘೋಷಿಸಿದೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರಾಜ್ಯದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, ‘ಕೇಂದ್ರ ಸರ್ಕಾರವು ಜಾರಿಗೊಳಿಸಿರುವ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಕಾಯ್ದೆಗಳಲ್ಲಿ ಹಲವು ಲೋಪಗಳು ಉಳಿದುಕೊಂಡಿವೆ. ಈ ಮೂರು ಹೊಸ ಕಾನೂನುಗಳಿಂದಾಗಿ ದೇಶದಲ್ಲಿ ಪೊಲೀಸ್ ಆಳ್ವಿಕೆ ಆರಂಭವಾಗಲಿದೆ. ಇದು ಸ್ವಾತಂತ್ರ್ಯ ಚಳವಳಿಯ ಆಶಯಗಳು, ಧ್ಯೇಯಗಳು ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ. ಈ ಕಾನೂನುಗಳ ಜಾರಿಯಿಂದ ಮಾನವ ಹಕ್ಕುಗಳ ಉಲ್ಲಂಘನೆಗಳೂ ಅಧಿಕವಾಗಲಿವೆ’ ಎಂದರು.

8ನೇ ಪುಟ ನೋಡಿ

ತಿದ್ದುಪಡಿ, ಯಾವುದರಲ್ಲಿ ಎಷ್ಟು?

ಭಾರತೀಯ ನ್ಯಾಯ ಸಂಹಿತೆ	ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ	ಭಾರತೀಯ ಸಾಕ್ಷ್ಯ ಅಧಿನಿಯಮ	ಒಟ್ಟು ತಿದ್ದುಪಡಿ
9	9	5	23



ತಿದ್ದುಪಡಿಗೆ ರಾಜ್ಯಕ್ಕೆ ಅಧಿಕಾರವಿದೆ. ಸಂವಿಧಾನದ ಪರಿಚ್ಛೇದ 7ರ 3ನೇ ಪಟ್ಟಿಯಲ್ಲಿ ದತ್ತವಾದ ಅಧಿಕಾರ ಬಳಸಿ, ಮೂರು ಕಾನೂನುಗಳಿಗೂ ತಿದ್ದುಪಡಿ ತರಲಾಗುತ್ತಿದೆ
ಎಚ್.ಕೆ. ಪಾಟೀಲ, ಕಾನೂನು ಸಚಿವ

‘ನೀಟ್’ ಮರು ಪರೀಕ್ಷೆ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ‘ನೀಟ್– ಯುಜಿ’ ಮರು ಪರೀಕ್ಷೆಯ ಫಲಿತಾಂಶವನ್ನು ಸೋಮವಾರ ಪ್ರಕಟಿಸಿದೆ. ಅದರ ಜತೆಯಲ್ಲಿಯೇ ಪರಿಷ್ಕೃತ ರ್‍ಯಾಂಕಿಂಗ್ ಪಟ್ಟಿಯನ್ನೂ ಪ್ರಕಟಿಸಿದೆ.

ದೇಶದ ಏಳು ಪರೀಕ್ಷಾ ಕೇಂದ್ರಗಳಲ್ಲಿ ಜೂನ್ 23ರಂದು ಮರು ಪರೀಕ್ಷೆ ನಡೆಸಲಾಗಿತ್ತು. ಒಟ್ಟು 1,563 ಅಭ್ಯರ್ಥಿಗಳ ಪೈಕಿ 813 (ಶೇ 52) ಅಭ್ಯರ್ಥಿಗಳು ಮಾತ್ರ ಮರು ಪರೀಕ್ಷೆಗೆ ಹಾಜರಾಗಿದ್ದರು. ಉಳಿದ ಅಭ್ಯರ್ಥಿಗಳು ಕೃಪಾಂಕ ಬಿಟ್ಟು ತಮಗೆ ಬಂದಿರುವ ನೈಜ ಅಂಕಗಳನ್ನು ಆರಿಸಿಕೊಂಡಿದ್ದರು.

ಮೇ 5ರಂದು ನಡೆದಿದ್ದ ಪರೀಕ್ಷೆಯ ಫಲಿತಾಂಶ ಜೂನ್ 4ರಂದು ಪ್ರಕಟವಾಗಿತ್ತು. 67 ಅಭ್ಯರ್ಥಿಗಳು ಅಗ್ರಸ್ಥಾನ ಹಂಚಿಕೊಂಡಿದ್ದರು. ಪರೀಕ್ಷಾ ಸಮಯ ನಷ್ಟವನ್ನು ಸರಿದೂಗಿಸಲು ನೀಡಿದ ಕೃಪಾಂಕದಿಂದ ಒಂದೇ ಕೇಂದ್ರದ 6 ಅಭ್ಯರ್ಥಿಗಳು ಗರಿಷ್ಠ ಅಂಕಗಳಿಸಿದ್ದರು. ಇದನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟ್ ಮೊರೆ ಹೋದರು. ಆಗ ಕೇಂದ್ರವು ಕೃಪಾಂಕವನ್ನು ರದ್ದುಗೊಳಿಸಿ, ಮರು ಪರೀಕ್ಷೆಯ ಆಯ್ಕೆಯನ್ನು ಅಭ್ಯರ್ಥಿಗಳಿಗೆ ನೀಡಿತ್ತು. ಮರು ಪರೀಕ್ಷೆ ಬರೆದ ಯಾರೊಬ್ಬರೂ ಗರಿಷ್ಠ (720) ಅಂಕಗಳನ್ನು ಗಳಿಸಿಲ್ಲ. ಹೀಗಾಗಿ ಅಗ್ರ ಶ್ರೇಯಾಂಕಿತರ ಸಂಖ್ಯೆ 67ರಿಂದ 61ಕ್ಕೆ ಇಳಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ ಎಂದು ಹಿಂದುಸ್ತಾನ್ ಟೈಮ್ಸ್ ವರದಿ ಮಾಡಿದೆ.

ಇನ್ನಷ್ಟು ಸುದ್ದಿಗಳು 9

ವಿನಯ-ಬೈರತಿ ‘ಮಂಡಳಿ’ ರಗಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮತ್ತು ಅವರ ಇಲಾಖೆ ಅಧೀನದಲ್ಲಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರೂ ಆಗಿರುವ ಶಾಸಕ ವಿನಯ ಕುಲಕರ್ಣಿ ನಡುವಿನ ತಿಕ್ಕಾಟ ಮತ್ತಷ್ಟು ತಾರಕಕ್ಕೇರಿದೆ.

‘ಮಂಡಳಿಯಲ್ಲಿ ದುರಾಡಳಿತ ನಡೆಯುತ್ತಿದ್ದು, ಇದನ್ನು ನಾನು ಸಹಿಸುವುದಿಲ್ಲ. ಅಲ್ಲಿನ ವ್ಯವಸ್ಥೆಯನ್ನು ಪರಿಶೀಲಿಸುವ ಹಕ್ಕು ಅಧ್ಯಕ್ಷನಿಗೆ ಇಲ್ಲದ ರೀತಿಯಲ್ಲಿ ದುರಾಡಳಿತ ನಡೆಯುತ್ತಿದೆ’ ಎಂದು ವಿನಯ ಕುಲಕರ್ಣಿ ಆರೋಪಿಸಿದ್ದಾರೆ.

ತಮ್ಮ ಬೆಂಬಲಿಗ ಗುತ್ತಿಗೆದಾರರ ಕಂಪನಿಯನ್ನು ಬೈರತಿ ಸುರೇಶ್ ಸೂಚನೆಯಂತೆ ಕಪ್ಪುಪಟ್ಟಿಗೆ ಸೇರಿಸಲಾಗಿದೆ ಎನ್ನುವುದು ವಿನಯ ಕುಲಕರ್ಣಿ ಆರೋಪ. ಈ ಕಾರಣಕ್ಕೆ ಅಸಮಾಧಾನಗೊಂಡಿರುವ ಅವರು, ತಮ್ಮ ಬೆಂಬಲಿಗರ ಜೊತೆ ದೆಹಲಿಗೆ ತೆರಳಿ ಪಕ್ಷದ ವರಿಷ್ಠರಿಗೆ ದೂರು ನೀಡಿದ್ದಾರೆ. ಇದರಿಂದಾಗಿ ಇಬ್ಬರ ನಡುವೆ ಸಂಘರ್ಷದ ವಾತಾವರಣ ಸೃಷ್ಟಿಯಾಗಿದ್ದು, ಮಾತಿನ ಜಟಾಪಟಿಯೂ ನಡೆದಿದೆ ಎಂದು ಗೊತ್ತಾಗಿದೆ.

ಈ ಕುರಿತು ಶುಕ್ರವಾರ (ಜೂನ್ 29) ಪ್ರತಿಕ್ರಿಯಿಸಿದ್ದ ಬೈರತಿ ಸುರೇಶ್, ‘ವಿನಯ ಕುಲಕರ್ಣಿ ಜತೆ ನನಗೆ ಮನಸ್ತಾಪ ಇಲ್ಲ. ನಾವು ಜಗಳವನ್ನೂ ಆಡಿಕೊಂಡಿಲ್ಲ. ನನ್ನ ವಿರುದ್ಧ ದೂರು ಕೊಟ್ಟಿದ್ದರೆ ಅದರ ಪ್ರತಿ ಕೊಡಿ. ಆ ಬಳಿಕ ನಾನು ಮಾತನಾಡುತ್ತೇನೆ’ ಎಂದಿದ್ದರು.

ವಿನಯ ಕುಲಕರ್ಣಿ ಆರೋಪದ ಬಗ್ಗೆ ಕೇಳಿದಾಗ, ‘ಯಾರೇ ಕಳ್ಳರಿದ್ದರೂ ಅವರನ್ನು ಕಪ್ಪುಪಟ್ಟಿಗೆ ಸೇರಿಸುತ್ತೇನೆ. ಈವರೆಗೆ ಯಾರನ್ನೂ ಕಪ್ಪುಪಟ್ಟಿಗೆ ಸೇರಿಸಿಲ್ಲ. ತಪ್ಪು ಮಾಡಿದವರನ್ನು ಜೈಲಿಗೂ ಕಳುಹಿಸುವೆ. ಯಾವುದೇ ಹಿಂಜರಿಕೆಯೂ ಇಲ್ಲ’ ಎಂದೂ ಹೇಳಿದ್ದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ವಿನಯ ಕುಲಕರ್ಣಿ, ‘ವಾಲ್ಮೀಕಿ ಅಭಿವೃದ್ಧಿ ನಿಗಮದ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಅದಕ್ಕಿಂತ ಕೆಟ್ಟ ವ್ಯವಸ್ಥೆ ಆಗುವುದು ಬೇಡವೆಂದು ನಾನು ಪತ್ರದ ಮೂಲಕ ತಿಳಿಸಿದ್ದೇನೆ. ಅಗತ್ಯಬಿದ್ದರೆ ದಾಖಲೆಗಳನ್ನೂ ಕೊಡುತ್ತೇನೆ. ಎಲ್ಲ ವಿಷಯಗಳನ್ನು ಬಹಿರಂಗವಾಗಿಯೇ ಹೇಳುತ್ತೇನೆ. ಗೌರವ ಇಲ್ಲದ ಕಡೆ ನಾವು ಯಾಕೆ ಇರಬೇಕು’ ಎಂದು ಅವರು ಪ್ರಶ್ನಿಸಿದರು.

‘ಎಲ್ಲ ನಿಗಮ-ಮಂಡಳಿಗಳ ಬಗ್ಗೆ ತನಿಖೆ ಆಗಬೇಕು. ಯಾವ ಗುತ್ತಿಗೆದಾರ ಕಂಪನಿಗಳು ಅಕ್ರಮ ಮಾಡಿವೆಯೊ ಅಂಥವುಗಳನ್ನು ಕಪ್ಪುಪಟ್ಟಿಗೆ ಸೇರಿಸಲಿ. ತನಿಖೆ ಮಾಡುವಂತೆ ನಾನು ಪತ್ರ ಕೊಟ್ಟು ಎರಡೂವರೆ ತಿಂಗಳು ಆಗಿದೆ. ಅದರಲ್ಲಿ 10–15 ಗುತ್ತಿಗೆದಾರ ಕಂಪನಿಗಳಿವೆ. ಸಚಿವರಿಗೆ ಬೇಡವಾದ ಕಂಪನಿಗಳನ್ನು ಕಪ್ಪುಪಟ್ಟಿಗೆ ಸೇರಿಸುವುದು, ಸಚಿವರ ಪರವಾದ ಕಂಪನಿಗಳಿಗೆ ಗುತ್ತಿಗೆ ನೀಡುವುದು ಬೇಡ’ ಎಂದರು.

‘ಈ ವಿಷಯವನ್ನು ಮುಖ್ಯಮಂತ್ರಿಯ ಗಮನಕ್ಕೂ ಹಲವು ಬಾರಿ ತಂದಿದ್ದೇನೆ. ಇಂತಹದನ್ನು ನಾನು ಸಹಿಸುವುದಿಲ್ಲ’ ಎಂದೂ ಹೇಳಿದರು.

ಬೈರತಿ ಸುರೇಶ್

ವಿನಯ ಕುಲಕರ್ಣಿ

ನಾನು ದೆಹಲಿಗೆ ಹೋಗಿದ್ದು ನಿಜ. ಪಕ್ಷದ ಮುಖಂಡರಿಗೆ ಏನು ಹೇಳಬೇಕೊ ಅದನ್ನು ಹೇಳಿದ್ದೇನೆ. ನನಗೆ ಯಾವ ಭಯವೂ ಇಲ್ಲ. ರಾಜೀನಾಮೆ ಕೊಡುವುದಕ್ಕೂ ಹಿಂದೆಮುಂದೆ ನೋಡುವುದಿಲ್ಲ
ವಿನಯ ಕುಲಕರ್ಣಿ, ಅಧ್ಯಕ್ಷ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯಾಂಶಗಳು
- ಯಾರನ್ನೂ ಕಪ್ಪುಪಟ್ಟಿಗೆ ಸೇರಿಸಿಲ್ಲ–ಬೈರತಿ
- ಪಕ್ಷದ ವರಿಷ್ಠರಿಗೆ ದೂರು ನೀಡಿದ ವಿನಯ್‌ಕುಲಕರ್ಣಿ
- ಅಗತ್ಯಬಿದ್ದರೆ ದಾಖಲೆಗಳನ್ನು ನೀಡುತ್ತೇನೆ

ವಾಣಿಜ್ಯ ಬಳಕೆ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸತತ ನಾಲ್ಕನೇ ತಿಂಗಳೂ ವಾಣಿಜ್ಯ ಸಿಲಿಂಡರ್ ದರವು ಇಳಿಕೆಯಾಗಿದ್ದರೆ, ವಿಮಾನಗಳಲ್ಲಿ ಬಳಸುವ ಇಂಧನ ಬೆಲೆಯಲ್ಲಿ ಏರಿಕೆಯಾಗಿದೆ.

ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಅಡುಗೆ ಸಿಲಿಂಡರ್ ದರವನ್ನು ಸೋಮವಾರ ₹30 ಕಡಿತಗೊಳಿಸಲಾ-ಗಿದೆ. ಈಗ ದರವು ₹1,646 ಆಗಿದೆ. ಏಪ್ರಿಲ್ 1ರಂದು ₹30.5 ಮತ್ತು ಮೇ 1ರಂದು ₹19, ಜೂನ್ 1ರಂದು ₹69 ಬೆಲೆ ಇಳಿಕೆಯಾಗಿತ್ತು.

ಒಳಪುಟಗಳಲ್ಲಿ

ಕೊಡಗು:ವಿವಿಧೆಡೆ ಭಾರಿ ಮಳೆ 5

‘ನನ್ನನ್ನು ಬಗ್ಗಿಸಲು ಒಬ್ಬಿಬ್ಬರ ಯತ್ನ’ 2A

ಉತ್ತರ ಕನ್ನಡದ ಥ್ರೋಡೌನ್ ಸ್ಪೆಷಲಿಸ್ಟ್ 10

‘ರಾಜ್ಯದ ತೆರಿಗೆ ಪಾಲು ಈಗಲಾದರೂ ಸಿಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ಅತಿ ಹೆಚ್ಚು ತೆರಿಗೆ ನೀಡುವ ರಾಜ್ಯಗಳಿಗೆ ನ್ಯಾಯಯುತ ತೆರಿಗೆ ಪಾಲು ನೀಡುತ್ತಿಲ್ಲ. 16ನೇ ಹಣಕಾಸು ಆಯೋಗದ ಮೂಲಕವಾದರೂ ಅನ್ಯಾಯ ಸರಿಪಡಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ವಾಣಿಜ್ಯ ತೆರಿಗೆ ಇಲಾಖೆ ಸೋಮವಾರ ವಿಧಾನ ಸೌಧದಲ್ಲಿ ಆಯೋಜಿಸಿದ್ದ ಜಿಎಸ್‌ಟಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಹಾಗೂ 2024-25ನೇ ಸಾಲಿನ ಮುಖ್ಯಮಂತ್ರಿ ಸೇವಾ ಪ್ರಶಸ್ತಿಗಳನ್ನು 65 ಅಧಿಕಾರಿಗಳಿಗೆ ಪ್ರದಾನ ಮಾಡಿ ಮಾತನಾಡಿದರು.

‘15ನೇ ಹಣಕಾಸು ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ಶೇ 1.7ರಷ್ಟು ತೆರಿಗೆ ಕಡಿಮೆಯಾಗಿದೆ. ತೆರಿಗೆ ಹೆಚ್ಚು ಸಂಗ್ರಹ ಮಾಡಿದರೆ ರಾಜ್ಯದ ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಮಾಡಲು ಸಾಧ್ಯ’ ಎಂದು ಹೇಳಿದರು.

’ಗ್ಯಾರಂಟಿ ಯೋಜನೆಗಳಿಗೆ ₹60 ಸಾವಿರ ಕೋಟಿ ಅಗತ್ಯವಿದೆ. ಸಮಾಜದಲ್ಲಿ ಸಮಾನತೆ ದೊರಕಲು ಎಲ್ಲರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬರಬೇಕು. ಎಲ್ಲ ಧರ್ಮ, ಜಾತಿಗಳ ಬಡವರಿಗೆ ಶಕ್ತಿ ತುಂಬಬೇಕಾದರೆ ಸಂಪನ್ಮೂಲ ಹೆಚ್ಚಳ ಮಾಡಬೇಕು’ ಎಂದರು.

ತೆರಿಗೆ ಸೋರಿಕೆ ತಡೆಗೆ ವಾಣಿಜ್ಯ ತೆರಿಗೆ ಇಲಾಖೆ ಪ್ರಯತ್ನ ಮಾಡಿದೆ. 2022-23 ನೇ ಸಾಲಿನಲ್ಲಿ ₹1,22,821 ಕೋಟಿ ತೆರಿಗೆ ಸಂಗ್ರಹವಾಗಿದೆ. 2023-24 ನೇ ಸಾಲಿನಲ್ಲಿ ₹1,45,266 ಕೋಟಿ ಸಂಗ್ರಹಿಸಿ ವಾಣಿಜ್ಯ ತೆರಿಗೆ ಇಲಾಖೆ ಉತ್ತಮ ಕೆಲಸ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ

ಕುರುಬ ಅಧಿಕಾರಿಗಳಿಗಾಗಿ ಅನ್ಯರ ಎತ್ತಂಗಡಿಗೆ ಅಸಮಾಧಾನ

ಅಬಕಾರಿ: ‘ಜಾತಿ ಪ್ರಭಾವ’ ಭಾರಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜಧಾನಿ ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಯ ಪ್ರಮುಖ ಹುದ್ದೆಗಳನ್ನುಕುರುಬಸಮುದಾಯದಅಧಿಕಾರಿಗಳಿಗೇ ನೀಡಲು ಅನ್ಯ ಜಾತಿಯವರನ್ನು ಅಕಾಲಿಕವಾಗಿ ವರ್ಗಾವಣೆ ಮಾಡುತ್ತಿರುವುದು ಇಲಾಖೆಯೊಳಗೆ ಆಕ್ರೋಶಕ್ಕೆ ಕಾರಣವಾಗಿದೆ. ವರ್ಗಾ-ವಣೆಯಲ್ಲಿ ‘ಜಾತಿ ಪ್ರಭಾವ’ ಮೇಲಾಟ ನಡೆಸುತ್ತಿರುವ ಕುರಿತು ಕೆಲವು ಅಧಿಕಾರಿಗಳು ಮುಖ್ಯಮಂತ್ರಿ ಕಚೇರಿ ಮತ್ತು ರಾಜಭವನಕ್ಕೂ ದೂರಿತ್ತಿದ್ದಾರೆ.

ಬೆಂಗಳೂರು ನಗರದಲ್ಲಿ ಎಂಟು ಅಬಕಾರಿ ಜಿಲ್ಲೆಗಳಿವೆ. ಇಲ್ಲಿರುವ ಎಂಟು ಅಬಕಾರಿ ಉಪ ಆಯುಕ್ತರ ಹುದ್ದೆಗಳ ಪೈಕಿ ನಾಲ್ಕರಲ್ಲಿ ಕುರುಬ ಸಮುದಾಯದ ಅಧಿಕಾರಿಗಳೇ ಇದ್ದಾರೆ. ಈಗ ಅದೇ ಸಮುದಾಯದ ಇನ್ನೂ ಕೆಲವರಿಗೆ ರಾಜಧಾನಿಯಲ್ಲೇ ಉಪ ಆಯುಕ್ತರ ಹುದ್ದೆ ನೀಡಲು ಭಾರಿ ಕಸರತ್ತು ನಡೆಯುತ್ತಿದೆ.

ನಗರದ ಮೇಲೆ ಹಿಡಿತ ಹೊಂದಿರುವ ಪ್ರಭಾವಿ ಸಚಿವರೊಬ್ಬರು, ಇಲಾಖೆಯ ಮೇಲೆ ಹಿಡಿತ ಸಾಧಿಸಿರುವ ದಲ್ಲಾಳಿಗಳು ಮತ್ತು ಕೆಲವು ಅಧಿಕಾರಿಗಳು ಕುರುಬ ಸಮುದಾಯದ ಅಧಿಕಾರಿಗಳಿಗಾಗಿ ಅನ್ಯರ ಸ್ಥಾನ ಪಲ್ಲಟಕ್ಕೆ ತಯಾರಿ ಆರಂಭಿಸಿರುವುದು ಇಲಾಖೆಯೊಳಗೆ ಅಸಮಾಧಾನದ ಕಿಡಿ ಹೊತ್ತಿಸಿದೆ. ಮುಖ್ಯಮಂತ್ರಿಯವರ ಕಚೇರಿ ಮತ್ತು ರಾಜ್ಯಪಾಲರಿಗೆ ಹೋದ ಅನಾಮಧೇಯ ಪತ್ರವು ಅಬಕಾರಿ ಇಲಾಖೆಯ ‘ಜಾತಿ ರಾಜಕಾರಣದ ಕಂಪನ’ವನ್ನು ಬಹಿರಂಗಪಡಿಸಿದೆ.

2Aನೇ ಪುಟ ನೋಡಿ

ಬೆಂಗಳೂರಿನಲ್ಲಿರುವ ಅಬಕಾರಿ ಉಪ ಆಯುಕ್ತರು

ವಿಭಾಗ	ಅಧಿಕಾರಿ ಹೆಸರು	ಜಾತಿ
ಬಿಯುಡಿ-1	ಸ್ಯಾಮ್ಯುಯೆಲ್ ಮೋಸೆಸ್	ಕ್ರೈಸ್ತ
ಬಿಯುಡಿ-2	ಅಜಿತ್ ಕುಮಾರ್	ಬ್ರಾಹ್ಮಣ
ಬಿಯುಡಿ-3	ಮುರಳಿ ಕೆ.ಎಸ್.	ಒಕ್ಕಲಿಗ
ಬಿಯುಡಿ-4	ರವೀಂದ್ರ	ಕುರುಬ
ಬಿಯುಡಿ-5	ವೀರಣ್ಣ ಬಾಗೇವಾಡಿ	ಕುರುಬ
ಬಿಯುಡಿ-6	ರಂಗಪ್ಪ	ಕುರುಬ
ಬಿಯುಡಿ-7	ಶಶಿಕಲಾ ಒಡೆಯರ್	ಕುರುಬ
ಬಿಯುಡಿ-8	ಜಗದೀಶ್ ನಾಯಕ್	ಈಡಿಗ

ಬಿಯುಡಿ: ಬೆಂಗಳೂರು ನಗರ ಅಬಕಾರಿ ಜಿಲ್ಲೆ

ಮಂಗಳೂರಿನ ಮಧ್ಯವರ್ತಿಯ ‘ರಹದಾರಿ’

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಅಬಕಾರಿ ಉಪ ಆಯುಕ್ತರ ಎಂಟು ಹುದ್ದೆಗಳ ಜತೆಗೆ ಅಧೀಕ್ಷಕರ ಎಂಟು, 16 ಡಿವೈಎಸ್‌ಪಿ ಮತ್ತು 54 ಇನ್‌ಸ್ಪೆಕ್ಟರ್ ಹುದ್ದೆಗಳಿವೆ. ಈ ಅಧಿಕಾರಿಗಳ ವರ್ಗಾವಣೆಗೆ ಮಂಗಳೂರಿನ ಮಧ್ಯವರ್ತಿಯೊಬ್ಬರು ‘ರಹದಾರಿ’ ಒದಗಿಸುವ ಕೆಲಸ ಮಾಡುತ್ತಿರುವುದನ್ನು ಅಧಿಕಾರಿಗಳೇ ಬಹಿರಂಗಪಡಿಸಿದ್ದಾರೆ.

‘ಈ ಹುದ್ದೆಗಳ ವರ್ಗಾವಣೆಗೆ ಇಲಾಖೆಯ ಹಿರಿಯ ಅಧಿಕಾರಿ-ಯೊಬ್ಬರ ಮೂಲಕ ಮಂಗಳೂರಿನ ವ್ಯಕ್ತಿಯೊಬ್ಬರು ಮಧ್ಯವರ್ತಿಯಾಗಿ ‘ವ್ಯವಹಾರ’ದ ಪ್ರಸ್ತಾವ ಮುಂದಿಡುತ್ತಿದ್ದಾರೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ವರ್ಗಾವಣೆಗೆ ದುಪ್ಪಟ್ಟು ‘ದರ’ ಪ್ರಸ್ತಾಪಿ-ಸುತ್ತಿದ್ದಾರೆ’ ಎಂದು ಅಧಿಕಾರಿಗಳು ಆರೋಪಿಸುತ್ತಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪೌರ ಕಾರ್ಮಿಕರಿಗೆ ವಾರಕ್ಕೊಂದು ದಿನ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ವಾರಕ್ಕೆ ಒಂದು ದಿನ ಪೂರ್ತಿ ರಜೆ ನೀಡಿ ನಗರಾಭಿವೃದ್ಧಿ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಈವರೆಗೆ ಪೌರಕಾರ್ಮಿಕರಿಗೆ ವಾರದಲ್ಲಿ ಎರಡು ಬಾರಿ ಅರ್ಧ ದಿನದ ರಜೆ ನೀಡಲಾಗುತ್ತಿತ್ತು. ಈಗ ನಿತ್ಯದ ಕೆಲಸಕ್ಕೆ ತೊಂದರೆ ಆಗದಂತೆ ವ್ಯವಸ್ಥೆ ಮಾಡಿಕೊಂಡು ಇಡೀ ದಿನದ ರಜೆ ನೀಡಲು ಆದೇಶಿಸಲಾಗಿದೆ.

ಕೆಎಸ್‌ಆರ್‌ಟಿಸಿಯಲ್ಲಿ ಇರುವಂತೆ ₹10 ಲಕ್ಷಕ್ಕೆ ಹೆಚ್ಚಿಸಲು ಸಾರಿಗೆ ಸಚಿವರ ಸಲಹೆ

‘ಬಿಎಂಟಿಸಿ ಪ್ರಯಾಣಿಕರಿಗೆ ಹೆಚ್ಚಿನ ವಿಮೆ ರಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸ್ ಅಪಘಾತಗಳಲ್ಲಿ ಪ್ರಯಾಣಿಕರು ಮೃತಪಟ್ಟ ಸಂದರ್ಭದಲ್ಲಿ ₹ 10 ಲಕ್ಷ ವಿಮೆ ಒದಗಿಸುವ ಯೋಜನೆ ಕೆಎಸ್‌ಆರ್‌ಟಿಸಿಯಲ್ಲಿದೆ. ಆ ಸೌಲಭ್ಯವನ್ನು ಬಿಎಂಟಿಸಿ ಪ್ರಯಾಣಿಕರಿಗೂ ವಿಸ್ತರಿಸಬೇಕು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ಸಲಹೆ ನೀಡಿದರು.

58 ವರ್ಷ ಸೇವೆ ಪೂರ್ಣಗೊಂಡ ಬಿಎಂಟಿಸಿ ನೌಕರರಿಗೆ ‘ಪ್ರಯಾಸ್’ ಯೋಜನೆಯಡಿ ಪಿಂಚಣಿ ಸೌಲಭ್ಯದ ಆದೇಶ ಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

‘ಬಿಎಂಟಿಸಿ ಬಸ್ ಅಪಘಾತದಲ್ಲಿ ಪ್ರಯಾಣಿಕರು ಮೃತಪಟ್ಟರೆ ಸದ್ಯ ₹ 1 ಲಕ್ಷ ನೀಡಲಾಗುತ್ತಿದೆ. ವಿಮೆ ಮೊತ್ತವನ್ನು ₹ 10 ಲಕ್ಷಕ್ಕೆ ಹೆಚ್ಚಿಸಬೇಕು’ ಎಂದು ಹೇಳಿದರು.

ಮುಖ್ಯಾಂಶಗಳು

- ಸೇವಾವಧಿಯಲ್ಲಿ ಮೃತಪಟ್ಟಲ್ಲಿ ಕುಟುಂಬಕ್ಕೆ ಹೆಚ್ಚಿನ ಭದ್ರತೆ ಅಗತ್ಯ
- ಪ್ರಯಾಸ್ ಯೋಜನೆಯಡಿ ನೌಕರರಿಗೆ ತ್ವರಿತವಾಗಿ ಪಿಂಚಣಿ ಆದೇಶ
- ಪ್ರಯಾಸ್ ಸದ್ಬಳಕೆಗೆ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಸಲಹೆ

‘ನೌಕರರು ಕರ್ತವ್ಯದಲ್ಲಿದ್ದಾಗ ಮೃತಪಟ್ಟರೆ ₹ 1 ಕೋಟಿ ವಿಮೆ ಸಿಗುವ ಯೋಜನೆ ಇದೆ. ಬೇರೆ ಕಾರಣಗಳಿಂದ ಮೃತಪಟ್ಟರೆ ₹ 10 ಲಕ್ಷ ನೀಡಲಾಗುತ್ತಿದೆ. ಇದರಿಂದ ನೌಕರರನ್ನು ಕಳೆದುಕೊಂಡು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದನ್ನು ತಪ್ಪಲಿದೆ’ ಎಂದು ಹೇಳಿದರು.

ನಗರದಲ್ಲಿ ಸೋಮವಾರ ಬಿಎಂಟಿಸಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಪ್ರಯಾಸ್’ ಯೋಜನೆಯಡಿ ನೌಕರರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪಿಂಚಣಿ ಪಾವತಿ ಆದೇಶ ಪತ್ರ ವಿತರಣೆ ಮಾಡಿದರು —ಪ್ರಜಾವಾಣಿ ಚಿತ್ರ

ಪ್ರಯಾಸ ತಪ್ಪಿಸಿದ ಪ್ರಯಾಸ್: ‘ನೌಕರರು ನಿವೃತ್ತಿ ಬಳಿಕ ಪಿಂಚಣಿಗಾಗಿ ಅಲೆದಾಡುವುದನ್ನು ತಪ್ಪಿಸಲು ಭವಿಷ್ಯ ನಿಧಿ ಕಚೇರಿಯ ‘ಪ್ರಯಾಸ್’ ಯೋಜನೆ ಬಳಸಿಕೊಂಡು ನಿವೃತ್ತಿಯಾದ ಕೂಡಲೇ ಪಿಂಚಣಿ ಮೊತ್ತ ಸಿಗುವಂತೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧಿಕಾರಿಗಳು ಮಾಡಿದ್ದಾರೆ ಎಂದರು.

‘ಮೂರು ವರ್ಷದಲ್ಲಿ ನಿವೃತ್ತರಾದ 160 ನೌಕರರು ಮೊದಲೇ ದಾಖಲೆಗಳನ್ನು ಒದಗಿಸಿ, ಈ ಸೌಲಭ್ಯದ ಸದ್ಬಳಕೆ ಮಾಡಿಕೊಂಡಿದ್ದಾರೆ. ಈಗ ನೂರಕ್ಕೂ ಅಧಿಕ ನೌಕರರಿಗೆ ಪಿಂಚಣಿ ಆದೇಶ ನೀಡಲಾಗುತ್ತಿದೆ’ ಎಂದರು.

ಪ್ರಾದೇಶಿಕ ಭವಿಷ್ಯನಿಧಿ ಆಯುಕ್ತೆ ಟಿ.ಇಂದಿರಾ, ‘ಪ್ರಯಾಸ್ ಯೋಜನೆಯನ್ನು ಬಹುತೇಕ ಇಲಾಖೆಗಳಲ್ಲಿ ಬಳಸಿಕೊಳ್ಳುತ್ತಿಲ್ಲ. ನೌಕರರು ನಿವೃತ್ತಿ ಬಳಿಕ ನಮ್ಮ ಕಚೇರಿಗೆ ಅಲೆಯುವುದು ತಪ್ಪಿಲ್ಲ. ಬಿಎಂಟಿಸಿ ಮಾತ್ರ ಪ್ರಯಾಸ್ ಯೋಜನೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದೆ’ ಎಂದು ಶ್ಲಾಘಿಸಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್., ನಿರ್ದೇಶಕಿ (ಮಾಹಿತಿ ತಂತ್ರಜ್ಞಾನ) ಶಿಲ್ಪಾ ಎಂ., ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತಿ) ನಂದಿನಿದೇವಿ ಕೆ. ಭಾಗವಹಿಸಿದ್ದರು.

ಕಾನ್‌ಸ್ಟೆಬಲ್ ಶವಪತ್ತೆ: ಆತ್ಮಹತ್ಯೆ?

ಪ್ರಜಾವಾಣಿ ವಾರ್ತೆ

ಶಿವರಾಜ್

ಬೆಂಗಳೂರು: ನಗರದ ಜ್ಞಾನಭಾರತಿ ಆವರಣದ ತೆರೆದ ಬಾವಿಯಲ್ಲಿ ಕಾನ್‌ಸ್ಟೆಬಲ್ ಒಬ್ಬರ ಶವ ಪತ್ತೆ ಆಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ. ಮಡಿವಾಳ ಠಾಣೆಯ ಕಾನ್‌ಸ್ಟೆಬಲ್ ಶಿವರಾಜ್ (30) ಮೃತರು.

ಶಿವರಾಜ್ ಅವರು ನಾಪತ್ತೆ ಆಗಿದ್ದಾರೆ ಎಂದು ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಜೂನ್ 25ರಂದು ಪ್ರಕರಣ ದಾಖಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮೊಬೈಲ್ ಲೊಕೇಶನ್ ಆಧರಿಸಿ ಪರಿಶೀಲಿಸಿದಾಗ ಪೊಲೀಸರಿಗೆ ಜ್ಞಾನ ಭಾರತಿ ಆವರಣದಲ್ಲಿ ಕೊನೆಯದಾಗಿ ಲೊಕೇಶನ್ ಪತ್ತೆಯಾಗಿತ್ತು. ಸುತ್ತಮುತ್ತ ಹುಡುಕಾಟ ನಡೆಸಿದಾಗ ಸೋಮವಾರ ಶವ ಪತ್ತೆಯಾಗಿದೆ

ಶವದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ರಾಯಚೂರು ಜಿಲ್ಲೆ ದೇವದುರ್ಗದ ಹೊನ್ನಕಾಟಮಳ್ಳಿ ಗ್ರಾಮದ ಅವರ 2020ರಲ್ಲಿ ಸೇವೆಗೆ ಸೇರಿದ್ದರು. ಇವರ ಸಹೋದರ ದೂರು ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಬೆದರಿಕೆಯಿಂದ ಆತ್ಮಹತ್ಯೆ?: ‘ನಮ್ಮ ಅಣ್ಣ ಗೌರಪ್ಪ ಅವರ ಪುತ್ರ ಗೌರೀಶ್‌ಗೆ ದಾವಣಗೆರೆಯ ವಾಣಿ ಎಂಬುವರ ಜತೆಗೆ ವಿವಾಹವಾಗಿತ್ತು. ಕೌಟುಂಬಿಕ ಗಲಾಟೆ ಹಿನ್ನೆಲೆಯಲ್ಲಿ ಎಲ್ಲ ಸಹೋದರರ ವಿರುದ್ಧ ದಾವಣಗೆರೆಯ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಕಾಯ್ದೆ ಅಡಿ ದೂರು ನೀಡಿದ್ದರು. ಅದಾದ ಮೇಲೆ ಶಿವರಾಜ್ ಅವರಿಗೆ ವಾಣಿ ಕರೆ ಮಾಡಿ ಬೆದರಿಕೆ ಹಾಕುತ್ತಿದ್ದರು. ಇದರಿಂದ ಶಿವರಾಜ್ ನೊಂದಿದ್ದರು’ ಎಂದು ಮೃತರ ಸಹೋದರ ದೂರಿನಲ್ಲಿ ತಿಳಿಸಿದ್ದಾರೆ.

‘ಶಿವರಾಜ್ ಉತ್ತರಹಳ್ಳಿಯಲ್ಲಿ ನೆಲೆಸಿದ್ದರು. ಜೂನ್ 25ರಂದು ಕೆಲಸಕ್ಕೆ ಹೋಗಿದ್ದು ಮನೆಗೆ ಮರಳಿಲ್ಲ. ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಹುಡುಕಿದರೂ ಸುಳಿವು ಸಿಕ್ಕಿರಲಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಆ/ಗುನಿ) ವಿಭಾಗ, ದಕ್ಷಿಣ ವಲಯ, ಕೊಠಡಿ ಸಂಖ್ಯೆ. 101, ಅನೆಕ್ಸ್–3 ಕಟ್ಟಡ, ಬೃಬೆಂಮಪಾ ನ ರಾ ಚೌಕ, ಬೆಂಗಳೂರು–02.

ಸಂಖ್ಯೆ: ಕಾಅ(ಗುಆ/ಗುನಿ)/ದಕ್ಷಿಣ/ಟೆಂಡರ್/22/24–25 ದಿನಾಂಕ: 01.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ) ಗುಣಮಟ್ಟ ಆಶ್ವಾಸನೆ/ಗುಣಮಟ್ಟ ನಿಯಂತ್ರಣ ವಿಭಾಗದ ಕಾಯಪಾಲಕ ಅಭಿಯಂತರರು ಗುಆ/ಗುನಿ, ದಕ್ಷಿಣ ವಲಯ, ಬೃಬೆಂಮಪಾ ಇವರು ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆಗಾಗಿ ಯೋಜನಾ ಸಮಾಲೋಚಕರ ಸೇವೆಗಳಿಗೆ (ಪಿಎಂಸಿ) ಇದೇ ಮಾದರಿಯ ಕೆಲಸವನ್ನು ನಿರ್ವಹಿಸಿರುವ ಆಸಕ್ತಿಯುಳ್ಳ ವ್ಯಕ್ತಿಗಳಿಂದ/ಸಂಸ್ಥೆಗಳಿಂದ ಕೆಳಕಂಡ ಕೆಲಸಗಳಿಗೆ ಮನವಿ ಪ್ರಸ್ತಾವನೆಯನ್ನು ಆಹ್ವಾನಿಸಿದ್ದಾರೆ.

ಕ್ರ..ಸ.	ಕೆಲಸದ ಹೆಸರು
1	ಮಡಿವಾಳ ಕೆರೆಯ ಸಮಗ್ರ ಅಭಿವೃದ್ಧಿ”ಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಒಳಗೊಂಡಂತೆ ಯೋಜನಾ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದು. ಇಎಂಡಿ: 50,000/–

ನಿಗಧಿತ ಅವಧಿ/ವೇಳಾ ಪಟ್ಟಿ: 1) ಬಿಡ್ ದಾಖಲಾತಿಗಳನ್ನು ಇ–ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು: 05–07–2024 ರಿಂದ. 2) ಬಿಡ್ ಪೂರ್ವ ಸಭೆ: 10.07.2024 ರಂದು ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಕಾರ್ಯಪಾಲಕ ಅಭಿಯಂತರರ ಕಛೇರಿ (ಗುಆ/ಗುನಿ), ಕೊಠಡಿ ಸಂಖ್ಯೆ. 101, ಅನೆಕ್–3 ಕಟ್ಟಡ, ಬೃಬೆಂಮಪಾ ನ ರಾ ಚೌಕ, ಬೆಂಗಳೂರು–560002. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ: 15.07.2024 ರಂದು ಸಂಜೆ 4.00 ಗಂಟೆಗೆ. 4) ತಾಂತ್ರಿಕ ಬಿಡ್ ತೆರೆಯುವುದು : 18.07.2024 ರಂದು ಸಂಜೆ 4:30 ಗಂಟೆಗೆ. 5) ಟೆಂಡರ್ ಮಾನ್ಯತೆ: 90 ದಿನಗಳು ಟೆಂಡರ್ ಸ್ವೀಕರಿಸಿದ ದಿನಾಂಕದಿಂದ.

ಸಹಿ/– ಕಾರ್ಯಪಾಲಕ ಅಭಿಯಂತರರ ಕಛೇರಿ, ಗುಆ/ಗುನಿ ವಿಭಾಗ, ದಕ್ಷಿಣ ವಲಯ

ಬೈಜೂಸ್: ಸಿಬ್ಬಂದಿ ವೇತನ ಶೀಘ್ರ ಪಾವತಿ

ಬೆಂಗಳೂರು: ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ) ತನ್ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ್ದು, ತೆರವುಗೊಳಿಸಿದ ತಕ್ಷಣ ಸಿಬ್ಬಂದಿಗೆ ಬಾಕಿ ವೇತನ ಪಾವತಿಸುವುದಾಗಿ ಬೈಜೂಸ್ ಹೇಳಿದೆ.

ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಸೋಮವಾರ ಸಂಸ್ಥೆಯ ಪ್ರತಿನಿಧಿಗಳ ಜತೆ ಚರ್ಚಿಸಿದಾಗ ಸಂಸ್ಥೆಯು ಈ ಭರವಸೆ ನೀಡಿದೆ ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿ ತಿಳಿಸಿದರು.

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಬಿಡ್ ಸಂ.: SBC-MECH-CW-LHB-24
ದಿನಾಂಕ: 24.06.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ: ಬೆಂಗಳೂರು ವಿಭಾಗದಲ್ಲಿರುವ ಎಸ್‌ಬಿಸಿ ಕೋಚಿಂಗ್ ಡಿಪೋನಲ್ಲಿ 01 ವರ್ಷದ ಅವಧಿಗೆ ಎಲ್‌ಹೆಚ್‌ಬಿ ಕೋಚ್‌ಗಳ ಅಂಡರ್ ಗಿಯರ್‌ಗಳಿಗೆ ಸುಧಾರಿತ ಮೆಕ್ಯಾನೈಜ್ಡ್ ಕ್ಲೀನಿಂಗ್ ಕೆಲಸಗಳಿಗಾಗಿ ಹೊರಗುತ್ತಿಗೆ.	ರೂ. 3,49,52,544/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.07.2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಬೆಂಗಳೂರು
PUB/209/AAF/PRB/SWR/2024-25
South Western Railway - SWR | SWRRLY | SWRRLY

ನಿವೃತ್ತ ಅಧಿಕಾರಿಗಳು ಸೇರಿ ನಾಲ್ವರಿಗೆ ಜೈಲು

ಪಿಇಸಿ ಕಂಪನಿಯ ₹10 ಕೋಟಿ ದುರ್ಬಳಕೆ ಸಾಬೀತು; ತಲಾ ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘₹10 ಕೋಟಿ ದುರುಪಯೋಗ ಪಡಿಸಿಕೊಂಡಿದ್ದ ಫೆಡರಲ್ ಬ್ಯಾಂಕ್‌ನ ಇಬ್ಬರು ನಿವೃತ್ತ ಅಧಿಕಾರಿಗಳು, ಪಿಇಸಿ ಕಂಪನಿಯ ಮಾಜಿ ವ್ಯವಸ್ಥಾಪಕ ಸೇರಿ ನಾಲ್ವರು ಅಪರಾಧಿಗಳು ಎಂದು ಸಾರಿರುವ ಇಲ್ಲಿನ 3ನೇ ಎಸಿಎಂಎಂ ನ್ಯಾಯಾಲಯ, ನಾಲ್ವರಿಗೂ 4 ವರ್ಷ ಕಠಿಣ ಸಜೆ ಹಾಗೂ ತಲಾ ₹25 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಪಿಇಸಿ ಕಂಪನಿ ಬೆಂಗಳೂರು ಶಾಖೆಯ ಮಾಜಿ ವ್ಯವಸ್ಥಾಪಕ ಶೈಲೇಂದ್ರ ಎಂ.ದೊಂಗರವಾರ್, ಕಂಪನಿಯ ಕಾರ್ಯನಿರ್ವಾಹಕ ಸಹಾಯಕ ಕೆ.ರಾಜೇಂದ್ರನ್, ಜೆ.ಸಿ.ರಸ್ತೆಯ ಫೆಡರಲ್ ಬ್ಯಾಂಕ್‌ನ ನಿವೃತ್ತ ಸಹಾಯಕ ಪ್ರಧಾನ ವ್ಯವಸ್ಥಾಪಕ ಮೊಹಮ್ಮದ್ ನಂಬಿಯಾರ್ ಹಾಗೂ ಇದೇ ಬ್ಯಾಂಕ್‌ನ ನಿವೃತ್ತ ಹಿರಿಯ ವ್ಯವಸ್ಥಾಪಕ ಸಿ.ಎಂ. ಜಾನ್ ಅವರಿಗೆ ಶಿಕ್ಷೆ ವಿಧಿಸಿ ನ್ಯಾಯಾಧೀಶ ಶ್ರೇಯಾಂಶ್ ದೊಡ್ಡಮನಿ ಅವರು ಆದೇಶಿಸಿದ್ದಾರೆ.

ಪ್ರಕರಣದ 1ನೇ ಅಪರಾಧಿ ಪರ್ವೇಜ್ ಅಹಮ್ಮದ್ ವಿಚಾರಣೆ ಹಂತದಲ್ಲಿ ಮೃತಪಟ್ಟಿದ್ದಾರೆ.

ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾದ ಪಿಇಸಿ ಕಂಪನಿಯ ಮೂಲಕ 2005ರಲ್ಲಿ ಪರ್ವೇಜ್ ಅಹಮದ್ ಅವರು ವಿದೇಶದಿಂದ ಚಿನ್ನದ ಗಟ್ಟಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ದೆಹಲಿಯ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ ಪಿಇಸಿ ಕಂಪನಿಯವರು ಜಾಮೀನುದಾರರಾಗಿ ಈ ವ್ಯವಹಾರ ನಡೆಸುತ್ತಿದ್ದರು.

ಆಮದು ಮಾಡಿಕೊಂಡ ಚಿನ್ನವನ್ನು ಸ್ಥಳೀಯ ವ್ಯಾಪಾರಿಗಳಿಗೆ ಮಾರಲಾಗುತ್ತಿತ್ತು. ಚಿನ್ನವನ್ನು ಬೆಂಗಳೂರಿನ ಐಡಿಬಿಐ ಬ್ಯಾಂಕ್ ಲಾಕರ್‌ನಲ್ಲಿಟ್ಟು ಪಿಇಸಿ ಕಂಪನಿ ಬೆಂಗಳೂರು ಶಾಖೆ ವ್ಯವಸ್ಥಾಪಕರ ಮೂಲಕ ವ್ಯಾಪಾರಿಗಳಿಗೆ ನೀಡಲಾಗುತ್ತಿತ್ತು.

ವ್ಯಾಪಾರಿಗಳು ಚಿನ್ನವನ್ನು ಪಡೆದುಕೊಳ್ಳಲು ಚಿನ್ನದ ಪೂರ್ಣ ಮೌಲ್ಯದಷ್ಟು ಮೊತ್ತವನ್ನು ನಗರದ ಜೆ.ಸಿ. ರಸ್ತೆಯ, ಫೆಡರಲ್ ಬ್ಯಾಂಕ್‌ನಲ್ಲಿ ಪಿಇಸಿ ಹೆಸರಿನಲ್ಲಿ ಮೂರು ತಿಂಗಳಿಗೆ ನಿಶ್ಚಿತ ಠೇವಣಿ ಇಡಬೇಕಿತ್ತು. ಠೇವಣಿ ರಶೀದಿಯನ್ನು ಪಿಇಸಿ ಕಂಪನಿಯ ವ್ಯವಸ್ಥಾಪಕರಿಗೆ ನೀಡಿ ವ್ಯಾಪರಸ್ಥರು ಚಿನ್ನ ಬಿಡಿಸಿಕೊಳ್ಳುತ್ತಿದ್ದರು. ಮೂರು ತಿಂಗಳ ಬಳಿಕ ನಿಶ್ಚಿತ ಠೇವಣಿ ಬಿಡಿಸಿಕೊಳ್ಳಲು ಫೆಡರಲ್ ಬ್ಯಾಂಕ್‌ಗೆ ಕಳುಹಿಸಲಾಗಿತ್ತು. ಆಗ ಐವರು ಅಪರಾಧಿಗಳು ಆ ಹಣವನ್ನು ಬ್ಯಾಂಕ್‌ನಿಂದ ಪಡೆದು ಕಂಪನಿಗೆ ಕಳುಹಿಸದೇ ಸ್ವಂತಕ್ಕೆ ಬಳಕೆ ಮಾಡಿಕೊಂಡ ಆರೋಪ ಸಾಬೀತಾಗಿದೆ ಎಂದು ನ್ಯಾಯಾಲಯ ಪ್ರಕಟಿಸಿದೆ.

ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದ್ದು, ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಶೇಷ ಸರ್ಕಾರಿ ವಕೀಲರಾಗಿ ಬಿ.ಅಣ್ಣೇಗೌಡ ವಾದ ಮಂಡಿಸಿದ್ದರು.

‘ರೀಲ್ಸ್ ಸ್ಟಾರ್’ ಬಂಧನ

ಬೆಂಗಳೂರು: ಎಕೆ -47 ಮಾದರಿ ನಕಲಿ ಬಂದೂಕು ಹಿಡಿದು ಸಾರ್ವಜನಿಕರಲ್ಲಿ ಭಯ ಸೃಷ್ಟಿಸುತ್ತಿದ್ದ ವ್ಯಕ್ತಿಯನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ.ನಗರದ ನಿವಾಸಿ ಅರುಣ್ ಕಠಾರೆ (26) ಬಂಧಿತ ಆರೋಪಿ. ಈತ ‘ರೀಲ್ಸ್ ಸ್ಟಾರ್’ ಎಂದು ಕರೆಸಿಕೊಳ್ಳುತ್ತಿದ್ದ ಎಂದು ಪೊಲೀಸರು ಹೇಳಿದರು.

ರೀಲ್ಸ್‌ಗಾಗಿ ನಾಲ್ಕು ಗನ್‌ಮ್ಯಾನ್‌ಗಳಿಗೆ ಎಕೆ 47 ಮಾದರಿಯ ನಕಲಿ ಬಂದೂಕು ನೀಡಿ ಜನರಲ್ಲಿ ಭಯ ಸೃಷ್ಟಿಸುತ್ತಿದ್ದ. ಆರೋಪಿ ಜೂನ್ 9ರಂದು ಬಾಡಿಗಾರ್ಡ್‌ಗಳ ಜತೆ ಚೊಕ್ಕನಹಳ್ಳಿಯ ಭಾರತೀಯ ಸಿಟಿಯ ಲೀಲಾ ಹೋಟೆಲ್ ಬಳಿ ಬಂದಿದ್ದು, ಕೆಲವರಿಗೆ ಹೆದರಿಸಿದ್ದ. ಸಾರ್ವಜನಿಕರು ಆತಂಕಗೊಂಡು ಗಸ್ತು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಚಿತ್ರದುರ್ಗದ ಅರುಣ್ ಕಠಾರೆ ಇಲ್ಲಿನ ಜೆ.ಪಿ. ನಗರದಲ್ಲಿ ನೆಲೆಸಿದ್ದಾನೆ. ಮೈ ತುಂಬಾ ನಕಲಿ ಚಿನ್ನಾಭರಣ ತೊಟ್ಟು, ನಕಲಿ ಬಂದೂಕು ಹಿಡಿದು ಅಂಗರಕ್ಷಕರು, ಯುವತಿಯರು, ಐಷಾರಾಮಿ ಕಾರುಗಳು, ಬೈಕ್‌ಗಳ ಜೊತೆಗೆ ವಿಲಾಸಿ ಜೀವನ ಪ್ರದರ್ಶಿಸಿ ರೀಲ್ಸ್ ಮಾಡುವ ಅಭ್ಯಾಸ ಹೊಂದಿದ್ದ ಎಂದು ಪೊಲೀಸರು ಹೇಳಿದರು.

ಹಳೇ ದ್ವೇಷಕ್ಕೆ ಕೊಲೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೀವನಹಳ್ಳಿ ರೈಲ್ವೆ ಹಳಿ ಬಳಿ ನಡೆದಿದ್ದ ವಿಘ್ನೇಶ್ ಅಲಿಯಾಸ್ ಅಪ್ಪು (34) ಎಂಬುವವರ ಕೊಲೆ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಪುಲಕೇಶಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೀವನಹಳ್ಳಿಯ ಅರುಣ್ ಕುಮಾರ್, ಜಾನ್ ಜಾಕೋಬ್ ಆ್ಯಂಡ್ರೊ, ಪ್ರಶಾಂತ್, ಸಂಜೀವ್ ಬಂಧಿತರು. ಆರೋಪಿಗಳು ಜೂನ್ 29ರಂದು ರಾತ್ರಿ ಕುರುಬರಹಳ್ಳಿ ನಿವಾಸಿ ವಿಘ್ನೇಶ್ ಅವರಿಗೆ ಚಾಕುವಿನಿಂದ ಇರಿದು, ತಲೆ ಮೇಲೆ ಕಲ್ಲು ಹಾಕಿ ಕೊಲೆ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಹಳೇ ದ್ವೇಷ: ಅಪ್ಪು ಅವರು ವಾಸವಿದ್ದ ಜೀವನಹಳ್ಳಿ ಕೊಳೆಗೇರಿಯಲ್ಲಿ ಪ್ರಾಬಲ್ಯ ಸಾಧಿಸಲು ಹುಡುಗರ ಮೇಲೆ ಹಲ್ಲೆ ನಡೆಸಿದ್ದರು ಎನ್ನಲಾಗಿದೆ. ಆರೋಪಿಗಳಾದ ಅರುಣ್ ಕುಮಾರ್ ಮತ್ತು ಜಾನ್ ಜಾಕೋಬ್ ಮೇಲೂ ಹಲ್ಲೆ ಆಗಿದ್ದು, ಅವರು ದ್ವೇಷ ಸಾಧಿಸುತ್ತಿದ್ದರು. ಕಳೆದ ಶನಿವಾರ ಜೀವನಹಳ್ಳಿಗೆ ಬಂದಿದ್ದ ಅಪ್ಪು ಮತ್ತೆ ಅರುಣ್, ಜಾನ್ ಜತೆಗೆ ಗಲಾಟೆ ಮಾಡಿದ್ದರು. ಆಗ ಸಿಟ್ಟಿಗೆದ್ದು ಕೊಲೆ ಮಾಡಿದ್ದರು ಎಂದು ತಿಳಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

TEACHER REQUIRED for Primary and High School for Social Studies, Science and Maths contact email kenmoreschool@gmail.com and 9901501185

BUSINESS

Business Offers

Finance

NRI'S INVESTMENT And Finance Available On Low Interest Against Properties,Land &Building,Sites,Flats, Converted &Agriculture Lands Call:7204995189

PERSONAL

Change of Name

CHANGE OF NAME
I, Smt. S. Nethravathi W/o Sri. Padmanabha.H, aged about 30 years, Residing at No.364, 57th 'C' Cross, III Block, Rajajinagar, Bangalore-10. do hereby to change my name from S. Nethravathi to NETHRA PADMANABHA for all practical purposes in my future. vide affidavit dated 02.06.2004. Sworn before Notary B.K.R.Krishnamurthy, Bangalore

I, SHREYA W/o.Prashant Lakshetty R/a#23-382, Humnabad,Bidar Karnataka- 585330 After Marriage have changed my Name From CHETANARANI to SHREYA vide affidavit dated:28.7.2023 before Notary G.R.Ravichandra Reddy, Bengaluru

I, STELLA Nallamalla D/o Christopher Nallamalla R/o #61, Sai Park Road, Gousia Housing Society, Vajrahanuman Nagar, Bijapur, Vijayapura Dist-586109 have changed my name to Stella Asma Kalburgi.

I ROHIT Sirivaram S/O, Hariprasad Sirivaram R/o #137/138, Meenakshi Layout 1st Phase, Kalena Agrahara, Bangalore 560076 have changed my name to Rohit Hariprasad Sirivaram.

I, KENZAN MARYANN DROZA, have changed my name to KENZA MARYANN DROZA, Vide Affidavit dated 27.06.2024 sworn before advocate and notary Rajanna S.M., Bangalore

CHANGE OF NAME
I, J. LATHA KUMARI D/o. Jeeva Rathnam, Residing at No.30, 2nd Cross, Gangappa Block, Ganganagar, Bengaluru North, R.T. Nagar Post, Bengaluru-560032 have changed my name to HASIN vide affidavit dated 25-06-2024 before notary Sivakumara M.N., Bengaluru. Henceforth I shall be called HASIN only.

I, HANIYAH MIR. R/a #08, Munuswamiyappa Road, Banjara Layout, Horamav Agara, Bangalore-43. My Original name as per 10th Marks card is MARIA CAROLINA R. vide affidavit dated 01-07-2024 before notary L. Gopalakrishna, Bangalore. Henceforth I shall be called MARIA CAROLINA R. only.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯುತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು – 560002. ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342
ಇ–ಮೇಲ್: director_bmcri@yahoo.co.in ವೆಬ್‌ಸೈಟ್: www.bmcri.org

ಸಂಖ್ಯೆ: ಬೆಂವೈವಿಸಂಸಂ/ಸಿ1/20/2016–17 ದಿನಾಂಕ: 01–07–2024

ಪ್ರಕಟಣೆ

ಡಾ॥ ಸುದೀಪ್ ಜೆ, ಸಹಾಯಕ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಆದ ನಿಮ್ಮ ವಿರುದ್ಧ ನಡೆದ ಇಲಾಖಾ ವಿಚಾರಣಾ ವರದಿಯ ಬಗ್ಗೆ ದಿನಾಂಕ: 02–02–2023 ರಂದು ಜಾರಿಗೊಳಿಸಿರುವ 2ನೇ ಕಾರಣ ಕೇಳುವ ನೋಟೀಸನ್ನು ಗೃಹ ವಿಳಾಸ: ಡಾ॥ ಸುದೀಪ್ ಜೆ C/o ವಿಜಯೇಂದ್ರ. ಎ.ಜಿ ಫ್ಲಾಟ್, ನಂ. 1804, ಟವರ್ 3, ಎಲಾನಾ, ಟಾಟಾ ಪ್ರಾಮಾಂಟ್ ಹೌಸ್, 3ನೇ ಮೈನ್, ಇಟ್ಟಮಡವು, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು–560085 ಕ್ಕೆ ಕಳುಹಿಸಲಾಗಿದ್ದು, ನೋಟೀಸ್ ಸ್ವೀಕರಿಸದೇ ವಾಪಸ್ಸು ಹಿಂದಿರುಗಿರುತ್ತದೆ. **ಆದ್ದರಿಂದ ಡಾ॥ ಸುದೀಪ್ ಜೆ, ಆದ ತಾವು ಈ ಪ್ರಕಟಣೆ ಆದ 15 ದಿವಸದೊಳಗಾಗಿ ಖುದ್ದಾಗಿ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಹಾಜರಾಗಿ ಬಂದು 2ನೇ ಕಾರಣ ಕೇಳುವ ನೋಟೀಸನ್ನು ಸ್ವೀಕರಿಸಬೇಕೆಂದು ಸೂಚಿಸಿದೆ.**

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/708/ಅಡ್ವಟೋರ್/2024–25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ
ರಾಜಾರಾಮ್ ಮೋಹನ್‌ರಾಯ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560027

ಪ್ರಕಟಣೆ

ಕ್ರ. ಸಂ.	ಫೋಲಿಯೋ ನಂ.	ಹೆಸರು	ಹುದ್ದೆಗಳು ಅನ್ವಯಿಸುವಂತೆ
1	22/42	ರವಿ ಕುಮಾರ್ ಆರ್.	ಜೂನಿಯರ್ ಇಂಜಿನಿಯರ್
2	21/32	ಜಿ.ವಿ. ಭಾಸ್ಕರ್	ಟ್ಯಾಕ್ಸ್ ಇನ್ಸ್‌ಪೆಕ್ಟರ್
3	25/25	ಎನ್.ಸಿ. ಮಹೇಶ್	ಸೆಕೆಂಡ್ ಡಿವಿಷನ್ ಕ್ಲರ್ಕ್
4	022/5	ಶಿವಪ್ಪ ಎಂ.ಎಲ್.	ರೆವೆನ್ಯೂ ಇನ್ಸ್‌ಪೆಕ್ಟರ್
5	19/66	ನಾಗರಾಜ್ ಬಿ.ಎಲ್.	ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿಯರ್
6	19/49	ಶ್ರೀನಿವಾಸ್ ಮೂರ್ತಿ ಜಿ.	ಟೆಲಿಫೋನ್ ಆಪರೇಟರ್
7	19/50	ಕೃಷ್ಣಪ್ಪ	ಡ್ರೈವರ್
8	19/3	ಪ್ರಭಾಕರ್ ಎಸ್.	ಸೂಪರಿಂಟೆಂಡೆಂಟ್ ಇಂಜಿನಿಯರ್
9	24/34	ಹಿಲ್ಡಾ ಗೋವಿಯಸ್	ನರ್ಸ್
10	23/34	ಗಿರಿ ಜಿ.ವಿ.	ನಾಲ್ಕನೇ ದರ್ಜೆ ನೌಕರ
11	22/1	ಜಾನ್ ವಿಜಯ್ ಕುಮಾರ್	ಟ್ಯಾಕ್ಸ್ ಇನ್ಸ್‌ಪೆಕ್ಟರ್ (ಮೇರಿ ಜಾನ್ ನಾಮಿನಿ)
12	20/46	ಪಿ.ಕೆ. ರಾಜು	ನಾಲ್ಕನೇ ದರ್ಜೆ ನೌಕರ (ಡೆತ್)
13	21/1	ಜಿ.ಕೆ. ವೆಂಕಟೇಶ್ ಮೂರ್ತಿ	ಡ್ರೈವರ್ (ಡೆತ್)

ಮೇಲ್ಕಂಡ ಪಾರ್ಟಿಗಳಿಗೆ (ಹಂಚಿಕೆದಾರರು) ಈ ಮೂಲಕ ಸೂಚಿಸುವುದೇನಂದರೆ, ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್’ (ರಿ), ಇವರು ಡೆವಲಪರ್ ಆದ ಪ್ರಿಯಕೃಷ್ಣ ಅವರೊಂದಿಗೆ ದಿನಾಂಕ 24.06.2006ರಂದು ಒಪ್ಪಂದವನ್ನು ಮಾಡಿಕೊಂಡಿದ್ದು, ಈ ಒಪ್ಪಂದದಂತೆ ಡೆವಲಪರ್ ಸಂಬಂದಪಟ್ಟ ಸ್ವತ್ತಿನಲ್ಲಿ ಸೈಟ್‌ಗಳನ್ನು ರಚಿಸುವ ಮೂಲಕ ಆಸ್ತಿಯನ್ನು ಅಭಿವೃದ್ಧಿಪಡಿಸಿದ ನಂತರ ಸೊಸೈಟಿಯು ಮೇಲೆ ತಿಳಿಸಲಾದ ಪಾರ್ಟಿಗಳಿಗೆ ವಿವಿಧ ಅಳತೆಯ ಸೈಟ್‌ಗಳನ್ನು ಹಂಚಿಕೆ ಮಾಡಿದೆ ಹಾಗೂ ಹಂಚಿಕೆದಾರರು ಹೌಸಿಂಗ್ ಸೊಸೈಟಿಯ ಮೂಲಕ ಕ್ರಯದ ಸಂಪೂರ್ಣ ಮೊತ್ತವನ್ನು ಡೆವಲಪರ್‌ಗೆ ಪಾವತಿಸಿರುತ್ತಾರೆ. ಡೆವಲಪರ್‌ನಿಂದ ಸ್ವತ್ತಿನಲ್ಲಿ ಸೈಟ್‌ಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಈಗ ಅದು ನೋಂದಣಿಗೆ ಸಿದ್ಧವಾಗಿದೆ. ಆದ್ದರಿಂದ, ಸೊಸೈಟಿಯು ಹಂಚಿಕೆದಾರರಿಗೆ ಡೆವಲಪರ್‌ನಿಂದ ಕ್ರಯಪತ್ರಗಳನ್ನು ನೋಂದಣಿ ಮಾಡಿಸಿಕೊಳ್ಳುವಂತೆ ಸೂಚಿಸಿ ವಿವಿಧ ದಿನಾಂಕಗಳಂದು ಪತ್ರಗಳನ್ನು ನೀಡಿದೆ ಹಾಗೂ 3 ಜ್ಞಾಪನಾ ಪತ್ರಗಳನ್ನು ನೀಡಿದೆ, ಅಲ್ಲದೇ ದೂರವಾಣಿ ಮೂಲಕ ಹಂಚಿಕೆದಾರರಿಗೆ ತಿಳಿಸಲಾಗಿದೆ. ಆದರೆ ಹಂಚಿಕೆದಾರರು ತಮಗೆ ತಿಳಿದಿರುವ ಕಾರಣಗಳಿಗಾಗಿ ಮಾರಾಟದ ಕ್ರಯಪತ್ರಗಳನ್ನು ನೋಂದಣಿ ಮಾಡಿಸಿಕೊಳ್ಳಲು ಮುಂದೆ ಬಂದಿಲ್ಲ, ಆದ್ದರಿಂದ, ಈ ನೋಟೀಸ್ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳೊಳಗಾಗಿ ಸೊಸೈಟಿಯ ಮೂಲಕ ಡೆವಲಪರ್‌ಗಳನ್ನು ಸಂಪರ್ಕಿಸಿ, ಅವರ ಮಾರಾಟದ ಕ್ರಯಪತ್ರಗಳನ್ನು ನೋಂದಾಯಿಸಿಕೊಳ್ಳಲು ಸೊಸೈಟಿಯು ಈ ಮೂಲಕ ಮೇಲೆ ನಮೂದಿಸಲಾದ ಹಂಚಿಕೆದಾರರಿಗೆ ಕರೆ ನೀಡುತ್ತದೆ. ವಿಫಲರಾದಲ್ಲಿ ಡೆವಲಪರ್‌ಗಳು ಹಂಚಿಕೆದಾರರಿಂದ ಪಾವತಿಸಲಾದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವರು ಮತ್ತು ಇದರಿಂದ ಮೇಲೆ ತಿಳಿಸಲಾದ ಹಂಚಿಕೆದಾರರಿಗೆ ಉಂಟಾಗುವ ಯಾವುದೇ ನಷ್ಟಕ್ಕೆ ಸೊಸೈಟಿಯು ಜವಾಬ್ದಾರರಾಗಿರುವುದಿಲ್ಲ.

ಸಹಿ/–
(ಆರ್. ಸುಬ್ರಹ್ಮಣ್ಯಂ)
ಅಧ್ಯಕ್ಷರು & ಕಾರ್ಯಕಾರಿ ಸಮಿತಿ

ಸಂಕ್ಷಿಪ್ತ ಸುದ್ದಿ

ರೈಲು ವೇಳಾಪಟ್ಟಿ ಪರಿಷ್ಕರಣೆ

ಬೆಂಗಳೂರು: ಕೆಎಸ್‌ಆರ್ ಬೆಂಳೂರು-ಕೋಲಾರ ಡೆಮು ಮತ್ತು ಚಿಕ್ಕಬಳ್ಳಾಪುರ-ಬೆಂಗಳೂರು ಕಂಟೋನ್ಮೆಂಟ್ ಮೆಮು ವಿಶೇಷ ರೈಲುಗಳ ವೇಳಾಪಟ್ಟಿ ಪರಿಷ್ಕರಿಸಲಾಗಿದೆ. ಜುಲೈ 2ರಿಂದ ಜಾರಿಗೆ ಬರಲಿದೆ.

ಕೆಎಸ್‌ಆರ್ ಬೆಂಗಳೂರಿನಿಂದ ಡೆಮು ರೈಲು ಸಂಜೆ 6.10ಕ್ಕೆ ಹೊರಟು ಕೋಲಾರಕ್ಕೆ ರಾತ್ರಿ 9.30ಕ್ಕೆ ತಲುಪುತ್ತಿತ್ತು. ಜುಲೈ 2ರಿಂದ ಸಂಜೆ 6.20ಕ್ಕೆ ಹೊರಡಲಿದೆ. ಕೋಲಾರಕ್ಕೆ 9.40ಕ್ಕೆ ತಲುಪಲಿದೆ.

ಮೆಮು ರೈಲು ಚಿಕ್ಕಬಳ್ಳಾಪುರದಿಂದ ಸಂಜೆ 6.45ಕ್ಕೆ ಹೊರಟು, ರಾತ್ರಿ 9ಕ್ಕೆ ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಕ್ಕೆ ತಲುಪುತ್ತಿತ್ತು. ಇನ್ನು ಮುಂದೆ ಸಂಜೆ 6.50ಕ್ಕೆ ಹೊರಡಲಿದೆ. ಕಂಟೋನ್ಮೆಂಟ್‌ಗೆ ನಿಗದಿತ ಸಮಯಕ್ಕೆ (ರಾತ್ರಿ 9) ತಲುಪಲಿದೆ.

ಮೈಸೂರು-ಪಂಢರಪುರ ಗೋಲಗುಂಬಜ್ ಎಕ್ಸ್‌ಪ್ರೆಸ್ ರೈಲಿನ ವೇಳಾಪಟ್ಟಿ ಪರಿಷ್ಕರಣೆಯಿಂದಾಗಿ ಈ ಬದಲಾವಣೆ ಮಾಡಲಾಗಿದೆ ಎಂದು ನೈರುತ್ಯ ರೈಲ್ವೆ ಪಿಆರ್‌ಒ ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

ಇನ್‌ಸ್ಪೈರ್ ಅವಾರ್ಡ್ ಸ್ಪರ್ಧೆಗೆ ಆಯ್ಕೆ

ಹೆಸರಘಟ್ಟ: ಇನ್‌ಸ್ಪೈರ್ ಅವಾರ್ಡ್ ಕಾರ್ಯಕ್ರಮದಡಿ ಮಂಗಳೂರು ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎನ್‌ಐಟಿ–ಕೆ) ನಡೆಯುವ ರಾಷ್ಟ್ರ ಮಟ್ಟದ ಸ್ಪರ್ಧೆಗೆ ಹೆಸರಘಟ್ಟ ಹೋಬಳಿ ಕಾಕೋಳು ಗ್ರಾಮದ ಸರ್ಕಾರಿ ಶಾಲೆಯ ವಿದ್ಯಾರ್ಥಿನಿ ಐಶ್ವರ್ಯಾ ಆಯ್ಕೆಯಾಗಿದ್ದಾರೆ.

ಐಶ್ವರ್ಯಾ

ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಪ್ರತಿಭಾವಂತ ಮಕ್ಕಳನ್ನು ಗುರುತಿಸಲು ಕೇಂದ್ರ ಸರ್ಕಾರವು ಇನ್‌ಸ್ಪೈರ್ ಅವಾರ್ಡ್ ನೀಡುತ್ತಿದೆ. ನ್ಯಾಷನಲ್ ಇನ್ನೋವೇಷನ್ ಫೌಂಡೇಶನ್ ವತಿಯಿಂದ ಜುಲೈ 9 ಮತ್ತು 10ರಂದು ಸ್ಪರ್ಧೆ ನಡೆಯಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 39 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ.

ನೂತನ ಅಪರಾಧ ಕಾನೂನುಗಳ ವಾಪಸಾತಿಗೆ ಆಗ್ರಹ

ಬೆಂಗಳೂರು: ‘ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ನೂತನ ಅಪರಾಧ ಕಾನೂನುಗಳನ್ನು ತಕ್ಷಣವೇ ರದ್ದುಗೊಳಿಸಬೇಕು’ ಎಂದು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯೂನಿಸ್ಟ್ (ಎಸ್‌ಯುಸಿಐ) ಆಗ್ರಹಿಸಿದೆ.

ನೂತನ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಗಳನ್ನು ಸೋಮವಾರದಿಂದ ಜಾರಿಗೊಳಿಸಲಾಗಿದೆ.

‘ಸಾರ್ವಜನಿಕರು, ನ್ಯಾಯ ಶಾಸ್ತ್ರಜ್ಞರ ಆಕ್ಷೇಪಗಳನ್ನು ಕಡೆಗಣಿಸಿ ಕೇಂದ್ರ ಸರ್ಕಾರವು ಈ ಕರಾಳ ಕಾನೂನುಗಳನ್ನು ಜಾರಿಗೆ ತಂದಿದೆ’ ಎಂದು ಎಸ್‌ಯುಸಿಐ ದೂರಿದೆ.

ನಗರದಲ್ಲಿ ಇಂದು

‘ವಿಂಟೇಜ್ ಆಫ್ ಸಲ್ಯೂಟ್ ಬಸವನಗುಡಿಯ ಮೆಡಿಕಲ್ ಲೆಜೆಂಡ್ಸ್’ ಡಾಕ್ಟರ್ಸ್ ಡೇ–2024: ಆಯೋಜನೆ: ಮಾಯಾ ಫಿಲ್ಮ್ಸ್. ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಭಜನ-ಪ್ರವಚನ-ಸಂಕೀರ್ತನೆ: ‘ಸುಂದರ ಕಾಂಡ’ ಪ್ರವಚನ: ಜಯತೀರ್ಥಾಚಾರ್ ಹೊಳಲಗುಂದ, ಆಯೋಜನೆ: ಮತ್ತು ಸ್ಥಳ: ವೀರಾಂಜನೇಯ ಸ್ವಾಮಿ ದೇವಸ್ಥಾನ, ಗೋವಿಂದರಾಜನಗರ ಪೊಲೀಸ್ ಠಾಣೆಯ ಪಕ್ಕ ಸರಸ್ವತಿನಗರ, ವಿಜಯನಗರ, ಸಂಜೆ 6

ಪ್ರವಚನ ವಾಹಿನಿ: ‘ಶ್ರೀಮದ್ ರಾಮಾನುಜರ ಮಾನವೀಯತೆ, ಅಂಡಾಳ್‌ರ, ತಿರುಪ್ಪಾವೈ’ ಕುರಿತು ಉಪನ್ಯಾಸ: ಎನ್.ಕೆ.ರಾಮಶೇಷನ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ’ ಪ್ರಶಸ್ತಿ ಪ್ರದಾನ: ಶಿವರಾಜ ತಂಗಡಗಿ, ಉದ್ಘಾಟನೆ: ಎಚ್.ಕೆ.ಪಾಟೀಲ, ಉಪಸ್ಥಿತಿ: ಶೀಲಾ ಹಳಕಟ್ಟಿ, ಆಶಯ ನುಡಿ: ಮನು ಬಳಿಗಾರ, ಪ್ರಶಸ್ತಿ ಪುರಸ್ಕೃತರು: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಪ್ರಭಾಕರ ಕೋರೆ, ತೇಜಸ್ವಿನಿ ಅನಂತಕುಮಾರ್, ಆಯೋಜನೆ: ಡಾ.ಫ.ಗು. ಹಳಕಟ್ಟಿ ಫೌಂಡೇಶನ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5.30



ಪಂಡಿತಾರಾಧ್ಯ ಸ್ವಾಮೀಜಿ

ಇದು ಸಾಧ್ಯವಾಗದ ಕೆಲಸ: ಕೆಪಿಸಿಸಿ ಸಭೆಯಲ್ಲಿ ಡಿಸಿಎಂ ಎಚ್ಚರಿಕೆ

‘ನನ್ನನ್ನು ಬಗ್ಗಿಸಲು ಒಬ್ಬಿಬ್ಬರ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನನ್ನು ಖಾಲಿ ಮಾಡಿಸಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇದೆಲ್ಲ ಸಾಧ್ಯವೇ ಇಲ್ಲ. ಯಾರೋ ಒಬ್ಬಿಬ್ಬರು ನನ್ನನ್ನು ಬಗ್ಗಿಸಬಹುದೆಂದು ಭಾವಿಸಿದ್ದರೆ, ಅದೂ ಸಾಧ್ಯವಾಗದ ಕೆಲಸ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಎಚ್ಚರಿಕೆಯ ಧ್ವನಿಯಲ್ಲಿ ಹೇಳಿದ್ದಾರೆ.

ಕೆಪಿಸಿಸಿ ಪದಾಧಿಕಾರಿಗಳ ಸಭೆ ಸೋಮವಾರ ನಡೆಯಿತು. ಈ ಸಭೆಯಲ್ಲಿ ಉಪ ಮುಖ್ಯಮಂತ್ರಿಗಳಾಗಿ ಇನ್ನಷ್ಟು ಶಾಸಕರ ನೇಮಕ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತಂತೆ ವಿಚಾರ ಪ್ರಸ್ತಾಪವಾದಾಗ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಶಿವಕುಮಾರ್, ‘ನಾನು ಪಕ್ಷಕ್ಕಾಗಿ ದುಡಿಯುವವನು. ನನ್ನನ್ನು ಖಾಲಿ ಮಾಡಿಸಲು ಸಾಧ್ಯವಿಲ್ಲ. ಪಕ್ಷದ ವರಿಷ್ಠರು ಎಲ್ಲವನ್ನೂ ಗಮನಿಸುತ್ತಿದ್ದಾರೆ’ ಎಂದು ಸವಾಲಿನ ಧ್ವನಿಯಲ್ಲಿ ಹೇಳಿದ್ದಾಗಿ, ಮೂಲಗಳು ತಿಳಿಸಿವೆ.

ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಹೈಕಮಾಂಡ್ ಜೊತೆ ಈಗಾಗಲೇ ಚರ್ಚೆ ಮಾಡಲಾಗಿದೆ. ಪಕ್ಷದಲ್ಲಿ ಶಿಸ್ತು ಮುಖ್ಯ. ಇನ್ನು ಮುಂದೆ ಪಕ್ಷದ ಆಂತರಿಕ ವಿಚಾರಗಳನ್ನು ಬಹಿರಂಗವಾಗಿ ಯಾರೇ ಮಾತನಾಡಿದರೂ ನೋಟಿಸ್ ಕೊಟ್ಟು, ಕ್ರಮ ಕೈಗೊಳ್ಳಲಾಗುವುದು ಎಂದು ಶಿವಕುಮಾರ್ ಎಚ್ಚರಿಕೆ ನೀಡಿದ್ದಾಗಿ ಮೂಲಗಳು ಹೇಳಿವೆ.

ಡಿ.ಕೆ. ಶಿವಕುಮಾರ್

ಅನವಶ್ಯಕವಾಗಿ ಬಹಿರಂಗ ಹೇಳಿಕೆಗಳನ್ನು ನೀಡುತ್ತಾ ಪಕ್ಷದ ವರ್ಚಸ್ಸಿಗೆ ಧಕ್ಕೆ ಉಂಟು ಮಾಡುವ ಸಚಿವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಅಂಥವರಿಗೆ ನೋಟೀಸ್ ನೀಡಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯೊಬ್ಬರು ಸಭೆಯಲ್ಲಿ ಆಗ್ರಹಿಸಿದ್ದಾರೆ. ಆಗ ಶಿವಕುಮಾರ್, ‘ಕೆಲವರಿಗೆ ಮಾಧ್ಯಮಗಳನ್ನು ಕಂಡರೆ ಮಾತನಾಡುವ ಚಟ. ಎಐಸಿಸಿ ನಾಯಕರು ಎಲ್ಲವನ್ನೂ ಗಮನಿಸುತ್ತಿದ್ದಾರೆ ಬಿಡಿ’ ಎಂದಿದ್ದಾಗಿ ಮೂಲಗಳು ವಿವರಿಸಿವೆ.

ಪಕ್ಷ ಸಂಘಟಿಸಲು ತಾನು ಪಟ್ಟ ಶ್ರಮದ ಬಗ್ಗೆ ಮನವರಿಕೆ ಮಾಡಿಕೊಟ್ಟ ಶಿವಕುಮಾರ್, ‘ನಾನು ಕೆಪಿಸಿಸಿ ಅಧ್ಯಕ್ಷನಾಗುವ ಮೊದಲು ಪಕ್ಷ ಹೇಗಿತ್ತು? ಈಗ ಹೇಗಿದೆ ನೋಡಿ. ಪಕ್ಷ ಸಂಕಷ್ಟದಲ್ಲಿದ್ದಾಗ ಸೋನಿಯಾ ಗಾಂಧಿ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದರು. ಪಕ್ಷ ಈಗ ಸದೃಢವಾಗಿದೆ. ಇನ್ನಷ್ಟು ಬಲಿಷ್ಠಗೊಳಿಸುವ ಹೊಣೆಗಾರಿಕೆ ನನ್ನ ಮೇಲಿದೆ’ ಎಂದು ಪ್ರತಿಪಾದಿಸಿದ್ದಾಗಿ ಮೂಲಗಳು ಹೇಳಿವೆ.

ಕ್ಷೇತ್ರ ಮರೆತರೇ?: ‘ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಹಿನ್ನಡೆಯಾಗಿದೆ. ಒಂದೇ ವರ್ಷದಲ್ಲಿ 160 ಕ್ಷೇತ್ರಗಳಲ್ಲಿ ಹಿನ್ನಡೆಯಾಗಿದೆ ಎಂದರೆ ಏನರ್ಥ? 19 ಸಚಿವರ ಕ್ಷೇತ್ರಗಳಲ್ಲಿ ಹಿನ್ನಡೆಯಾಗಿದೆ. ಅಲ್ಲಿ ಜನಪ್ರಿಯತೆ ಕಳೆದುಕೊಂಡರೇ. ಕ್ಷೇತ್ರ ಮರೆತರೇ’ ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಅವರು ಸಭೆಯಲ್ಲಿ ಪ್ರಶ್ನಿಸಿದರು ಎಂದೂ ಗೊತ್ತಾಗಿದೆ.

‘ಕಾರ್ಯಕರ್ತರು, ಶಾಸಕರಿಗೆ ಸಚಿವರು ಬೆಲೆ ಕೊಡುತ್ತಿಲ್ಲ’

ಕೆಲವು ಸಚಿವರ ನಡವಳಿಕೆಯ ಕುರಿತು ಪ್ರಸ್ತಾಪಿಸಿ ಅಸಮಾಧಾನ ವ್ಯಕ್ತಪಡಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ವಿನಯ್ ಕುಲಕರ್ಣಿ, ‘ಪಕ್ಷದ ಮುಖಂಡರಿಗೆ, ಕಾರ್ಯಕರ್ತರಿಗೆ ಸಚಿವರು ಮೂರು ಕಾಸಿನ ಬೆಲೆ ಕೊಡುತ್ತಿಲ್ಲ. ಯಾರಿಗೂ ಮುಖ ಕೊಟ್ಟು ಮಾತನಾಡುತ್ತಿಲ್ಲ. ನಾವು ಸಂಘಟನಾತ್ಮಕವಾಗಿ ವಿಫಲರಾಗುತ್ತಿರುವುದಕ್ಕೆ ಇದೇ ಕಾರಣ’ ಎಂದು ದೂರಿದ್ದಾರೆ.

‘ಶಾಸಕರ ಪರಿಸ್ಥಿತಿ ಕೂಡ ಚಿಂತಾಜನಕವಾಗಿದೆ. ಸಚಿವರು ತಮ್ಮ ಭೇಟಿಗೆ ಶಾಸಕರಿಗೆ ಅವಕಾಶವನ್ನೇ ನೀಡುತ್ತಿಲ್ಲ, ಕೆಲಸಗಳನ್ನೂ ಮಾಡಿಕೊಡುತ್ತಿಲ್ಲ. ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಈ ವಿಷಯವನ್ನು ಶಾಸಕಾಂಗ ಪಕ್ಷದ ಸಭೆಗಳಲ್ಲೂ ಗಮನಕ್ಕೆ ತರಲಾಗಿತ್ತು. ಮುಖ್ಯಮಂತ್ರಿ ಗಮನಕ್ಕೂ ತರಲಾಗಿದೆ. ಆದರೂ ಸಚಿವರು ತಮ್ಮ ನಡೆ ಬದಲಿಸಿಕೊಂಡಿಲ್ಲ. ಇದರಿಂದ ಪಕ್ಷ ಸಂಘಟನೆ ಮೇಲೆ ಹೊಡೆತ ಬಿದ್ದಿದೆ. ಇದು ಹೀಗೆ ಮುಂದುವರೆದರೆ ಶಾಸಕರು ನಿರಾಸಕ್ತಿ ತಾಳುತ್ತಾರೆ’ ಎಂದೂ ವಿನಯ್ ಕುಲಕರ್ಣಿ ಹೇಳಿದ್ದಾರೆ.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ವಿನಯ್ ಕುಲಕರ್ಣಿ, ‘ಶಾಸಕರು, ಪದಾಧಿಕಾರಿಗಳು ಯಾರೇ ಆದರೂ ಪಕ್ಷದ ವಿರುದ್ಧ ಕೆಲಸ ಮಾಡಿದರೆ ನೋಟಿಸ್ ನೀಡಬೇಕು. ಅಂಥವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ಇಂದಿನ ಸಭೆಯಲ್ಲಿ ತೀರ್ಮಾನಿಸಿದ್ದೇವೆ. ನಾವೆಲ್ಲರೂ ಸೇರಿದರೆ ಸಚಿವರು. ಅವರೇನು ಮೇಲಿಂದ ಬಂದಿಲ್ಲ’ ಎಂದಿದ್ದಾರೆ.

ಸ್ವಾಮೀಜಿ ಹೇಳಿಕೆ ಪ್ರಸ್ತಾವಕ್ಕೆ ಸಿಎಂ ಸಿಟ್ಟು

ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಿ ಎಂದಿದ್ದ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದರು.

ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಭಾಗಿಯಾಗಿ ಹೊರಟಿದ್ದ ಸಿದ್ದರಾಮಯ್ಯ ಅವರನ್ನು ಸುದ್ದಿಗಾರರು ಈ ಬಗ್ಗೆ ಪ್ರಶ್ನಿಸಿದರು. ಆಗ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಸುದ್ದಿಗಾರರು ಮತ್ತೆ ಪ್ರಶ್ನಿಸಿದಾಗ ತುಸು ಸಿಟ್ಟಾದ ಅವರು, ‘ನಡೆಯಿರಿ, ನಡೆಯಿರಿ’ ಎನ್ನುತ್ತಾ ಎಂದು ವಾಹನದತ್ತ ನಡೆದರು.

ಧ್ವನಿ ಇಲ್ಲದ ಸಮುದಾಯ ಏನು ಮಾಡಬೇಕು: ಪ್ರಿಯಾಂಕ್ ಪ್ರಶ್ನೆ

ಸಿ.ಎಂ ಹುದ್ದೆ ಖಾಲಿ ಇಲ್ಲ: ಬೈರತಿ

ಪ್ರಜಾವಾಣಿ ವಾರ್ತೆ

ಮೈಸೂರು/ಕಲಬುರಗಿ: ‘ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸದ್ಯ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಇದ್ದಾರೆ. ಮುಂದೆಯೂ ಅವರೇ ಇರುತ್ತಾರೆ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯದಲ್ಲಿ ಡಿಸಿಎಂ ಹುದ್ದೆಯೂ ಖಾಲಿ ಇಲ್ಲ. ನಾಲ್ಕೈದು ಡಿಸಿಎಂ ಮಾಡಬೇಕು ಎಂಬ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ’ ಎಂದರು.

'ಅನಗತ್ಯ ಹೇಳಿಕೆ ನೀಡಿದರೆ ಸಚಿವರಿಗೆ ನೋಟಿಸ್ ನೀಡುತ್ತೇವೆ’ ಎಂಬ ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ್ ಕುಲಕರ್ಣಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ‘ಡಿಸಿಎಂ ವಿಚಾರ ಸೇರಿ ಅನಗತ್ಯ ಹೇಳಿಕೆ ಕೊಡಬಾರದೆಂದು ಹೈಕಮಾಂಡ್ ಹೇಳಿರಬಹುದು. ಹೀಗಾಗಿ ಅವರು ಹಾಗೆ ಹೇಳಿರಬಹುದು’ ಎಂದರು.

‘ಕೆಲವು ಸಮುದಾಯಗಳಿಗೆ ತಮ್ಮವರಿಗೆ ಸಿಎಂ, ಡಿಸಿಎಂ ಹುದ್ದೆ ಕೊಡಿ ಎಂದು ಕೇಳಲು ವೇದಿಕೆ, ಮಠಾಧೀಶರು, ಪ್ರಬಲವಾದ ಧ್ವನಿಯಾದರೂ ಇದೆ. ಆದರೆ, ಹುಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನೇ ಬೆಂಬಲಿಸಿಕೊಂಡು ಬರುತ್ತಿರುವ, ಧ್ವನಿ, ಮಠ, ಸ್ವಾಮೀಜಿ ಇಲ್ಲದ ಸಮುದಾಯಗಳು ಏನು ಮಾಡಬೇಕು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಕಲಬುರಗಿಯಲ್ಲಿ ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಸ್ವಾತಂತ್ರ್ಯದ ನಂತರ ಯಾವ ಸಮುದಾಯಗಳಿಗೆ ಮುಖ್ಯಮಂತ್ರಿ ಪ್ರಾತಿನಿಧ್ಯ ಸಿಕ್ಕಿದೆ? ಕಳೆದ ವಿಧಾನಸಭಾ, ಲೋಕಸಭಾ ಚುನಾವಣೆಯಲ್ಲಿ ಯಾವ ಸಮುದಾಯಗಳಿಗೆ ಎಷ್ಟೆಷ್ಟು ವೋಟ್ ಬಿದ್ದಿವೆ? ಯಾವ ಸಮುದಾಯಗಳು ನೂರಕ್ಕೆ ನೂರು ಮತ ಹಾಕಿದ್ದಾರೆ? ಯಾವ ಸಮುದಾಯ ಶೇ 40ರಷ್ಟು ಮತ ಚಲಾಯಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದರು.

‘ಗಟ್ಟಿ ಧ್ವನಿ ಇರುವ ಸಮುದಾಯಗಳು ಪ್ರಶ್ನಿಸುತ್ತಿವೆ. ಧ್ವನಿ ಇಲ್ಲದವರಿಗೆ ಕೇಳಲು ಆಗುತ್ತಿಲ್ಲ. ಆದರೂ ಶೇ 100ರಷ್ಟು ವೋಟ್ ಕೊಟ್ಟಿವೆ. ನಾವ್ಯಾರೂ ಪಕ್ಷ, ಸರ್ಕಾರ ಮತ್ತು ಸಂಘಟನೆಗೆ ನಷ್ಟ ಆಗುವಂತೆ ಎಲ್ಲಿಯೂ ಮಾತನಾಡಿಲ್ಲ’ ಎಂದು ಹೇಳಿದರು.

‘ಸಿಎಂ, ಡಿಸಿಎಂ ಸ್ಥಾನಕ್ಕಾಗಿ ತಾಳ್ಮೆ ಬೇಕು’ (ಬೆಳಗಾವಿ ವರದಿ): ‘ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗಲು ಸಮಯ ಕೂಡಿ ಬರಬೇಕು. ನಮ್ಮ ರೈಲು ಬಂದಾಗ ನಾವು ಅದರಲ್ಲಿ ಹತ್ತಬೇಕು. ಅಲ್ಲಿಯವರೆಗೆ ತಾಳ್ಮೆ ಮುಖ್ಯ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಯಾವುದೇ ಚರ್ಚೆ ನಡೆದಿಲ್ಲ. ದೆಹಲಿಗೆ ಹೋಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದು ನಿಜ. ನಮ್ಮ ಪಕ್ಷದ ಅಧ್ಯಕ್ಷರನ್ನು ಭೇಟಿ ಮಾಡುವುದು ಸಹಜ. ಬೇರೆ ಅರ್ಥ ಕಲ್ಪಿಸಬೇಕಿಲ್ಲ’ ಎಂದರು.

‘ಶಾಸಕರಾದ ರಾಜು ಕಾಗೆ, ಲಕ್ಷ್ಮಣ ಸವದಿ, ಮಹೇಂದ್ರ ತಮ್ಮಣ್ಣವರ ಅಥಣಿಯಲ್ಲಿ ಗೋಪ್ಯ ಸಭೆ ಮಾಡಿದ್ದು ತಪ್ಪೇನಿಲ್ಲ’ ಎಂದು ತಿಳಿಸಿದರು.

ಡಿಸಿಎಂ ಹುದ್ದೆ ಬಗ್ಗೆ ಹೇಳಿಕೆ ನಾನ್‌ಸೆನ್ಸ್: ರಾಯರೆಡ್ಡಿ

ಕಲಬುರಗಿ: ‘ಸಾಂವಿಧಾನಿಕ ಮಾನ್ಯತೆ ಮತ್ತು ಪವರ್ ಇಲ್ಲದ, ವೈಭವೀಕರಣದ ಉಪಮುಖ್ಯಮಂತ್ರಿ (ಡಿಸಿಎಂ) ಹುದ್ದೆಯ ಬಗ್ಗೆ ಮಾತನಾಡುವುದು ನಾನ್‌ಸೆನ್ಸ್ (ಅಸಂಬದ್ಧ)’ ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ ರಾಯರೆಡ್ಡಿ ಕಿಡಿಕಾರಿದರು.

ಇಲ್ಲಿ ಸೋಮವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ‘ಡಿಸಿಎಂ ಕೇವಲ ಗೌರವದ ಹುದ್ದೆ ಹೊರತು ಸಂವಿಧಾನದ ಹುದ್ದೆಯಲ್ಲ. ಜಾತಿಗೆ ಒಬ್ಬರು ಡಿಸಿಎಂ ಮಾಡಬೇಕು ಎಂಬ ಚರ್ಚೆ ಅವಶ್ಯವಿಲ್ಲ. ಇದನ್ನು ಇಲ್ಲಿಗೆ ನಿಲ್ಲಿಸಿ, ಜನರ ಸಮಸ್ಯೆಗಳ ಬಗ್ಗೆ ಮಾತನಾಡಬೇಕು’ ಎಂದರು.

‘ಸಿಎಂ ಬದಲಾವಣೆ ಬಗ್ಗೆ ಚಂದ್ರಶೇಖರ ಸ್ವಾಮೀಜಿ ಹೇಳಿಕೆ ನೀಡಿದ್ದು ಸರಿಯಲ್ಲ. ಸಿಎಂ ಸ್ಥಾನ ಬಿಟ್ಟುಕೊಡಿ ಎನ್ನಲು ಅವರೇನು ಶಾಸಕಾಂಗ ಪಕ್ಷದ ಸದಸ್ಯರಾ? ಪಕ್ಷದ ವರಿಷ್ಠರಾ? ಧಾರ್ಮಿಕ ಮುಖಂಡರಾದವರು ಜನರಿಗೆ ಧರ್ಮದ ಬಗ್ಗೆ ಬೋಧನೆ ಮಾಡಬೇಕು. ಇಲ್ಲದಿದ್ದರೆ ಜನರಲ್ಲಿ ಅವರ ಬಗ್ಗೆ ಅಗೌರವ ಭಾವನೆ ಮೂಡುತ್ತದೆ. ಇದು ಧಾರ್ಮಿಕ ಅಶಿಸ್ತು ತೋರಿಸುತ್ತದೆ’ ಎಂದರು.

ಮುಖ್ಯಮಂತ್ರಿ ಸ್ಥಾನದ ಬಗ್ಗೆ ಚರ್ಚೆ ನಡೆಯುತ್ತಿರುವುದು ಗೊತ್ತೇ ಇಲ್ಲ. ನಿಮಗೆ ಗೊತ್ತಿದ್ದರೆ ಹೇಳಿ. ಹೈಕಮಾಂಡ್‌ನ ತೀರ್ಮಾನವೇ ಅಂತಿಮವಾಗಿರುತ್ತದೆ

ರಾಮಲಿಂಗಾರೆಡ್ಡಿ ಸಾರಿಗೆ ಸಚಿವ

ಯಾರೋ ಬಾಯಿ ಚಪಲಕ್ಕೆ ಮುಖ್ಯಮಂತ್ರಿ ಬದಲಾವಣೆ ಕುರಿತು ಮಾತನಾಡುತ್ತಾರೆ. ಹಾಗಂತ ಶಾಸಕರು ಕೂಡ ಆ ರೀತಿಮಾತನಾಡಬಾರದು

ಎಚ್‌.ಸಿ. ಬಾಲಕೃಷ್ಣ, ಶಾಸಕ

ಮುಖ್ಯಮಂತ್ರಿ ಬದಲಾವಣೆ ಮಾಡಬೇಕೆಂದಿದ್ದರೆ, ದಲಿತ ಸಮುದಾಯದವರಿಗೆ ಅವಕಾಶ ನೀಡಬೇಕು

ಗುರುಪ್ರಸಾದ್ ಕೆರಗೋಡು

ದಲಿತ ಸಂಘರ್ಷ ಸಮಿತಿ ರಾಜ್ಯ ಸಮಿತಿಸಂಚಾಲಕ

ಅಬಕಾರಿ: ‘ಜಾತಿ ಪ್ರಭಾವ’ ಭಾರಿ

ಒಂದನೇ ಪುಟದಿಂದ...

‘ಬೆಂಗಳೂರು ನಗರದಲ್ಲಿರುವ ಎಂಟು ಅಬಕಾರಿ ಉಪ ಆಯುಕ್ತರ ಹುದ್ದೆಗಳಲ್ಲಿ ಮೂರು ಕುರುಬ ಸಮುದಾಯದ ಅಧಿಕಾರಿಗಳಿದ್ದರು. ಕೆಲವು ತಿಂಗಳ ಹಿಂದೆ ಬೇರೆ ಸಮುದಾಯದ ಒಬ್ಬರನ್ನು ಅಕಾಲಿಕವಾಗಿ ವರ್ಗಾವಣೆ ಮಾಡಿ ಕುರುಬ ಸಮುದಾಯದ ಅಧಿಕಾರಿಯನ್ನೇ ಅಲ್ಲಿಗೆ ನಿಯೋಜಿಸಲಾಗಿತ್ತು. ಈಗ ಶೇಕಡ 50ರಷ್ಟು ಹುದ್ದೆಗಳಲ್ಲಿ ಒಂದೇ ಸಮುದಾಯದ ಅಧಿಕಾರಿಗಳಿದ್ದಾರೆ. ಆದರೂ, ಅದೇ ಸಮುದಾಯದ ಮತ್ತಷ್ಟು ಮಂದಿಯನ್ನು ಉಪ ಆಯುಕ್ತರನ್ನಾಗಿ ವರ್ಗಾವಣೆ ಮಾಡಲು ಇತರರನ್ನು ಅಕಾಲಿಕವಾಗಿ ವರ್ಗಾವಣೆ ಮಾಡುವ ಪ್ರಯತ್ನ ನಡೆದಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಬಕಾರಿ ಇಲಾಖೆಯ ಕೆಲವು ಅಧಿಕಾರಿಗಳು ದೂರುತ್ತಾರೆ.

ಪ್ರಭಾವಿ ಸಚಿವರ ಹಸ್ತಕ್ಷೇಪ: ಅಬಕಾರಿ ಇಲಾಖೆಯಲ್ಲಿ ಬೆಂಗಳೂರಿನ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಬೆಂಗಳೂರು ನಗರವನ್ನು ಪ್ರತಿನಿಧಿಸುವ ಅತ್ಯಂತ ಪ್ರಭಾವಿ ಸಚಿವರೊಬ್ಬರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಒಂದೇ ಸಮುದಾಯದ ಅಧಿಕಾರಿಗಳಿಗೆ ಬೆಂಗಳೂರಿನಲ್ಲಿ ಪ್ರಮುಖ ಹುದ್ದೆಗಳನ್ನು ನೀಡುವುದರ ಹಿಂದೆ ಅವರ ಪ್ರಭಾವವೇ ಹೆಚ್ಚು ಕೆಲಸ ಮಾಡುತ್ತಿದೆ ಎನ್ನುವ ದೂರು ಇಲಾಖೆಯೊಳಗೆ ಜೋರಾಗಿ ಸದ್ದು ಮಾಡುತ್ತಿದೆ.

‘ಅಬಕಾರಿ ಇಲಾಖೆಯಲ್ಲಿ ಅಧಿಕಾರಿಗಳ ವರ್ಗಾವಣೆಯಲ್ಲಿ ಜಾತಿಯ ಪ್ರಭಾವವೇ ಹೆಚ್ಚಾಗಿ ಕೆಲಸ ಮಾಡುತ್ತಿದೆ. ಇದರಿಂದ ಕುರುಬ ಸಮುದಾಯವನ್ನು ಹೊರತುಪಡಿಸಿ ಉಳಿದ ಜಾತಿಗಳ ಅಧಿಕಾರಿಗಳು ಅಕಾಲಿಕ ವರ್ಗಾವಣೆಯ ಭೀತಿಯಲ್ಲಿದ್ದಾರೆ’ ಎಂಬ ಉಲ್ಲೇಖ ಮುಖ್ಯಮಂತ್ರಿ ಮತ್ತು ರಾಜ್ಯಪಾಲರಿಗೆ ರವಾನೆಯಾಗಿರುವ ಪತ್ರದಲ್ಲಿದೆ.

ಪ್ರತಿಕ್ರಿಯಿಸದ ಸಚಿವರು: ಅಬಕಾರಿ ಇಲಾಖೆ ಅಧಿಕಾರಿಗಳ ವರ್ಗಾವಣೆಯಲ್ಲಿ ಜಾತಿ ಪ್ರಭಾವ, ಮಧ್ಯವರ್ತಿಗಳ ಹಾವಳಿ ಮತ್ತು ಭ್ರಷ್ಟಾಚಾರದ ಆರೋಪ ಕುರಿತು ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ ಅವರ ಪ್ರತಿಕ್ರಿಯೆ ಪಡೆಯಲು ಪತ್ರಿಕೆ ಪ್ರಯತ್ನಿಸಿತು. ಸಚಿವರು ಕರೆ ಸ್ವೀಕರಿಸಲಿಲ್ಲ, ವಾಟ್ಸ್ ಆ್ಯಪ್ ಸಂದೇಶದ ಮೂಲಕ ಕೇಳಿದ ಪ್ರಶ್ನೆಗೂ ಪ್ರತಿಕ್ರಿಯಿಸಲಿಲ್ಲ.

ವಿವಾಹ ನಡೆಯುತ್ತಿದ್ದಾಗ ವರನ ಪಕ್ಕ ಕುಳಿತ ಮಂಗ

ಹಿರೀಸಾವೆ: 8 ಜನರಿಗೆ ಕಚ್ಚಿದ ಕೋತಿ

ಪ್ರಜಾವಾಣಿ ವಾರ್ತೆ

ಹಿರೀಸಾವೆ (ಹಾಸನ ಜಿಲ್ಲೆ): ಇಲ್ಲಿನ ನುಗ್ಗೇಹಳ್ಳಿ ರಸ್ತೆಯಲ್ಲಿ ಕೋತಿಯೊಂದು ಸೋಮವಾರ 8 ಜನರಿಗೆ ಕಚ್ಚಿ ಗಾಯಗೊಳಿಸಿದೆ.

ಸುಶೀಲಮ್ಮ ಗಂಗಾಧರ್ ಕಲ್ಯಾಣ ಮಂಟಪದಲ್ಲಿ ಒಳಗೆ ಹೋಗಿ, ವಿವಾಹ ನಡೆಯುತ್ತಿದ್ದಾಗ ವರನ ಪಕ್ಕ ಕುಳಿತಿದೆ. ನಂತರ ಊಟದ ಕೊಣೆಗೆ ಹೋಗಿ, ಊಟಕ್ಕೆ ಕೂತಿದ್ದವರ ಪಕ್ಕದ ಚೇರ್, ಟೇಬಲ್ ಮೇಲೆ ಕೂತು ಎಲೆಗೆ ಹಾಕಿದ್ದ ಆಹಾರಗಳನ್ನು ತಿಂದಿದೆ. ಈ ಸಮಯದಲ್ಲಿ ಮದುವೆಗೆ ಬಂದಿದ್ದ 5 ಜನರಿಗೆ ಕಚ್ಚಿ ಗಾಯಗೊಳಿಸಿದೆ. ಸುಶೀಲಮ್ಮ, ಲೀಲಾವತಿ, ನಿಂಗೇಗೌಡ, ಗೌರಮ್ಮ, ಗಿರಿಜಮ್ಮ ಮತ್ತು ಏಳು ವರ್ಷದ ಮಂಜುಶ್ರೀ ಎಂಬ ಬಾಲಕಿ ಗಾಯಗೊಂಡಿದ್ದಾರೆ.

ಅಲ್ಲಿಂದ ಹೊರ ಬಂದು ಆದೇ ರಸ್ತೆಯಲ್ಲಿ ಹಿಟ್ಟಿನ ಗಿರಣಿಗೆ ನುಗ್ಗಿ, ಹೊನ್ನೇನಹಳ್ಳಿಯ ಗೀರಿಗೌಡರ ಕಾಲಿಗೆ ಕಚ್ಚಿದೆ. ತಿಮ್ಮೇಗೌಡ ಎಂಬುವರಿಗೂ ಕಚ್ಚಿ ಗಾಯಗೊಳಿಸಿದೆ. ವಧು-ವರ ಹೊರಡುವ ಸಮಯಕ್ಕೆ ಮತ್ತೆ ಕಲ್ಯಾಣ ಮಂಟಪಕ್ಕೆ ಬಂದು, ಶಾಸ್ತ್ರಗಳನ್ನು ಮಾಡಲು ಅಡ್ಡಿಪಡಿಸಿದೆ.

ಇವರೆಲ್ಲರೂ ಹಿರೀಸಾವೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ನಾಲ್ಕು ಜನರಿಗೆ ತೀವ್ರವಾದ ಗಾಯವಾಗಿದ್ದು, ಹೆಚ್ಚಿನ ಚಿಕಿತ್ಸೆ ಆಗತ್ಯವಿರುವ ಕಾರಣ ಅವರನ್ನು ಹಾಸನ ಮತ್ತು ಆದಿಚುಂಚನಗಿರಿ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಡಾ.ಭರತ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ದಾರಿಯಲ್ಲಿ ಸಿಕ್ಕ ಬೈಕ್, ಕಾರಿನ ಮೇಲೆ ಆ ಮಂಗ ಕೂರುತ್ತಿರುತ್ತದೆ. ಜನರು ಗಾಬರಿಯಾಗದಿದ್ದರೆ ಅಥವಾ ಗಲಾಟೆ ಮಾಡದಿದ್ದರೆ ಯಾರಿಗೂ ತೊಂದರೆ ಮಾಡಿಲ್ಲ ಎಂದು ಗೊತ್ತಾಗಿದೆ. ಯಾರೋ ಸಾಕಿ, ಬೀದಿಗೆ ಬಿಟ್ಟಿರಬಹುದು’ ಎಂದು ಸ್ಥಳಕ್ಕೆ ಬಂದಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಹೇಳಿದರು.



ಹಿರೀಸಾವೆಯಲ್ಲಿ ಸೋಮವಾರ ಕಲ್ಯಾಣ ಮಂಟಪಕ್ಕೆ ನುಗ್ಗಿದ ಕೋತಿ ಆಹಾರ ತಿಂದಿತು

ಮುಡಾ 'ಅಕ್ರಮ'; ಅಧಿಕಾರಿಗಳ ವರ್ಗ

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ನೇತೃತ್ವದಲ್ಲಿ ಸಭೆ: ತನಿಖೆಗೆ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಬದಲಿ ನಿವೇಶನಗಳ ಹಂಚಿಕೆಯಲ್ಲಿ ಅವ್ಯವಹಾರ ಆರೋಪಗಳು ಕೇಳಿಬಂದ ಕಾರಣ, ಆಯುಕ್ತ ಸೇರಿದಂತೆ ಮೂವರು ಅಧಿಕಾರಿಗಳನ್ನು ಸರ್ಕಾರವು ವರ್ಗಾವಣೆ ಮಾಡಿದೆ. ಜತೆಗೆ ತನಿಖೆಗೆ ಸಮಿತಿಯನ್ನೂ ರಚಿಸಿದೆ.

ಮುಡಾ ಕಚೇರಿಯಲ್ಲಿ ಸೋಮವಾರ ಮಧ್ಯಾಹ್ನ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳೊಂದಿಗೆ ತುರ್ತು ಸಭೆ ಬಳಿಕ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾಧ್ಯಮದವರಿಗೆ ಈ ವಿಷಯ ತಿಳಿಸಿದರು.

'ಎಲ್ಲ ಆರೋಪಗಳ ಸಮಗ್ರ ತನಿಖೆಗಾಗಿ ಸಮಿತಿ ರಚಿಸಿದ್ದೇವೆ. ನಿಷ್ಪಕ್ಷಪಾತ ತನಿಖೆಯ ಕಾರಣಕ್ಕೆ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಕಾರ್ಯದರ್ಶಿ ಶೇಖರ್ ಮತ್ತು ಎಇಇ ಅವರನ್ನು ಇಲ್ಲಿಂದ ವರ್ಗಾವಣೆ ಮಾಡುವಂತೆ ಆದೇಶಿಸಿದ್ದೇನೆ. ಎಲ್ಲ ಪ್ರಕರಣಗಳ ಕುರಿತು ನ್ಯಾಯಸಮ್ಮತ ತನಿಖೆ ನಡೆಸಿ ಕ್ರಮ ಜರುಗಿಸುತ್ತೇವೆ' ಎಂದು ಮಾಹಿತಿ ನೀಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಕೂಲಂಕಷವಾಗಿ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಯಾರೋ ಅಧಿಕಾರಿಗಳು, ದಲ್ಲಾಳಿಗಳು ಈ ಕೆಲಸ ಮಾಡಿದ್ದರೆ ಅದನ್ನು ಶಾಸಕರ ಮೇಲೆ ಆರೋಪಿಸಬಾರದು' ಎಂದರು.

ಹಂಚಿಕೆಯಾದ ನಿವೇಶನ ತಡೆಯುತ್ತೇವೆ: 'ಮುಡಾದಲ್ಲಿ ಮುಂದಿನ ಒಂದು ತಿಂಗಳು ಯಾವುದೇ ನಿವೇಶನ ಹಂಚಿಕೆ ಮಾಡುವಂತಿಲ್ಲ. ಸಭೆ ನಡೆಸುವಂತಿಲ್ಲ. ಕಳೆದ 2–3 ವರ್ಷದಲ್ಲಿ 50:50 ಅನುಪಾತ ಹಾಗೂ ಬದಲಿ ನಿವೇಶನ ಸೇರಿದಂತೆ ಹಂಚಿಕೆ ಆಗಿರುವ ಎಲ್ಲ ನಿವೇಶನಗಳನ್ನೂ ತಡೆ ಹಿಡಿಯಲಾಗುವುದು. ತನಿಖೆ ಬಳಿಕ ನೈಜವಾಗಿದ್ದವರಿಗೆ ನಿವೇಶನ ಹಿಂತಿರುಗಿಸಿ, ಅಕ್ರಮ ನಡೆದಿದ್ದಲ್ಲಿ ಅಂತಹ ನಿವೇಶನಗಳನ್ನು ಮುಡಾ ವಶಕ್ಕೆ ಪಡೆಯಲಾಗುವುದು. ಯಾವುದೇ ಪಕ್ಷದವರಿದ್ದರೂ ಕ್ರಮ ಕೈಗೊಳ್ಳುತ್ತೇವೆ' ಎಂದು ಮಾಹಿತಿ ನೀಡಿದರು.

'ಸಚಿವ ಸಂಪುಟದ ಅನುಮತಿ ಪಡೆಯದೆಯೇ ಶೇ 50:50 ಅನುಪಾತದ ಅಡಿ ನಿವೇಶನ ಹಂಚಿಕೆ ಮಾಡಬಾರದು ಎಂದು ಸೂಚಿಸಿ ಕಳೆದ ವರ್ಷ ಅಕ್ಟೋಬರ್‌ನಲ್ಲೇ ಸರ್ಕಾರ ಮುಡಾಕ್ಕೆ ಪತ್ರ ಬರೆದು ಆದೇಶಿಸಿದೆ. ಸರ್ಕಾರದ ನಿಯಮ ಉಲ್ಲಂಘಿಸಿ ಎಷ್ಟು ನಿವೇಶನ ಹಂಚಿಕೆ ಆಗಿದೆಯೋ ಗೊತ್ತಿಲ್ಲ. ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಈ ನಿಯಮ ಜಾರಿಗೆ ಬಂದಿದೆ. ತನಿಖೆ ಬಳಿಕ ನಿಖರ ಮಾಹಿತಿ ಸಿಗಲಿದೆ' ಎಂದು ವಿವರಿಸಿದರು.

'ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆರೋಪಿಸುವಂತೆ ಪ್ರಕರಣದಲ್ಲಿ ಡಾ.ಯತೀಂದ್ರ ಅವರ ಪಾತ್ರವಿಲ್ಲ. ಅವರ ಬಳಿ ಸಾಕ್ಷ್ಯ ಇದ್ದರೆ ತಂದು ಕೊಡಲಿ' ಎಂದು ಸವಾಲು ಹಾಕಿದರು.

'ವಿಶ್ವನಾಥ್ ಈಗ ಮಾತನಾಡುತ್ತಿದ್ದಾರೆ. ಸೈಟು ಕೇಳಿಕೊಂಡು ನನ್ನ ಬಳಿ ಬಂದಿದ್ದನ್ನು ಅವರು ನೆನಪಿಸಿಕೊಳ್ಳಲಿ' ಎಂದು ತಿರುಗೇಟು ನೀಡಿದರು.

'ಇದಕ್ಕೂ ಮುನ್ನ ಸಚಿವರು ನಗರದ ಖಾಸಗಿ ಹೋಟೆಲ್‌ನಲ್ಲಿ ಆಪ್ತರು ಹಾಗೂ ಕೆಲವು ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಕರಣದ ಮಾಹಿತಿ ಪಡೆದರು' ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ಮುಡಾ ಕಚೇರಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಮುಡಾ ಅಧ್ಯಕ್ಷ ಕೆ. ಮರಿಗೌಡ, ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಹಾಗೂ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶದ್ ಉರ್ ರೆಹಮಾನ್ ಶರೀಫ್ ಪಾಲ್ಗೊಂಡಿದ್ದರು

ಮಾಹಿತಿ ಕೋರಿ ಪತ್ರ ಬರೆದ ವಿಶ್ವನಾಥ್

'ಮುಡಾ ವ್ಯಾಪ್ತಿಯಲ್ಲಿ 2020 ರಿಂದ ಈವರೆಗೆ ನೋಂದಣಿ ಆಗಿರುವ ನಿವೇಶನಗಳ ಮಾಹಿತಿ ನೀಡುವಂತೆ ಕೋರಿ ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಜಿಲ್ಲಾ ನೋಂದಣಾಧಿಕಾರಿ ಹಾಗೂ ಮುಡಾದ ನೋಂದಣಿ ಅಧಿಕಾರಿಗೆ ಪತ್ರ ಬರೆದಿದ್ದಾರೆ. ಪೆನ್‌ಡ್ರೈವ್ ಇಲ್ಲವೇ ಪತ್ರದ ಮೂಲಕ ತುರ್ತಾಗಿ ಮಾಹಿತಿ ನೀಡಬೇಕು' ಎಂದು ಅವರು ಕೋರಿದ್ದಾರೆ.

ಸರ್ಕಾರದ ಸೂಚನೆ ಮೀರಿ ಹಂಚಿಕೆ?

ಸರ್ಕಾರದ ನಿಯಾಮಾವಳಿ ಹಾಗೂ ಆದೇಶಗಳನ್ನು ಉಲ್ಲಂಘಿಸಿ ಮುಡಾ ವ್ಯಾಪ್ತಿಯಲ್ಲಿ ಭಾರಿ ಮೌಲ್ಯದ ನಿವೇಶನಗಳನ್ನು ಹಂಚಿಕೆ ಮಾಡಿರುವ ಆರೋಪ ಕೇಳಿಬಂದಿದ್ದು, ಇದೇ ಅಧಿಕಾರಿಗಳಿಗೆ ಉರುಳಾಗುವ ಸಾಧ್ಯತೆ ಇದೆ.

'ಪ್ರೋತ್ಸಾಹದಾಯಕ ನಿವೇಶನಗಳನ್ನು ನೀಡುವ ಸಂಬಂಧ 2015ರಲ್ಲಿ ಸರ್ಕಾರ ನಿಯಮ ರೂಪಿಸಿತು. ನಂತರ ರಚನೆಯಾದ ಬಡಾವಣೆಗಳ ಭೂಸಂತ್ರಸ್ತರಿಗೆ ಮಾತ್ರ ಈ ನಿಯಮಗಳು ಅನ್ವಯಿಸುತ್ತವೆ. ಆದರೆ, 30–40 ವರ್ಷಗಳ ಹಿಂದೆ ಜಮೀನು ನೀಡಿದವರ ಹೆಸರಿಗೂ ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಅದಕ್ಕೆ ಬೇಕಾದ ದಾಖಲೆಗಳನ್ನೂ ಅಷ್ಟೇ ತ್ವರಿತವಾಗಿ ಸೃಷ್ಟಿಸಲಾಗಿದೆ. ಹೀಗೆ ಹಂಚಿಕೆ ಮಾಡಲಾದ ನಿವೇಶನಗಳ ಅಳತೆಯಲ್ಲೂ ಉದಾರತೆ ತೋರಿದ್ದು, ಒಂದೊಂದು ನಿವೇಶನದ ಮೌಲ್ಯವೇ ಕೋಟಿಗಟ್ಟಲೆ ಇದೆ. ಈ ಎಲ್ಲ ನಿವೇಶನಗಳ ಮೌಲ್ಯ ಸಾವಿರಾರು ಕೋಟಿ ದಾಟಬಹುದು. ಇದರಲ್ಲಿ ಎಷ್ಟು ಅಕ್ರಮ, ಎಷ್ಟು ಸಕ್ರಮ ಎಂಬುದು ತನಿಖೆಯಿಂದಷ್ಟೇ ಹೊರಬರಬೇಕಿದೆ' ಎಂದು ಮುಡಾ ವ್ಯವಹಾರಗಳನ್ನು ಬಲ್ಲ ಮುಖಂಡರೊಬ್ಬರು ತಿಳಿಸಿದರು.

'50:50 ಅನುಪಾತ ಅಡಿ ನಿವೇಶನ ನೀಡಲು ಕಡ್ಡಾಯವಾಗಿ ಸರ್ಕಾರದ ಅನುಮತಿ ಬೇಕು. ಸರ್ಕಾರವೇ ಈ ಅನುಪಾತದಲ್ಲಿ ನಿವೇಶನ ನೀಡುವಂತಿಲ್ಲ ಎಂದು ಎಚ್ಚರಿಸಿದ್ದರೂ ಆ ಆದೇಶವನ್ನು ಗಾಳಿಗೆ ತೂರಿ ಭೂಸಂತ್ರಸ್ತರ ಹೆಸರಿನಲ್ಲಿ ನೂರಾರು ನಿವೇಶನಗಳು ಹಂಚಿಕೆ ಆಗಿವೆ' ಎಂಬ ಆರೋಪಗಳೂ ಕೇಳಿಬಂದಿವೆ.

15 ದಿನದಲ್ಲಿ ವರದಿಗೆ ಸೂಚನೆ

ಮುಡಾದಲ್ಲಿ ನಿವೇಶನಗಳ ಹಂಚಿಕೆಯಲ್ಲಿ ನಡೆದಿರುವ ಅವ್ಯವಹಾರದ ತನಿಖೆಗಾಗಿ ರಾಜ್ಯ ಸರ್ಕಾರವು ಸಮಿತಿ ರಚಿಸಿದ್ದು, 15 ದಿನದಲ್ಲಿ ವರದಿ ನೀಡುವಂತೆ ಸೂಚಿಸಿದೆ.

ನಗರಾಭಿವೃದ್ಧಿ ಇಲಾಖೆಯ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಹಾಗೂ ಗ್ರಾಮಾಂತರ ಯೋಜನಾ ವಿಭಾಗದ ಆಯುಕ್ತ ಆರ್. ವೆಂಕಟಾಚಲಪತಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಹೆಚ್ಚುವರಿ ನಿರ್ದೇಶಕ ಎಂ.ಸಿ. ಶಶಿಕುಮಾರ್, ಜಂಟಿ ನಿರ್ದೇಶಕಿ ಶಾಂತಲಾ ಹಾಗೂ ಉಪ ನಿರ್ದೇಶಕ ಪ್ರಕಾಶ್ ಸಮಿತಿಯಲ್ಲಿದ್ದಾರೆ.

'ಮುಡಾದಲ್ಲಿ ನಡೆದಿದೆ ಎನ್ನಲಾದ ಎಲ್ಲ ಅವ್ಯವಹಾರಗಳ ಬಗ್ಗೆ ಸಮಿತಿಯು ಪರಿಶೀಲಿಸಿ 15 ದಿನಗಳ ಒಳಗೆ ಸಮಗ್ರ ವರದಿ ನೀಡಬೇಕು. ಕೈಗೊಳ್ಳಬಹುದಾದ ಕ್ರಮಗಳ ಕುರಿತು ಸ್ಪಷ್ಟ ಅಭಿಪ್ರಾಯ ನೀಡಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರತಿಪಕ್ಷವಾಗಿ ಬಿಜೆಪಿ ವಿಫಲ: ಯತ್ನಾಳ ಆರೋಪ

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರು ಸಾಲು ಹಗರಣಗಳಲ್ಲಿ ಭಾಗಿಯಾದರೂ ಅವುಗಳನ್ನು ಬಯಲಿಗೆಳೆದು, ಸರ್ಕಾರವನ್ನು ಸಮರ್ಥವಾಗಿ ಕಟ್ಟಿಹಾಕುವಲ್ಲಿ ಪ್ರತಿಪಕ್ಷವಾಗಿ ಬಿಜೆಪಿ ವಿಫಲವಾಗಿದೆ' ಎಂದು ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಕೇವಲ ಜೈಲ್ ಭರೋ, ಧಿಕ್ಕಾರ ಕೂಗಿದರೆ ಸಾಲದು. ಕಾಂಗ್ರೆಸ್ ಸರ್ಕಾರವನ್ನು ಸಮರ್ಥವಾಗಿ ಕಟ್ಟಿಹಾಕುವ ಕೆಲಸ ಮಾಡಬೇಕು' ಎಂದು ಸೋಮವಾರ ತಿಳಿಸಿದರು.

'ನಮ್ಮವರು ಜೈಲ್ ಭರೋ ಮಾಡಲು ಹೋದಾಗ ಪೊಲೀಸರು ಅವರನ್ನು ಹಿಡಿದು ಬಸ್ ಒಳಗೆ ಕೂರಿಸಿ ಸೆಲ್ಯೂಟ್ ಹೊಡೆದು, ಕಾಫಿ, ಟೀ ಕುಡಿಸಿ, ಇಡ್ಲಿ, ದೋಸೆ ತಿನ್ನಿಸಿ ಹೊರಗೆ ಬಿಡುತ್ತಾರೆ. ಹೊರ ಬಂದ ಬಳಿಕ ಭಾರಿ ಮತ್ತು ಉಗ್ರ ಹೋರಾಟ ಮಾಡಿದ್ದೇವೆ ಎಂದು ಹೇಳಿಕೊಳ್ಳುತ್ತಾರೆ' ಎಂದು ಛೇಡಿಸಿದರು.

'ನಮ್ಮ ಹುಳುಕು ನೀವು ತೆಗೆಯಬೇಡಿ, ನಿಮ್ಮದು ನಾವು ತೆಗೆಯಲ್ಲ ಎಂದು ಕಾಂಗ್ರೆಸ್ ಸಚಿವರು ಬೆದರಿಕೆ ಹಾಕುತ್ತಿದ್ದಾರೆ. ಅದಕ್ಕೆ ಅಂಜಿ ನಮ್ಮ ನಾಯಕರು ಕೇವಲ ತೋರಿಕೆಗೆ ಹೋರಾಟ ನಡೆಸುತ್ತಿದ್ದಾರೆ' ಎಂದರು.

'ನನಗೂ ಅಂಜಿಸಲು ಬಂದರು. ಆದರೆ, ನನ್ನದು ಯಾವ ಹುಳುಕೂ ಅವರಿಗೆ ಸಿಗದ ಕಾರಣಕ್ಕೆ ತಲೆನೋವು ಆಗಿದ್ದೇನೆ. ವಾಲ್ಮೀಕಿ ನಿಗಮದಲ್ಲಿನ ಬಹು ಕೋಟಿ ಹಗರಣದ ತನಿಖೆಯನ್ನು ಸರ್ಕಾರ ಸಿಬಿಐಗೆ ಕೊಡಬೇಕು, ಇಲ್ಲವಾದರೆ ನಾನೇ ಪಿಐಎಲ್ ಹಾಕುತ್ತೇನೆ' ಎಂದರು.

ಆತ್ಮಹತ್ಯೆಗೆ ಯತ್ನಿಸಿದ್ದ ರೈತರಿಗೆ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ/ಕುರುಗೋಡು: ಒಣ ಮೆಣಸಿನಕಾಯಿ ಖರೀದಿಸಿದ ಮಧ್ಯವರ್ತಿಗಳು ಹಣ ಪಾವತಿಸದ ಕಾರಣ ಮನನೊಂದು ಭಾನುವಾರ ಕ್ರಿಮಿನಾಶಕ ಕುಡಿದಿದ್ದ ನಾಲ್ವರು ರೈತರ ಪೈಕಿ ಮೂವರ ಸ್ಥಿತಿ ಸದ್ಯಕ್ಕೆ ಸ್ಥಿರವಾಗಿದೆ ಎಂದು ಎಂದು ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ (ವಿಮ್ಸ್) ತಿಳಿಸಿದೆ.

'ಸೋಮಸಮುದ್ರ ಗ್ರಾಮದ ಕೆ.ಕೋಣೇರಪ್ಪ, ಗುಡಿಸಲು ಹನುಮಂತ, ಎಣ್ಣೆ ಶೇಖರಪ್ಪ, ಕಂಪ್ಲಿ ತಾಲ್ಲೂಕಿನ ಜವುಕು ಗ್ರಾಮದ ರುದ್ರೇಶ್ ಕ್ರಿಮಿನಾಶಕ ಕುಡಿದ್ದರು. ಅವರ ಪೈಕಿ ಕೋಣೇರಪ್ಪ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ, ಇನ್ನುಳಿದ 'ಮೂವರನ್ನು ತುರ್ತು ನಿಗಾ ಘಟಕದಲ್ಲಿರಿಸಿ ಚಿಕಿತ್ಸೆ ಕೊಡಲಾಗುತ್ತಿದೆ. ಇನ್ನೂ ಎರಡು ದಿನಗೆ ಅವರ ಮೇಲೆ ನಿಗಾ ವಹಿಸಲಾಗುವುದು' ಎಂದು ವಿಮ್ಸ್ ನಿರ್ದೇಶಕ ಡಾ ಟಿ. ಗಂಗಾಧರ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

2023ರ ಮಾರ್ಚ್‌ನಲ್ಲಿ ವಿರೂಪಾಕ್ಷಿ ಮತ್ತು ರಾಮರೆಡ್ಡಿ ಎಂಬ ಮಧ್ಯವರ್ತಿಗಳು 'ಅಗ್ರಿ ಗ್ರೀಡ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ' ಹೆಸರಿನಲ್ಲಿ ಸೋಮಸಮುದ್ರ ಗ್ರಾಮದ 62 ರೈತರಿಂದ ₹5.28 ಕೋಟಿ ಮೌಲ್ಯದ 2.40 ಲಕ್ಷ ಕೆಜಿ ಒಣಮೆಣಸಿನಕಾಯಿ ಖರೀದಿಸಿದ್ದರು. ಮೂರು ಕಂತುಗಳಲ್ಲಿ ₹3.35 ಕೋಟಿ ಹಣ ಪಾವತಿಸಿ ₹1.93 ಕೋಟಿ ಬಾಕಿ ಉಳಿಸಿದ್ದರು. ರೈತರು ಹಲವು ಬಾರಿ ಕೇಳಿದರೂ ಬಾಕಿ ಪಾವತಿಸಿರಲಿಲ್ಲ. ಈ ಬಗ್ಗೆ ಜೂನ್ 20ರಂದು ಕುರುಗೋಡು ಠಾಣೆಯಲ್ಲಿ ಪ್ರಕರಣವನ್ನೂ ದಾಖಲಿಸಲಾಗಿತ್ತು.

ಈ ಮಧ್ಯೆ ಬಾಕಿ ಹಣಕ್ಕೆ ಒತ್ತಾಯಿಸಿ ರೈತರು ಭಾನುವಾರ ರಾಮರೆಡ್ಡಿ ಮನೆ ಬಳಿ ತೆರಳಿದ್ದರು. ಈ ವೇಳೆ ಆದ ವಾಗ್ವಾದಲ್ಲಿ ನಾಲ್ವರು ರೈತರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಆತ್ಮಹತ್ಯೆ ಯತ್ನ ಘಟನೆಗೆ ಸಂಬಂಧಿಸಿದಂತೆ ಈವರೆಗೆ ಪ್ರಕರಣ ದಾಖಲಾಗಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೌಟುಂಬಿಕ ಕಲಹ: ಪತ್ನಿಗೆ ಇರಿದು ಕೊಲೆ ಮಾಡಿದ ಕಾನ್‌ಸ್ಟೆಬಲ್

ಪ್ರಜಾವಾಣಿ ವಾರ್ತೆ

ಹಾಸನ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಲು ಬರುತ್ತಿದ್ದ ಪತ್ನಿ ಮಮತಾ (37) ಅವರನ್ನು, ಪೊಲೀಸ್ ಕಾನ್‌ಸ್ಟೆಬಲ್ ಲೋಕನಾಥ್ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ.

ನಗರದ ಎಸ್‌ಪಿ ಕಚೇರಿಯ ಬಳಿ ಸೋಮವಾರ ಈ ಘಟನೆ ನಡೆದಿದೆ. ಚಾಕು ಇರಿತಕ್ಕೆ ಒಳಗಾದ ಮಮತಾ ಅವರನ್ನು ಪೊಲೀಸರು ತಕ್ಷಣವೇ ಹಿಮ್ಸ್ ಆಸ್ಪತ್ರೆಗೆ ದಾಖಲಿಸಿದರು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ. ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ.

ನಾಲ್ಕೈದು ದಿನಗಳಿಂದ ಗಂಡ-ಹೆಂಡತಿ ನಡುವೆ ಜಗಳ ನಡೆಯುತ್ತಿತ್ತು. ಸೋಮವಾರ ಪತಿ ವಿರುದ್ಧ ದೂರು ನೀಡಲು ಮಮತಾ, ಎಸ್ಪಿ ಕಚೇರಿಗೆ ಬರುತ್ತಿದ್ದರು. ಇದರಿಂದ ಸಿಟ್ಟಿಗೆದ್ದ ಲೋಕನಾಥ್ ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.



ಕೊಲೆಯಾದ ಮಮತಾ ಹಾಗೂ ಆರೋಪಿ ಲೋಕನಾಥ್

'ಮೇಲ್ನೋಟಕ್ಕೆ ವೈಯಕ್ತಿಕ ಮನಸ್ತಾಪವೇ ಕಾರಣ ಎಂದು ಕಂಡು ಬರುತ್ತಿದೆ. ಈ ಬಗ್ಗೆ ದೂರು ಪಡೆದ ನಂತರ ಕೂಲಂಕಷ ವಿಚಾರಣೆ ನಡೆಸಲಾಗುವುದು' ಎಂದು ಎಸ್‌ಪಿ ಮೊಹಮ್ಮದ್ ಸುಜೀತಾ ತಿಳಿಸಿದ್ದಾರೆ.

ಜುಲೈ 1ರಿಂದ ಭಾರತೀಯ ನ್ಯಾಯ ಸಂಹಿತೆ ಜಾರಿಗೆ ಬಂದಿದ್ದು, ಕಾನ್‌ಸ್ಟೆಬಲ್ ಲೋಕನಾಥ ವಿರುದ್ಧ ಸಂಹಿತೆಯ ಅಡಿ ನಗರ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಪೋಕ್ಸೊ ಪ್ರಕರಣ: ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಆದೇಶ

ಮಗನಿಗೆ 20, ತಂದೆಗೆ 10 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಾಲಕಿ ಮೇಲೆ ಅತ್ಯಾಚಾರ ವೆಸಗಿದ್ದ ಅಪರಾಧಿಗೆ 20 ವರ್ಷ ಹಾಗೂ ಈ ಕೃತ್ಯಕ್ಕೆ ಸಹಕರಿಸಿದ್ದ ಆತನ ತಂದೆಗೆ 10 ವರ್ಷ ಜೈಲು ಶಿಕ್ಷೆ ವಿಧಿಸಿ ಕಲಬುರಗಿ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಅತ್ಯಾಚಾರ ಎಸಗಿದ ದುಷ್ಕೃತ್ಯಕ್ಕಾಗಿ ಯಲ್ಲಪ್ಪ ಅಲಿಯಾಸ್ ಯಲ್ಲಾಲಿಂಗ ಯಡ್ರಾಮಿಗೆ 20 ವರ್ಷ ಜೈಲು, ₹20 ಸಾವಿರ ದಂಡ ವಿಧಿಸಲಾಗಿದೆ. ಕೃತ್ಯಕ್ಕೆ ನೆರವಾಗಿದ್ದ ತಂದೆ ದೇವಪ್ಪ ಅಲಿಯಾಸ್ ದೇವಿಂದ್ರಪ್ಪ ಯಡ್ರಾಮಿಗೆ 10 ವರ್ಷ ಜೈಲು ಶಿಕ್ಷೆ, ₹10 ಸಾವಿರ ದಂಡ ವಿಧಿಸಿ ಕಲಬುರಗಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್(ವಿಶೇಷ ಪೋಕ್ಸೊ) ನ್ಯಾಯಾಲಯದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಆದೇಶಿಸಿದ್ದಾರೆ. ನೊಂದ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ₹7 ಲಕ್ಷ ಪರಿಹಾರ ನೀಡುವಂತೆಯೂ ಆದೇಶದಲ್ಲಿ ತಿಳಿಸಿದ್ದಾರೆ.

ಘಟನೆಯ ವಿವರ: 2023ರ ಮಾರ್ಚ್ 26ರ ನಸುಕಿನ 12.18ಕ್ಕೆ ಯಲ್ಲಪ್ಪನು ಬಾಲಕಿಗೆ ಫೋನ್ ಮಾಡಿ ಕರೆಸಿಕೊಂಡು, 'ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ನಿನ್ನ ಬಿಟ್ಟು ಇರಲ್ಲ. ನಿನ್ನನ್ನು ಮದುವೆ ಮಾಡಿಕೊಳ್ಳುತ್ತೇನೆ' ಎಂದು ಪುಸಲಾಯಿಸಿದ್ದ. ಬಾಲಕಿ ಒಪ್ಪಿರಲಿಲ್ಲ. ಆದರೆ, ಯಲ್ಲಪ್ಪನ ತಂದೆ ದೇವಪ್ಪ, 'ಏನಾದರೂ ಸಮಸ್ಯೆ ಬಂದರೆ ನಾನು ನೋಡಿಕೊಳ್ಳುತ್ತೇನೆ' ಎಂದು ಬಲವಂತದಿಂದ ಅವರಿಬ್ಬರನ್ನೂ ಆಟೊದಲ್ಲಿ ಕಲಬುರಗಿ ರೈಲು ನಿಲ್ದಾಣದ ತನಕ ಕರೆತಂದು ಸೊಲ್ಲಾಪುರದತ್ತ ಹೋಗುವ ರೈಲು ಹತ್ತಿಸಿದ್ದ. ಬಳಿಕ ಯಲ್ಲಪ್ಪನು ಬಾಲಕಿಯನ್ನು ಪುಣೆಗೆ ಕರೆದುಕೊಂಡು ಹೋಗಿ ಅತ್ಯಾಚಾರ ಎಸೆಗಿದ್ದ.

ಈ ಸಂಬಂಧ ನೆಲೋಗಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿಯಾಗಿದ್ದ ಜೇವರ್ಗಿ ಪೊಲೀಸ್ ಠಾಣೆಯ ಸಿಪಿಐ ಭೀಮನಗೌಡ ಎ.ಬಿರಾದಾರ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರಪ್ಪ ಬಿ.ತುಪ್ಪದ ವಾದ ಮಂಡಿಸಿದ್ದರು.

ಲೈಂಗಿಕ ದೌರ್ಜನ್ಯ ಶಿಕ್ಷಕ, ಶಿಕ್ಷಕಿ ವಿರುದ್ಧ ಪ್ರಕರಣ ದಾಖಲು

ಬೀದರ್: ಜಿಲ್ಲೆಯ ಕಮಲನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರೌಢಶಾಲೆಯ ಶಿಕ್ಷಕ ಒಂಬತ್ತನೇ ತರಗತಿಯ ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ.

'ಶುಕ್ರವಾರ (ಜೂ.28) ಶಾಲೆಯ ತರಗತಿಯಲ್ಲಿ ವಿದ್ಯಾರ್ಥಿನಿಯೊಬ್ಬಳೇ ಇದ್ದಾಗ ಶಿಕ್ಷಕ ದೌರ್ಜನ್ಯ ಎಸಗಿದ್ದಾನೆ. ಈ ಕುರಿತು ಬಾಲಕಿ ತಂದೆಗೆ ವಿಷಯ ತಿಳಿಸಿದ್ದಾಳೆ. ಬಾಲಕಿ ತಂದೆ ಸೋಮವಾರ ಮುಖ್ಯಶಿಕ್ಷಕರ ಗಮನಕ್ಕೆ ವಿಷಯವನ್ನು ತಂದು ಠಾಣೆಗೆ ದೂರು ಕೊಟ್ಟಿದ್ದಾರೆ. ಶಿಕ್ಷಕ ಹಾಗೂ ಶಿಕ್ಷಕನಿಗೆ ಬೆಂಬಲವಾಗಿ ನಿಂತು ಯಾರಿಗೂ ವಿಷಯ ತಿಳಿಸದಂತೆ ಬಾಲಕಿ ಕುಟುಂಬದವರಿಗೆ ಬೆದರಿಕೆ ಹಾಕಿದ್ದ ಶಿಕ್ಷಕಿ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು ಈ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ. 'ಡಿಡಿಪಿಐ ಹಾಗೂ ಕಮಲನಗರ ಡಿವೈಎಸ್‌ಪಿ ಜೊತೆ ಮಾತನಾಡಿದ್ದೇನೆ. ಪ್ರಕರಣ ದಾಖಲಿಸುವಂತೆ ತಿಳಿಸಲಾಗಿದೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ತಿಳಿಸಿದ್ದಾರೆ.

'ವಿದ್ಯಾರ್ಥಿನಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಶಿಕ್ಷಕನ ಮೇಲೆ ಸೂಕ್ತ ಕ್ರಮ ಕೈಗೊಂಡು ಆಯೋಗಕ್ಕೆ ಮಾಹಿತಿ ನೀಡಬೇಕು. ಜಿಲ್ಲೆಯ ಅನೇಕ ಕಡೆಗಳಲ್ಲಿ ಮಕ್ಕಳ ಹಕ್ಕುಗಳ ಕಾಯ್ದೆ, ಪೋಕ್ಸೊ ಕಾಯ್ದೆ, ಬಾಲ ನ್ಯಾಯ ಕಾಯ್ದೆ ಕುರಿತು ಜಾಗೃತಿ ಮೂಡಿಸಿದರೂ ಇಂತಹ ಪ್ರಕರಣಗಳು ನಡೆಯುತ್ತಿರುವುದು ದುರದೃಷ್ಟಕರ' ಎಂದು ಕೋಸಂಬೆ ಹೇಳಿದ್ದಾರೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಲೋಪ ● ಲೆಕ್ಕಪರಿಶೋಧನೆ ವಾರ್ಷಿಕ ವರದಿಯಲ್ಲಿ ಉಲ್ಲೇಖ

ಕಾರ್ಯಾದೇಶ ಒಬ್ಬರಿಗೆ, ಬಿಲ್ ಇನ್ನೊಬ್ಬರಿಗೆ!

● ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿಯಲ್ಲಿ ಘನ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿಗಾಗಿ ಹೊಸ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದರೂ, ಹಳೆ ಗುತ್ತಿಗೆದಾರರಿಗೆ ಸರಬರಾಜು ಆದೇಶ ನೀಡಿ, ಅಕ್ರಮವಾಗಿ ಕೋಟ್ಯಂತರ ರೂಪಾಯಿ ಮೊತ್ತದ ಬಿಲ್ ಪಾವತಿಸಿರುವುದು ಲೆಕ್ಕ-ಪರಿಶೋಧನೆಯಲ್ಲಿ ಪತ್ತೆಯಾಗಿದೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಜಯನಗರ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಎಇಇ) ಕಚೇರಿಯಲ್ಲಿ ಒಬ್ಬರಿಗೆ ಕಾರ್ಯಾದೇಶ ನೀಡಿದ್ದು, ಮತ್ತೊಬ್ಬರಿಗೆ ಬಿಲ್ ಪಾವತಿ ಮಾಡಲಾಗಿದೆ. ಈ ಬಾಬ್ತಿನಲ್ಲೇ ₹2.95 ಕೋಟಿಯಷ್ಟು ಅಕ್ರಮವಾಗಿರುವುದು ಬಿಬಿಎಂಪಿ ಮುಖ್ಯ ಲೆಕ್ಕಪರಿಶೋಧಕರ 2021–22ನೇ ವಾರ್ಷಿಕ ವರದಿಯಲ್ಲಿ ಬಹಿರಂಗವಾಗಿದೆ.

ವಿಜಯನಗರ ವಿಭಾಗದಲ್ಲಿ ವಾರ್ಡ್ 132, 133, 157 ಮತ್ತು 158ರಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾರ್ಯಾದೇಶ ನೀಡಲಾಗಿದೆ. ಅವರು ಕೆಲಸ ಪ್ರಾರಂಭಿಸಿಲ್ಲ ಎಂದು ಎಇಇ ಹಳೆಯ ಗುತ್ತಿಗೆದಾರರಿಗೇ 'ಸೂಚನಾ ಪತ್ರ' ನೀಡಿದ್ದಾರೆ. ಕಾರ್ಯಾದೇಶಗಳಿಗೂ ಸೂಚನಾ ಪತ್ರದ ದಿನಾಂಕಗಳಿಗೂ ಎರಡರಿಂದ ಆರು ತಿಂಗಳ ಅಂತರವಿದೆ.

ಹೊಸ ಗುತ್ತಿಗೆದಾರರು ಹಳೆಯ ಗುತ್ತಿಗೆದಾರರಿಗಿಂತ ಶೇಕಡ 20ರಿಂದ ಶೇ 40ರಷ್ಟು ಕಡಿಮೆ ಮೊತ್ತಕ್ಕೆ ಗುತ್ತಿಗೆ ಪಡೆದಿದ್ದರು. ಆದರೂ ಹಳೆಯ ಗುತ್ತಿ-ಗೆದಾರರಾದ ಬಿ ಕ್ಲೀನ್ ಬಿ ಹೆಲ್ತಿ, ವಿ.ಆರ್. ಎಂಟರ್‌ಪ್ರೈಸಸ್, ಪ್ರದೀಪ್ ಆರ್. ಎಂಟರ್‌ಪ್ರೈಸಸ್, ಸಂತೋಷ್‌ಕುಮಾರ್ ಎಂಟರ್‌ಪ್ರೈಸಸ್ ಅವರಿಗೆ, ಸರಬರಾಜು ಆದೇಶದ ಮೂಲಕ ತ್ಯಾಜ್ಯ ವಿಲೇವಾರಿ ಮಾಡಿಸಿ ₹1.69 ಕೋಟಿ ಪಾವತಿಸಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಅನ್ನಪೂರ್ಣೇಶ್ರಿ ಅಸೋಸಿಯೇಟ್ಸ್, ಶಿಶಿರ್ ಅಸೋಸಿಯೇಟ್ಸ್, ವಿಶ್ವಾಸ್ ಎಂಟರ್‌ಪ್ರೈಸಸ್ ಅವರಿಗೆ ಘನತ್ಯಾಜ್ಯ ಸಂಗ್ರಹ– ಸಾಗಣೆಗೆ ಕಾರ್ಯಾದೇಶ ನೀಡಲಾಗಿತ್ತು. ಈ ಮೂಲ ಗುತ್ತಿಗೆ-ದಾರರನ್ನು ಹೊರತುಪಡಿಸಿ, ಲಕ್ಷ್ಮೀ ಎಂಟರ್‌ಪ್ರೈಸಸ್, ಉದಯ್ ಕಿರಣ್ ಎಂಟರ್‌ಪ್ರೈಸಸ್, ವರ್ಷಿಣಿ ಕಿರಣ್ ಎಂಟರ್‌ಪ್ರೈಸಸ್ ಅವರಿಗೆ ₹1.25 ಕೋಟಿ ಪಾವತಿಸಲಾಗಿದೆ ಎಂಬುದೂ ವರದಿಯಲ್ಲಿದೆ.

ದಾಸರಹಳ್ಳಿ ವಲಯದ ಘನತ್ಯಾಜ್ಯ ನಿರ್ವಹಣೆ ವಿಭಾಗದ ಎಇಇ ಕಚೇರಿಯಲ್ಲಿ ಘನತ್ಯಾಜ್ಯ ನಿರ್ವಹಣೆಯಲ್ಲಿ ಹೆಚ್ಚುವರಿ ಸಿಬ್ಬಂದಿ ಹಾಜರಾತಿಯ ಮಾಹಿತಿ ನೀಡಿ ಶೇ 16ರಷ್ಟು ಅಂದರೆ ₹1.71 ಕೋಟಿ ಪಾವತಿಸಲಾಗಿದೆ. ಹೆಚ್ಚುವರಿ ಸಿಬ್ಬಂದಿ ಹಾಜರಾತಿ, ವೇತನ ಪಾವತಿಯ ದಾಖಲೆಗಳು ಲಭ್ಯವಾಗಿಲ್ಲದ್ದರಿಂದ ಲೆಕ್ಕಪರಿಶೋಧಕರು ಈ ಮೊತ್ತಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ತ್ಯಾಜ್ಯ ಸಾಗಣೆ (ಸಂಗ್ರಹ ಚಿತ್ರ)

ಮುಖ್ಯಾಂಶಗಳು

- ಬಿಬಿಎಂಪಿ ವಿಜಯನಗರ ವಿಭಾಗದ ನಾಲ್ಕು ವಾರ್ಡ್‌ಗಳಲ್ಲಿ ಅಕ್ರಮ
- 2021–22ನೇ ವಾರ್ಷಿಕ ವರದಿಯಲ್ಲಿ ಉಲ್ಲೇಖ
- ಬಿಲ್ ಪಾವತಿ ವಿಳಂಬಕ್ಕೆ ದಂಡ ಪಾವತಿ

ಘನತ್ಯಾಜ್ಯ ನಿರ್ವಹಣೆ: ಎಲ್ಲೆಲ್ಲಿ ಅಕ್ರಮ?

- ಯಲಹಂಕ ವಿಭಾಗದ ಎಇಇ ಕಚೇರಿಯಲ್ಲಿ ಮಾನವ ಸಂಪನ್ಮೂಲ ಹಾಗೂ ಯಂತ್ರೋಪಕರಣಗಳ ಸರಬರಾಜಿಗೆ 13 ಡಿ.ಸಿ. ಬಿಲ್‌ಗಳ ಮೂಲಕ ₹ 25.22 ಲಕ್ಷ ಪಾವತಿಸಿದ್ದು, ಕಾಮಗಾರಿ ಕೈಗೊಂಡಿರುವ ಬಗ್ಗೆ ದಾಖಲೆಗಳಿಲ್ಲ.
- ದಾಸರಹಳ್ಳಿ ವಲಯದ ಎಇಇ ಕಚೇರಿಯಲ್ಲಿ ವಾಹನ ಇಂಧನ ವೆಚ್ಚ, ನಿರ್ವಹಣೆಯಲ್ಲಿ ನ್ಯೂನತೆಗಳಿವೆ. ಟೆಂಡರ್ ಆಹ್ವಾನಿಸದೆ ಕೆಟಿಪಿಪಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಕೊಟೇಷನ್ ಮೂಲಕ ₹16.48 ಲಕ್ಷ ಪಾವತಿಸಲಾಗಿದೆ.
- ದಾಸರಹಳ್ಳಿ ವಲಯದ ಎಇಇ ಕಚೇರಿಯಲ್ಲಿ ವಿದ್ಯುತ್ ಬೇಡಿಕೆಯನ್ನು ಸರಿಯಾಗಿ ಅಂದಾಜಿಸದೆ, 500 ಕೆವಿಎ ಹೈಟೆನ್ಷನ್ ಲೈನ್ ಸಂಪರ್ಕ ಪಡೆಯಲಾಗಿದೆ. ಶೇ 85ರಷ್ಟೂ ಬಳಕೆ ಕಂಡುಬಂದಿಲ್ಲ. ಇದರಿಂದ ಅನಗತ್ಯವಾಗಿ ₹11.51 ಲಕ್ಷ ವೆಚ್ಚವಾಗಿದೆ.
- ಯಲಹಂಕ ವಿಭಾಗದ ಎಇಇ ಕಚೇರಿಯಲ್ಲಿ ಘನತ್ಯಾಜ್ಯ ನಿರ್ವಹಣೆ, ವಿಲೇವಾರಿಗಾಗಿ ಲಾರಿಗಳನ್ನು ಕಾಂಪ್ಯಾಕ್ಟರ್ ವಾಹನಗಳಿಗೆ ಬದಲಿಸಿ ಕೊಳ್ಳುವ ಆದೇಶವಿದ್ದರೂ ಟಿಪ್ಪರ್ ಲಾರಿಗಳಿಗೆ ₹ 9.85 ಲಕ್ಷ ಪಾವತಿಸಲಾಗಿದೆ.
- ಚಿಕ್ಕಪೇಟೆ ವಿಭಾಗದ ಎಇಇ ಕಚೇರಿಯಲ್ಲಿ ಒಂದು ಲೀಟರ್ ಇಂಧನಕ್ಕೆ ಮೂರು ಕಿ.ಮೀ ಮೈಲೇಜ್ ನೀಡುವ ವಾಹನಗಳ ವಿವರ, ಅವು ಸಂಚರಿಸಿದ ಹಾಗೂ ಇಂಧನ ಪ್ರಮಾಣವನ್ನು ಲಾಗ್ ಪುಸ್ತಕದಲ್ಲಿ ಕಡಿಮೆ ತೋರಿಸಲಾಗಿದೆ. ವಿಭಾಗದ ಮುಖ್ಯಸ್ಥರು ಯಾವುದೇ ಆಕ್ಷೇಪ ವ್ಯಕ್ತಪಡಿಸದೆ ಬಿಲ್ ಪಾವತಿಸಿದ್ದು, ₹6.61 ಲಕ್ಷ ನಷ್ಟ ಉಂಟಾಗಿದೆ.

ರೋಟರಿ ಡಿಸ್ಟ್ರಿಕ್ 3192 ನೂತನ ಗವರ್ನರ್ ಎನ್.ಎಸ್. ಮಹದೇವ ಪ್ರಸಾದ್ ಅವರಿಗೆ ಅಂತರರಾಷ್ಟ್ರೀಯ ನಿಯೋಜಿತ ನಿರ್ದೇಶಕ ಕೆ.ಪಿ. ನಾಗೇಶ್ ಪ್ರಮಾಣವಚನ ಬೋಧಿಸಿದರು

'ಗ್ರಾಮಗಳ ಅಭಿವೃದ್ಧಿಗೆ ರೋಟರಿಯಿಂದ ₹ 100 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಾಮಗಳ ಅಭಿವೃದ್ಧಿಗಾಗಿ ರೋಟರಿ ಸಂಸ್ಥೆಗಳು ₹100 ಕೋಟಿ ವೆಚ್ಚದಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿವೆ' ಎಂದು ರೋಟರಿ ಡಿಸ್ಟ್ರಿಕ್ಟ್ 3192ರ ಗವರ್ನರ್ ಎನ್.ಎಸ್. ಮಹದೇವ ಪ್ರಸಾದ್ ತಿಳಿಸಿದರು.

2024-2025 ನೇ ಸಾಲಿನ ಗವರ್ನರ್ ಆಗಿ ಪ್ರಮಾಣ ವಚನ ಸ್ವೀಕರಿಸಿ ಅವರು ಮಾತನಾಡಿದರು.

ಜನರಿಗೆ, ವನ್ಯಜೀವಿಗಳಿಗೆ ಬೇಸಿಗೆಯಲ್ಲಿ ಜಲಚೇತನ ಯೋಜನೆಯಡಿ ಕುಡಿಯುವ ನೀರಿನ ವ್ಯವಸ್ಥೆ, 9–14 ವರ್ಷ ವಯಸ್ಸಿನ ಮಕ್ಕಳಿಗೆ ರೋಗನಿರೋಧಕ ಚುಚ್ಚುಮದ್ದು ನೀಡುವುದು ಸೇರಿ ಹಲವು ಯೋಜನೆಗಳನ್ನು ರೂಪಿಸಲಾಗಿದೆ ಎಂದು ವಿವರಿಸಿದರು.

'ರೋಟರಿ ಸಂಸ್ಥೆಗಳು ಗ್ರಾಮಗಳ ಅಭಿವೃದ್ಧಿಗಾಗಿ ಪ್ರತಿ ಜಿಲ್ಲೆಗೆ ಕೋಟಿ ರೂಪಾಯಿಗೂ ಮೀರಿ ವೆಚ್ಚ ಮಾಡುವ ಜೊತೆಗೆ ಅರಣ್ಯ ನಾಶ ತಡೆಗೂ ಯೋಜನೆ ರೂಪಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವಸತಿ ಶಾಲೆಗಳ ವಿದ್ಯಾರ್ಥಿಗಳಿಗಾಗಿ ₹ 2.37 ಕೋಟಿ ವೆಚ್ಚದಲ್ಲಿ ಸಮಗ್ರ ವ್ಯಕ್ತಿತ್ವ ಅಭಿವೃದ್ಧಿ ಕಾರ್ಯಕ್ರಮ ರೂಪಿಸಲಾಗಿದೆ. ಆ ವಿದ್ಯಾರ್ಥಿಗಳ ದೈಹಿಕ, ಸಾಮಾಜಿಕ, ಬೌದ್ಧಿಕ ಬೆಳವಣಿಗೆಗೆ ಪೂರಕವಾಗಿ ರೂಪಿಸಿರುವ ಯೋಜನೆಗೆ ರಾಜ್ಯ ಸರ್ಕಾರ ಅನುಮತಿ ನೀಡಿದೆ ಎಂದರು.

ನಿಯೋಜಿತ ರೋಟರಿ ಅಂತರ ರಾಷ್ಟ್ರೀಯ ನಿರ್ದೇಶಕ ಕೆ.ಪಿ. ನಾಗೇಶ್, 2023-24ನೇ ಸಾಲಿನ ಗವರ್ನರ್ ಬಿ. ಶ್ರೀನಿವಾಸಮೂರ್ತಿ, ರೋಟರಿ ಜಿಲ್ಲೆ 3192ರ ನೂತನ ಕಾರ್ಯದರ್ಶಿ ಕೆ.ಟಿ.ನಿರಂಜನ್, ಅಂತ-ರರಾಷ್ಟ್ರೀಯ ನಿರ್ದೇಶಕ ಟಿ.ಎನ್. ಸುಬ್ರಹ್ಮಣ್ಯಂ ಭಾಗವಹಿಸಿದ್ದರು. ಕಾರ್ಯದರ್ಶಿಗಳಾದ ಬಿಳಿಗಿರಿ ಶಿವಕುಮಾರ್, ರಾಜರಾಮ್, ರಾಜೇಶ್ವರಿ, ಪ್ರಚಾರ ಸಮಿತಿ ನಿರ್ದೇಶಕ ಎ.ಸಿ.ಎನ್. ಮೂರ್ತಿ ಪ್ರಮಾಣವಚನ ಸ್ವೀಕರಿಸಿದರು.

ಹೊಸ ಕಾನೂನು: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಮಿನಲ್ ಅಪರಾಧಕ್ಕೆ ಸಂಬಂಧಿಸಿದ ಹೊಸ ಕಾನೂನಿನ ಅಡಿ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಸೋಮವಾರ ಪ್ರಕರಣಗಳು ದಾಖಲಾಗಿವೆ.

ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಸೋಮವಾರ ನಸುಕಿನ 1.30ರ ವೇಳೆಗೆ ಭಾರತ ನ್ಯಾಯ ಸಂಹಿತೆ (ಬಿಎನ್‌ಎಸ್) ಅಡಿ ಮೊದಲ ಪ್ರಕರಣ ದಾಖಲಾಗಿದೆ. ಎರಡನೇ ಪ್ರಕರಣ (ಬೆಳಿಗ್ಗೆ 9ಕ್ಕೆ) ಆಡುಗೋಡಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಎರಡೂ ಆತ್ಮಹತ್ಯೆ ಪ್ರಕರಣಗಳು.

ಮೂರನೇ ಪ್ರಕರಣ ವಿಧಾನಸೌಧ ಠಾಣೆಯಲ್ಲಿ ದಾಖಲಾಗಿದೆ. ಅಂಬೇಡ್ಕರ್ ವೃತ್ತದಲ್ಲಿ ಸೋಮವಾರ ನಸುಕಿನ 4.24ರ ಸುಮಾರಿಗೆ ನಡೆದು ತೆರಳುತ್ತಿದ್ದ ವ್ಯಕ್ತಿಯೊಬ್ಬರ ಕೈಯಿಂದ ಆರೋಪಿಗಳು ಮೊಬೈಲ್ ಕಸಿದು ಪರಾರಿ ಆಗಿದ್ದರು.

ನಂತರ ಬೆಳಿಗ್ಗೆ 9.15 ಸುಮಾರಿಗೆ ಬಿಎನ್‌ಎಸ್ ಸೆಕ್ಷನ್ 304ರ ಅಡಿ ನಗರದಲ್ಲಿ ಮೂರನೇ ಹಾಗೂ ಕೇಂದ್ರ ವಿಭಾಗದಲ್ಲಿ ಮೊದಲ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಅಂಗನವಾಡಿಗಳಿಗೆ ಮೂಲಸೌಕರ್ಯ ಅನುದಾನ ಕೋರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಆರ್. ಹೆಬ್ಬಾಳಕರ ಅವರು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣ ದೇವಿ ಅವರನ್ನು ಇಲ್ಲಿ ಸೋಮವಾರ ಭೇಟಿ ಮಾಡಿ ಇಲಾಖೆ ಬಲವರ್ಧನೆಗೆ ಸಂಬಂಧಿಸಿದ ವಿವಿಧ ಪ್ರಸ್ತಾವನೆಗಳನ್ನು ಸಲ್ಲಿಸಿದರು.

ಅಂಗನವಾಡಿ ಕೇಂದ್ರಗಳಲ್ಲೇ ಪೂರ್ವ ಪ್ರಾಥಮಿಕ ಶಿಕ್ಷಣ (ಎಲ್‌ಕೆಜಿ, ಯುಕೆಜಿ) ನೀಡಲು ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವಂತೆ ಕೇಂದ್ರ ಸಚಿವರಲ್ಲಿ ಮನವಿ ಮಾಡಿದರು.

ಕೇಂದ್ರ ಸಹಭಾಗಿತ್ವದ ವಿವಿಧ ಯೋಜನೆಗಳ ಜಾರಿಗೆ ರಾಜ್ಯಕ್ಕೆ ಬಾಕಿ ಇರುವ ಅನುದಾನವನ್ನು ತುರ್ತಾಗಿ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರಲ್ಲದೆ, ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿರುವ ಅಕ್ಕಿ, ಗೋಧಿಯನ್ನು ಕೂಡಲೇ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಕೋರಿದರು.

ಅಂಗನವಾಡಿಗಳಲ್ಲಿ ಕುಡಿಯುವ ನೀರು, ವಿದ್ಯುತ್ ಸೌಕರ್ಯ ಸೇರಿ ಮೂಲಸೌಕರ್ಯಗಳ ಅಭಿವೃದ್ಧಿಗೆ ಅನುದಾನದ ಅಗತ್ಯವಿದೆ. ಜರೂರಾಗಿ ಅನುದಾನ ಬಿಡುಗಡೆ ಮಾಡಬೇಕು. ಪ್ರಮುಖವಾಗಿ ರಾಜ್ಯದಲ್ಲಿ ಹೊಸದಾಗಿ ಸೃಜಿಸಿರುವ ತಾಲ್ಲೂಕುಗಳಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿ ಮತ್ತು ವಿವಿಧ ಸೌಲಭ್ಯಗಳನ್ನು ಕೂಡಲೇ ಮಂಜೂರು ಮಾಡಬೇಕು ಎಂದು ಮನವಿ ಮಾಡಿದರು.

'ಡೆಂಗಿ ಹತೋಟಿಗೆ ಜನರ ಸಹಕಾರ ಅಗತ್ಯ'

ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಡೆಂಗಿ ಜ್ವರ ಹತೋಟಿಗೆ ಜನರ ಸಹಕಾರ ಮುಖ್ಯ. ರೋಗ ಹರಡದಂತೆ ಆರೋಗ್ಯ ಇಲಾಖೆಯ ಜೊತೆಗೆ ಜನರೂ ಮುಂಜಾಗ್ರತೆ ವಹಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಧಾನಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ-ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವೈದ್ಯರು ಸೂಕ್ತ ಚಿಕಿತ್ಸೆ ನೀಡಿದರೂ, ಹಲವು ಕಾಯಿಲೆಗಳು ಹರಡದಂತೆ ಮುಂಜಾಗ್ರತೆ ಅಗತ್ಯ. ಜನತೆ ಜೀವನ ಶೈಲಿ, ಆಹಾರ ಪದ್ಧತಿಗಳಿಂದಲೂ ಕೆಲ ರೋಗಗಳು ಬಾರದಂತೆ ತಡೆಯಬಹುದು ಎಂದರು.

ವಿಧಾನಸೌಧದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಡಾ.ಬಿ.ಸಿ. ರಾಯ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಹೆಚ್ಚು ಸಮಾಜಮುಖಿಯಾಗಿ ಕೆಲಸ ಮಾಡಬೇಕು. ವೃತ್ತಿ ಧರ್ಮ ಪಾಲಿಸಬೇಕು. ವೈದ್ಯರು ಸ್ವಲ್ಪ ನಿರ್ಲಕ್ಷ್ಯ ತೋರಿದರೂ ಅನಾಹುತವಾಗುತ್ತದೆ ಎಂದರು.

'ಸಿಗರೇಟು ಬಿಟ್ಟಿದ್ದಕ್ಕೆ ಆಯಸ್ಸು ಹೆಚ್ಚಿತು..'

ಸಿಗರೇಟ್ ಆರೋಗ್ಯಕ್ಕೆ ಮಾರಕ ಎಂದರೂ ಬಹಳಷ್ಟು ಜನರು ಸೇದುತ್ತಾರೆ. ಆರೋಗ್ಯಕ್ಕೆ ಆದ್ಯತೆ ನೀಡಿ ದುಶ್ಚಟಗಳಿಂದ ದೂರವಿರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ನನಗೂ ಸಿಗರೇಟು ಸೇದುವ ಅಭ್ಯಾಸವಿತ್ತು. ಇದರಿಂದಾಗಿ ಹೃದಯ ಸಮಸ್ಯೆ ಕಾಣಿಸಿಕೊಂಡಿತ್ತು. ಆಂಜಿಯೋಪ್ಲಾಸ್ಟ್ ಮಾಡಿಸಿಕೊಳ್ಳಬೇಕಾಯಿತು. ಸಿಗರೇಟು ಸೇದುವುದನ್ನು ಬಿಟ್ಟಿದ್ದರಿಂದ ಆರೋಗ್ಯ, ಆಯಸ್ಸು ವೃದ್ಧಿಸಿದೆ' ಎಂದರು.

ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿಯೂ ಆಗಿದ್ದ ಡಾ.ಬಿ.ಸಿ. ರಾಯ್ ಅವರು ವೈದ್ಯ ವೃತ್ತಿಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದರಿಂದಲೇ ಅವರ ಜನ್ಮ-ದಿನವನ್ನು ಇಂದು ವೈದ್ಯರ ದಿನವಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕೋವಿಡ್ ಸಮಯದಲ್ಲಿನ ವೈದ್ಯರ ಸೇವೆಯನ್ನು ಸಮಾಜ ಸದಾ ಸ್ಮರಿಸುತ್ತದೆ. ಕೋವಿಡ್ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರೋಗ್ಯ ಕ್ಷೇತ್ರದ ಸುಧಾರಣೆಗೆ ಹಲವು ಕ್ರಮಗಳನ್ನು ಕೈಗೊಂಡಿವೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಶಾಸಕ ಎಂ.ಟಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ, ವೈದ್ಯರ ಸಂಘದ ಅಧ್ಯಕ್ಷ ವಿವೇಕ್ ದೊರೆ ಉಪಸ್ಥಿತರಿದ್ದರು.

ವೈದ್ಯರ ದಿನಾಚರಣೆ

ನೆಲಮಂಗಲ ಸಮೀಪದ ನಂದರಾಮಯ್ಯನಪಾಳ್ಯದಲ್ಲಿರುವ ಬ್ಲೂಮೂನ್ ಶಾಲೆಯ ವಿದ್ಯಾರ್ಥಿಗಳು ವೈದ್ಯರ ದಿನಾಚರಣೆ ಪ್ರಯುಕ್ತ ಸರ್ಕಾರಿ ಆಸ್ಪತ್ರೆ ಹಾಗೂ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡಿ ವೈದ್ಯರಿಗೆ ಶುಭಾಶಯ ಕೋರಿದರು

'ವೈದ್ಯ ಕಾಲೇಜು: ಎನ್‌ಆರ್‌ಐ ಕೋಟಾಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 2025-26ನೇ ವರ್ಷದಿಂದ ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾ ಆರಂಭಿಸಲು ಸೂಪರ್ ನ್ಯೂಮರರಿ ಎಂಬಿಬಿಎಸ್ ಸೀಟುಗಳ ಮಂಜೂರಾತಿ ಕೋರಿರುವ ವೈದ್ಯಕೀಯ ಶಿಕ್ಷಣ ಇಲಾಖೆ ಬೇಡಿಕೆಯನ್ನು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಖಂಡಿಸಿದೆ.

'ಇದು ರಾಜ್ಯ ಸರ್ಕಾರದ ಆರ್ಥಿಕ ಮತ್ತು ನೈತಿಕ ದಿವಾಳಿತನ. ಎನ್‌ಆರ್‌ಐ ಕೋಟಾದ ಹೆಸರಿನಲ್ಲಿ ಕೋಟ್ಯಂತರ ಹಣ ಗಳಿಸುವ ಹುನ್ನಾರ' ಎಂದು ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ಟೀಕಿಸಿದ್ದಾರೆ.

ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಅಧ್ಯಕ್ಷರಿಗೆ ಪತ್ರ ಬರೆದಿದ್ದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ-ಪ್ರಕಾಶ್ ಪಾಟೀಲ, ರಾಜ್ಯದಲ್ಲಿರುವ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಕ್ಕಾಗಿ 508 ಹೆಚ್ಚುವರಿ ಸೂಪರ್ ನ್ಯೂಮರರಿ ಎಂಬಿಬಿಎಸ್ ಸೀಟುಗಳನ್ನು ಸೃಷ್ಟಿಸಲು ಕೋರಿದ್ದರು.

'ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡದಿದ್ದರೆ ಕಠಿಣಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಬೇಕು' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಎಚ್.ಸಿ. ಮಹದೇವಪ್ಪ

ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು, ಸಹಕಾರ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯದಲ್ಲಿ ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಕುರಿತು ಆಯುಕ್ತರ ಅಧ್ಯಕ್ಷತೆಯಲ್ಲಿ ಸೋಮವಾರ ಅವರು ಪ್ರಗತಿ ಪರಿಶೀಲನೆ ನಡೆಸಿದರು.

'ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ವಿಳಂಬ ಮಾಡುತ್ತಿರುವ ಮತ್ತು ನಿರ್ಲಕ್ಷ್ಯ ತೋರಿಸುತ್ತಿರುವ ಇಲಾಖೆಗಳ ಅಧಿಕಾರಿಗಳನ್ನು ನೇರವಾಗಿ ಹೊಣೆಗಾರರ-ನ್ನಾಗಿ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಬ್ಯಾಕ್ ಲಾಗ್ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡುವಂತೆ ಎಲ್ಲ ಇಲಾಖೆಗಳಿಗೆ ಪತ್ರ ಬರೆಯಲಾಗಿದೆ. ಸರ್ಕಾರದ ಸೂಚನೆ ಮತ್ತು ನ್ಯಾಯಾಲಯದ ಆದೇಶದ ಹೊರತಾಗಿಯೂ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದರು.

ಮೈಸೂರು ವಿಶ್ವವಿದ್ಯಾನಿಲಯ-ದಲ್ಲಿ ಬಾಕಿ ಇರುವ 76 ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದ ಅವರು, 'ಬ್ಯಾಕ್‌ಲಾಗ್ ನೇಮಕಾತಿಗೆ ವಿನಾಯಿತಿ ನೀಡುವಂತೆ ಹಲವು ನಿಗಮ, ಮಂಡಳಿಗಳು ವಿನಂತಿಸಿವೆ. ಈ ವಿಷಯವನ್ನು ಸಂಪುಟ ಸಭೆಯಲ್ಲಿ ಮಂಡಿಸಿ, ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದರು.

ವಾಲ್ಮೀಕಿ ನಿಗಮದ ಹಗರಣ ● ವಾಲ್ಮೀಕಿ ಸಮುದಾಯದವರಿಂದ ಪ್ರತಿಭಟನೆ

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಬ್ಯಾಂಕ್ ಖಾತೆಯಿಂದ ₹89 ಕೋಟಿ ಅಕ್ರಮ ವರ್ಗಾವಣೆ ಹಗರಣದಲ್ಲಿ ತಪ್ಪಿತಸ್ಥರನ್ನು ಪತ್ತೆಹಚ್ಚಿ, ಕಠಿಣ ಕ್ರಮ ಜರುಗಿಸುವಂತೆ ಆಗ್ರಹಿಸಿ ವಾಲ್ಮೀಕಿ ನವ ಸಮಾಜ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

'ವಾಲ್ಮೀಕಿ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಸರ್ಕಾರ ಸರಿಪಡಿಸಬೇಕು. ಮುಂದಿನ ದಿನಗಳಲ್ಲಿ ಇಂತಹ ಹಗರಣಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ನಿಗಮದಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಆಯಾ ಆರ್ಥಿಕ ವರ್ಷದಲ್ಲಿಯೇ ಸಮುದಾಯದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು. ನಿಗಮದಲ್ಲಿ ನಡೆಯುತ್ತಿರುವ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಹಾವಳಿಯನ್ನು ನಿಯಂತ್ರಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ಪರಿಶಿಷ್ಟ ಪಂಗಡದ ಶೇಕಡ 7ರಷ್ಟು ಮೀಸಲಾತಿಯನ್ನು ಸಂವಿಧಾನದ ಅನುಚ್ಛೇದ 9ರಲ್ಲಿ ಸೇರ್ಪಡೆ ಮಾಡಬೇಕು. ಪರಿಶಿಷ್ಟ ಪಂಗಡದ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡದಂತೆ ಕ್ರಮ ಕೈಗೊಳ್ಳಬೇಕು. ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವೆಂದು ಮರುನಾಮಕರಣ ಮಾಡಬೇಕು. ವಾಲ್ಮೀಕಿ ಅಧ್ಯಯನ ಪೀಠಕ್ಕೆ ಹೆಚ್ಚುವರಿ ಅನುದಾನ ಒದಗಿಸಬೇಕು' ಎಂದು ಆಗ್ರಹಿಸಿದರು.

'ಪರಿಶಿಷ್ಟ ಪಂಗಡದ ವಿದ್ಯಾರ್ಥಿ-ಗಳಿಗೆ ಕಡ್ಡಾಯವಾಗಿ ವಿದ್ಯಾರ್ಥಿನಿ-ಲಯ ಪ್ರವೇಶಕ್ಕೆ ಅವಕಾಶ ನೀಡಬೇಕು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ವಾಲ್ಮೀಕಿ ಅಧ್ಯಯನ ಪೀಠ ಸ್ಥಾಪಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಿಕೊಳ್ಳಬೇಕು' ಎಂದರು.

ರಾಯಚೂರು ವಲ್ಲಪಲ್ಲಿ ಮಠದ ವರದದಾನೇಶ್ವರ ಸ್ವಾಮೀಜಿ, ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಿ.ಎನ್. ಲಕ್ಷ್ಮಿಪತಿ, ಕಲ್ಯಾಣ ಕರ್ನಾಟಕ ಭಾಗದ ಅಧ್ಯಕ್ಷ ಲಿಂಗಯ್ಯ ನಾಯಕ್, ಯುವ ಘಟಕದ ಅಧ್ಯಕ್ಷ ತುಳಸಿರಾಮ ಭಾಗವಹಿಸಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ವಾಲ್ಮೀಕಿ ನವಸಮಾಜ ಸಂಘದ ಸದಸ್ಯರು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

'ಸೋಲಿನ ಪರಾಮರ್ಶೆಗೆ ಸತ್ಯಶೋಧನಾ ಸಮಿತಿ ರಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಸೋಲಿನ ಪರಾಮರ್ಶೆಗೆ ಸತ್ಯಶೋಧನಾ ಸಮಿತಿ ರಚಿಸಲಾಗುವುದು. ಈ ಸಮಿತಿ ಪ್ರತಿ ವಿಧಾನಸಭಾ ಕ್ಷೇತ್ರವಾರು ಅಧ್ಯಯನ ನಡೆಸಿ ವರದಿ ನೀಡಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಪದಾಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಕಲ್ಯಾಣ ಕರ್ನಾಟಕ ಹೊರತಾಗಿ ಉಳಿದೆಡೆ ಏಕೆ ಪಕ್ಷಕ್ಕೆ ಸೋಲಾಯಿತು ಎಂದು ಸತ್ಯಶೋಧನಾ ಸಮಿತಿ ಪರಾಮರ್ಶೆ ನಡೆಸಲಿದೆ. ವಿಭಾಗವಾರು ನಾಲ್ಕು ಸಭೆಗಳನ್ನು ನಡೆಸಲಾಗುವುದು' ಎಂದರು.

'ಪಕ್ಷದ ಸಭೆಗಳನ್ನು ಪಕ್ಷದ ಕಚೇರಿ, ಕಲ್ಯಾಣ ಮಂಟಪದಲ್ಲಿ ನಡೆಸಬೇಕು. ಶಾಸಕರ ಮನೆಯಲ್ಲಿ ಸಭೆ ನಡೆಸಿದರೆ ಅಂಥವರ ವಿರುದ್ಧ ಕ್ರಮ ಜರುಗಿಸಲಾಗು-ವುದು' ಎಂದು ಶಿವಕುಮಾರ್ ಹೇಳಿದರು.

'ಜಿಲ್ಲಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ 5 ವರ್ಷ ಹಾಗೂ 2 ವರ್ಷ ಅವಧಿಗೆ ಅಧಿಕಾರ ನಡೆಸಿದವರು ಮತ್ತು ಸಕ್ರಿಯವಾಗಿ ಇಲ್ಲದಿರುವವರನ್ನು ಬದಲಿಸಲು ಪ್ರಸ್ತಾವ ಸಲ್ಲಿಸಲು ಸೂಚನೆ ನೀಡಲಾಗಿದೆ' ಎಂದರು.

ಅಧಿಕಾರಿಗಳ ಜತೆ ಸಿ.ಎಂ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘವಾಗಿ ಚರ್ಚೆ ನಡೆಸಿದರು.

ಇದೇ 15ರಿಂದ 26ರವರೆಗೆ ವಿಧಾನ ಮಂಡಲ ಅಧಿವೇಶನ ನಡೆಯಲಿದೆ. ಅಧಿವೇಶನದಲ್ಲಿ ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಹಲವು ವಿಚಾರಗಳ ಪ್ರಸ್ತಾವಗೊಳ್ಳುವ ಸಾಧ್ಯತೆಯಿದೆ. ಜೊತೆಗೆ, ಇತ್ತೀಚಿನ ಕೆಲವು ಅಪರಾಧ ಪ್ರಕರಣಗಳೂ ಚರ್ಚೆಗೆ ಬರುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಮಾತುಕತೆ ನಡೆಸಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್,- ಗುಪ್ತಚರ ಇಲಾಖೆ ಮುಖ್ಯಸ್ಥ ಶರತ್ ಚಂದ್ರ, ಸಿಐಡಿ ಮುಖ್ಯಸ್ಥ ಎ.ಎಂ. ಸಲೀಂ, ಅಲೋಕ್ ಕುಮಾರ್ ಸಭೆಯಲ್ಲಿದ್ದರು.

'ಕಾನ್‌ಸ್ಟೆಬಲ್‌ಗಳ ವರ್ಗಾವಣೆಗೆ ಹೊಸ ನಿಯಮ'

ಬೆಂಗಳೂರು: 'ಕಾನ್‌ಸ್ಟೆಬಲ್‌ಗಳ ಅಂತರ ಜಿಲ್ಲಾ ಮತ್ತು ಪತಿ- ಪತ್ನಿ ವರ್ಗಾವಣೆಗೆ ಸಂಬಂಧಿಸಿದಂತೆ ಕೆಲವು ಹೊಸ ನಿಯಮಗಳನ್ನು ಶೀಘ್ರದಲ್ಲಿ ರೂಪಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಅಂತರಜಿಲ್ಲಾ ವಿಚಾರವಾಗಿ ಕೆಲವು ಪೊಲೀಸರು ಕುಟುಂಬ ಸಮೇತರಾಗಿ ಪರಮೇಶ್ವರ ಅವರನ್ನು ಸೋಮವಾರ ಭೇಟಿ ಮಾಡಿ ಸಮಸ್ಯೆ ಹೇಳಿಕೊಂಡರು.

ಈ ವೇಳೆ ಅವರು, 'ಇದಕ್ಕಾಗಿ ನಿಯಮ ಗಳನ್ನು ರಚಿಸಲಾಗುತ್ತದೆ. ಉತ್ತರ ಕರ್ನಾಟಕ ಕಡೆಯವರು ಬೆಂಗಳೂರಿಗೆ ಬಂದು ಕೆಲಸ ಮಾಡುವಾಗ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಾರೆ ಎಂದರು.

ಲೋನಾವಲಾ ಜಲಪಾತದಲ್ಲಿ ಕೊಚ್ಚಿಹೋಗಿದ್ದ ಐವರ ಶವ ಪತ್ತೆ

ಪುಣೆ (ಪಿಟಿಐ): ಇಲ್ಲಿನ ಲೋನಾವಲಾ ವಲಯದ ಭುಶಿ ಅಣೆಕಟ್ಟೆ ಸಮೀಪದ ಜಲಪಾತದಲ್ಲಿ ಸೋಮವಾರ ಕೊಚ್ಚಿಹೋಗಿದ್ದ ಐವರ ಶವಗಳು ಪತ್ತೆಯಾಗಿವೆ. ನಾಲ್ಕು ವರ್ಷದ ಬಾಲಕನ ಶವವು ಕಡೆಯದಾಗಿ ಸೋಮವಾರ ಸಂಜೆ ಪತ್ತೆಯಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಮಧ್ಯಾಹ್ನ ಮಹಿಳೆ ಹಾಗೂ ನಾಲ್ವರು ಮಕ್ಕಳು ಜಲಪಾತದಲ್ಲಿ ನೀರಿನ ಸೆಳೆತಕ್ಕೆ ಸಿಕ್ಕು ಕೊಚ್ಚಿಹೋಗಿದ್ದರು. ನಾಲ್ವರ ಶವಗಳು ಭಾನುವಾರ ಸಂಜೆಯೇ ಪತ್ತೆಯಾಯಿತು ಎಂದು ಲೋನಾವಲಾ ಠಾಣೆಯ ಹಿರಿಯ ಇನ್‌ಸ್ಪೆಕ್ಟರ್ ಸುಹಾಸ್ ಜಗತಾಪ್ ತಿಳಿಸಿದರು. ನೀರಿನ ಸೆಳೆತದಿಂದ ಪಾರಾಗಲು ಮಕ್ಕಳು ಮತ್ತು ಮಹಿಳೆ ಪರಸ್ಪರ ಹಿಡಿದುಕೊಂಡಿದ್ದ ಹಾಗೂ ಬಳಿಕ ನೀರಿನಲ್ಲಿ ಕೊಚ್ಚಿಹೋಗಿದ್ದ ದೃಶ್ಯದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿತ್ತು.

ಮೃತರನ್ನು ಶಹಿಸ್ತಾ ಲಿಯಾಖತ್ ಅನ್ಸಾರಿ (36), ಅಮಿನಾ ಅದಿಲ್ ಅನ್ಸಾರಿ (13), ಉಮೇರಾ ಅದಿಲ್ ಅನ್ಸಾರಿ (8) ಅದ್ನಾನ್ ಅನ್ಸಾರಿ ಮಮ್ತು ಮರಿಯಾ ಅನ್ಸಾರಿ (9) ಎಂದು ಗುರುತಿಸಲಾಗಿದೆ. ಈ ಎಲ್ಲವೂ ಪುಣೆಯ ಹದಪ್ಸರ್‌ನ ಸಯ್ಯದ್ ನಗರದ ನಿವಾಸಿಗಳು. 'ಸಂಬಂಧಿಗಳಾದ 16–17 ಜನರು ಜಲಪಾತದ ಬಳಿಗೆ ವಿಹಾರ ಹೋಗಿದ್ದರು. ಧಾರಾಕಾರ ಮಳೆಯ ಕಾರಣ ನೀರಿನ ಹರಿವು ಏಕಾಏಕಿ ಹೆಚ್ಚಾಗಿತ್ತು. ಇದು ಅರಿವಿಗೆ ಬರುವ ವೇಳೆಗೆ ಕೆಲವರು ಜಲಪಾತದ ಮಧ್ಯೆ ಸಿಕ್ಕಿಬಿದ್ದಿದ್ದರು. ಪಾರಾಗುವ ಯತ್ನ ಫಲಿಸಲಿಲ್ಲ. ರಭಸ ಹೆಚ್ಚಾದಂತೆ ಎಲ್ಲರೂ ಕೊಚ್ಚಿಹೋಗಿದ್ದರು.

ಕರ್ನಾಟಕ ರಕ್ಷಣಾ ವೇದಿಕೆಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ

ಕನ್ನಡಿಗರಿಗೆ ಮೀಸಲಾತಿ: ಕರವೇ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕ್ಷೇತ್ರದ ಸಂಸ್ಥೆ-ಗಳಲ್ಲಿನ ಶೇ 100ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ಟಿ.ಎ. ನಾರಾಯಣಗೌಡ ಬಣದ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟಿಸಿದರು.

'ಕನ್ನಡಿಗರಿಗೆ ಕೆಲಸ ಕೊಟ್ಟರೆ ಶಾಂತಿ, ಇಲ್ಲದಿದ್ದರೆ ಕ್ರಾಂತಿ', 'ಕರ್ನಾಟಕದ ನೆಲದಲ್ಲಿ ಕನ್ನಡಿಗರಿಗೆ ಉದ್ಯೋಗ' ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಕೂಗಿದರು.

ಅಧ್ಯಕ್ಷ ಟಿ.ಎ.ನಾರಾಯಣಗೌಡ ಮಾತನಾಡಿ, 'ರಾಜ್ಯ ಸರ್ಕಾರ ಬಲಿಷ್ಠವಾದ ಕಾನೂನು ರೂಪಿಸಿ, ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಒದಗಿಸಬೇಕು' ಎಂದು ಒತ್ತಾಯಿಸಿದರು.

'ಎಲ್ಲ ಖಾಸಗಿ ಸಂಸ್ಥೆಗಳಲ್ಲಿ, ಕೇಂದ್ರ–ರಾಜ್ಯ ಸರ್ಕಾರಗಳ ಸಂಸ್ಥೆಗಳು ಮತ್ತು ಸಾರ್ವಜನಿಕ ವಲಯದ ಘಟಕಗಳ ಸಿ ಮತ್ತು ಡಿ ದರ್ಜೆಯ ಶೇ 100ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಬೇಕು. ಸರೋಜಿನಿ ಮಹಿಷಿ ವರದಿಗೆ ಕಾನೂನು ಬಲ ನೀಡಿ ಅದನ್ನು ಜಾರಿಗೊಳಿಸಬೇಕು. ಕಾಯ್ದೆ ಜಾರಿಗೆ ಆಗುವವರೆಗೂ ಹೋರಾಟ ಕೈ ಬಿಡುವುದಿಲ್ಲ' ಎಂದರು.

'ರಾಜ್ಯ ಸರ್ಕಾರ ರೂಪಿಸುವ ಕಾನೂನಿನ ಪರಿಣಾಮಕಾರಿ ಜಾರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಅಧಿಕಾರ ನೀಡಬೇಕು. 15 ವರ್ಷಗಳಿಂದ ರಾಜ್ಯದಲ್ಲಿ ನೆಲೆಸಿರುವವರನ್ನು ಕನ್ನಡಿಗರೆಂದು ಪರಿಗಣಿಸುವ ನಿಯಮವಿದೆ. ಇಲ್ಲಿ ನೆಲೆಸಿರುವವರಿಗೆ ಕಡ್ಡಾಯವಾಗಿ ಕನ್ನಡ ಬರವಣಿಗೆಯ ಪರೀಕ್ಷೆಯನ್ನು ನಡೆಸಿ, ಅದರಲ್ಲಿ ಉತ್ತೀರ್ಣರಾದವರನ್ನು ಮಾತ್ರ ಕನ್ನಡಿಗರೆಂದು ಪರಿಗಣಿಸಬೇಕು' ಎಂದು ಆಗ್ರಹಿಸಿದರು.

ನಟ ಪ್ರೇಮ್ ಮತ್ತು ನಟಿ ಪೂಜಾ ಗಾಂಧಿ ಪ್ರತಿಭಟನೆ ಬೆಂಬಲಿಸಿ ಮಾತನಾಡಿದರು. ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಸಮೀವುಲ್ಲಾ ಖಾನ್, ವೀರಸಂಗಯ್ಯ, ನಟಿ ಅಶ್ವಿನಿ ಭಾಗವಹಿಸಿದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮುವಾರ ನಡೆದ ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರು ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಕೆನರಾ ಬ್ಯಾಂಕ್ केनरा बैंक Canara Bank

Premises & Estate Section, G A Wing, Head Office, No. 112, J C Road, Bangalore - 560002

NOTICE FOR OPERATION AND MAINTENANCE OF ELECTRICAL INSTALLATIONS

Fresh tenders are invited for the Operation and Maintenance of Electrical Installations in Canara Bank, Head office Annex, Naveen Complex Building. For further details and other terms and conditions, please visit Bank's website **https://canarabank.com/tenders.aspx.** For any clarifications contact 080-22238819/22297695 extn 219/214. Last date for submission of tender form is **23.07.2024, 3:00 PM.**

Further, all addendum/corrigendum including modification if any, will be hosted at the Bank's website only.

Place : Bengaluru, Date : 02.07.2024 Sd/- Asst. General Manager

ಕ್ಷೇಮ ಕುಶಲ

ಚಿಕಿತ್ಸೆಯಲ್ಲಿ ಮಾತು ಮತ್ತು ಮಾತ್ರೆ!

ಡಾ. ಕೆ. ಎಸ್. ಪವಿತ್ರ

'ಡಾಕ್ಟ್ರೇ, ಮಾತ್ರೆ ಬಿಟ್ಟ ತಕ್ಷಣ ಮತ್ತೆ ತಲೆನೋವು. ನಿದ್ರೆ ಬರದೇ ಇರೋದು, ಮೈಕೈ ನೋವು ಎಲ್ಲಾ ವಾಪಸ್ ಬಂದ್ಬಿಡುತ್ತೆ. ಮಾತ್ರೆ ತೊಗೊಳ್ತಾನೇ ಇದ್ರೆ ನಾನು ಚೆನ್ನಾಗೇ ಇರ್ತೀನಿ. ಈ ಕಾಯಿಲೆಗಳೆಲ್ಲ ಗುಣವಾಗೋದೇ ಇಲ್ವೆ?' 'ಸೊಮಟೈಸೇಷನ್' ಎಂಬ ಮನೋದೈಹಿಕ ಕಾಯಿಲೆಯಿಂದ ನರಳುವ ಮಹಿಳೆ ಕೇಳಿದ ಪ್ರಶ್ನೆ.

'ನನ್ನ ಬಿ.ಪಿ. ಸರೀನೇ ಇದೆ. ಆದ್ರೂ ಡಾಕ್ಟ್ರು ಮಾತ್ರೆ ನಿಲ್ಲಿಸೋದಿಕ್ಕೇ ಬಿಡಲ್ಲ. ಅವರನ್ನೋದು 'ಬಿ.ಪಿ.' ಸರಿಯಾಗಿರೋದು ಬಿ.ಪಿ. ಮಾತ್ರೆಯಿಂದ ಅಷ್ಟೆ. ಬಿ.ಪಿ. ಮಾತ್ರೆ ಬಿಟ್ಟರೆ ಬಿ.ಪಿ. ಜಾಸ್ತಿಯಾಗಿ ಹಾರ್ಟ್ ಅಟ್ಯಾಕೋ, ಸ್ಟ್ರೋಕೋ ಆಗುತ್ತೆ. ಅದಕ್ಕೆ ಬಿ.ಪಿ. ಮಾತ್ರೆ ಮಾತ್ರ ಬಿಡಬೇಡಿ' ಅಂತ. ಏನೋಪ್ಪ ನನಗೆ ಬಿ.ಪಿ. ಸರೀ ಇದ್ರೂನೂ ಇವರು ಯಾಕೆ ಬಿ.ಪಿ. ಮಾತ್ರೆ ತೆಗೆದುಕೊಳ್ಳಲೇಬೇಕು ಅಂತ ಹೆದರಿಸ್ತಾರೆ ಅನ್ನಿಸುತ್ತೆ'.

ಹೀಗೆ ಕಾಯಿಲೆಗಳಿಗೆ ಶಾಶ್ವತ ಗುಣಮುಖವಾಗುವ ಪರಿಹಾರವನ್ನು ಹುಡುಕುತ್ತಾ ವೈದ್ಯರಿಂದ ವೈದ್ಯರಿಗೆ, ವೈದ್ಯಕೀಯ ಪದ್ಧತಿಯಿಂದ ಪದ್ಧತಿಗೆ, ಜಾಹೀರಾತಿನಿಂದ ಜಾಹೀರಾತಿಗೆ ಹಾರುವವರು ಬಹಳಷ್ಟು ಜನ. ಅವರೆಲ್ಲರ ಹಂಬಲ ಒಂದೇ 'ಗುಣಮುಖವಾಗುವುದು'.

'ಗುಣವಾಗುವುದು' ಎಂದರೆ ಕೇವಲ ರೋಗಲಕ್ಷಣಗಳು ಮಾಯವಾಗಿ ಆರಾಮವಾಗಿರುವುದಲ್ಲ; ಮಾತ್ರೆ-ಔಷಧ-ವೈದ್ಯರ ಭೇಟಿ ಯಾವುದೂ ಇರದೆ, ರೋಗದ ಲಕ್ಷಣಗಳು ಮತ್ತೆ ಬರದಿರುವುದು ಎಂಬುದೇ ಇಲ್ಲಿನ ನಿರೀಕ್ಷೆ.

ರೋಗಿಗಳ ಇಂಥ ನಿರೀಕ್ಷೆಗಳನ್ನು ನಿಭಾಯಿಸಲು, ಚಿಕಿತ್ಸೆಯನ್ನು ಅವರು ಒಪ್ಪಿಕೊಳ್ಳುವಂತೆ ಮಾಡಲು ಚಿಕಿತ್ಸೆಯಲ್ಲಿ ವೈದ್ಯರು-ರೋಗಿಗಳು ಇಬ್ಬರೂ ಮಾತ್ರೆಯಷ್ಟೇ 'ಮಾತ'ನ್ನೂ ಉಪಯೋಗಿಸಬೇಕಾಗುತ್ತದೆ. ಹಾಗಾಗಿ ಕೇವಲ ಮಾನಸಿಕ ರೋಗವಲ್ಲ; ಯಾವುದೇ ರೋಗದಲ್ಲಿಯೂ ಮಾತ್ರೆಯಷ್ಟೇ ಮಹತ್ವವನ್ನು ಸಂದೇಹ-ಪ್ರಶ್ನೆಗಳು-ತಪ್ಪು ನಂಬಿಕೆಯನ್ನು ಕೇಳುವ 'ರೋಗಿಯ ಮಾತು', ಅವುಗಳಿಗೆ ಸಮಾಧಾನ ನೀಡಿ, ತನ್ನ ಅನುಭವದಿಂದ ಸಲಹೆ ನೀಡುವ 'ವೈದ್ಯನ ಮಾತು' - ಈ ಎರಡಕ್ಕೂ ನೀಡಬೇಕಾಗುತ್ತದೆ.

ಬಾಯಿಮಾತಿಗೆ ಬಹುಜನರು ಮಾತ್ರೆಗಳಿಂದ ಅಡ್ಡಪರಿಣಾಮ ಬರಬಹುದು ಎಂದು, ಮತ್ತೆ ಮತ್ತೆ ಹೇಳಿದರೂ, ಜೀವನಶೈಲಿಯ ಸೂತ್ರಗಳಾದ ನಿಯಮಿತ ವ್ಯಾಯಾಮ-ಆಹಾರಕ್ರಮಗಳನ್ನು ಪಾಲಿಸುವುದು, ಔಷಧಗಳನ್ನು ತೆಗೆದುಕೊಳ್ಳುವ ಕಷ್ಟಕ್ಕಿಂತ ಗುರುತರವಾದದ್ದು ಎನ್ನುವುದನ್ನು ಒಪ್ಪುತ್ತಾರೆ. ಯಾವುದಾದರೊಂದು ಪವಾಡದಂತಹ ಪರಿಹಾರ ನಮಗೆ ಸಿಕ್ಕಬಾರದೆ ಎಂಬ ಆಸೆ ಅವರದ್ದು! ಅಂದರೆ 'ನಾವು ಇರುವ ಹಾಗೇ ಇರುತ್ತೇವೆ. ಮಧ್ಯೆ ಮಧ್ಯೆ ಹೇಗೆ ಬೇಕಾದರೂ ಹಾಗೆ ತಿಂದರೂ ಸರಿ / ವಾಕಿಂಗ್ ಮಾಡದಿದ್ದರೂ ಸರಿ / ಕುಡಿದು-ಸಿಗರೇಟು ಸೇದಿ ತಂಬಾಕು ಅಗಿದರೂ ಪರವಾಗಿಲ್ಲ, ಕಾಯಿಲೆ ಮಾತ್ರ ತಲೆ ಹಾಕಬಾರದು! ಒಂದು ಸಲ ವೈದ್ಯರ ಬಳಿ ಹೋಗಿ ಬಂದರೆ ಸಾಕಾಗಬೇಕು; ಗರಿಷ್ಠ ಹತ್ತರಿಂದ-ಇಪ್ಪತ್ತು ದಿನಗಳಲ್ಲಿ ಮತ್ತೆ ಇನ್ನೆಂದೂ ವೈದ್ಯರ ಬಳಿ ಹೋಗದಂತೆ ಕಾಯಿಲೆ ಮಂಗ ಮಾಯವಾಗಬೇಕು' ಎಂಬುದು ಅವರ ಬಲವಾದ ಆಶಯ. ಇದು ಹೊರಹೊಮ್ಮುವುದು ವೈದ್ಯರ ಬಳಿ ರೋಗಿಗಳು ಬಂದು ಕೇಳುವ 'ಡಾಕ್ಟ್ರೇ ಇನ್ನೆಷ್ಟು ಸಲ ನಾವು ಬರಬೇಕು? ಮಾತ್ರೆ ನಿಲ್ಲಿಸೋಕೆ ಆಗೋದೇ ಇಲ್ವೆ? ಈ ಕಾಯಿಲೆ ನಮ್ಮನ್ನು ಬಿಡೋದು ಯಾವಾಗ?' ಮೊದಲಾದ ಮಾತುಗಳ ಮೂಲಕ.

ಇಂದು ಹೆಚ್ಚಿನ ಕಾಯಿಲೆಗಳ ಅವಧಿ ದೀರ್ಘವಾಗಿದೆ. ಹಿಂದೆ ಕೆಲವು ದಿನಗಳಲ್ಲಿ ತನ್ನಿಂತಾನೇ ಗುಣವಾಗುತ್ತಿದ್ದ, ಮನೆ ಮದ್ದಿನಿಂದ ಸುಲಭ ನಿಯಂತ್ರಣಕ್ಕೆ ಒಳಪಡುತ್ತಿದ್ದ ಸಾದಾ ನೆಗಡಿ-ಕೆಮ್ಮು-ಮೈ ಕಡಿತದಂತಹ ಸಮಸ್ಯೆಗಳು ಇಂದು ತಿಂಗಳುಗಟ್ಟಲೆ ಮುಂದುವರಿಯುತ್ತವೆ. ಸೋಂಕು ರೋಗಗಳಿಗೇ ಈ ಅವಸ್ಥೆ ಬಂದಿರುವಾಗ, ಮೊದಲಿನಿಂದ ದೀರ್ಘಕಾಲಿಕ ರೋಗಗಳು ಎಂಬ ವಿಭಾಗಕ್ಕೇ ಸೇರಿದ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಥೈರಾಯ್ಡ್, ಖಿನ್ನತೆಯಂತಹ ಕಾಯಿಲೆಗಳಿಗೆ ಚಿಕಿತ್ಸೆ ಅನಿರ್ದಿಷ್ಟ ಕಾಲದವರೆಗೆ - ಹೆಚ್ಚಿನವರಲ್ಲಿ ಜೀವನಪೂರ್ತಿ ಬೇಕಾಗುವುದರಲ್ಲಿ ಅಚ್ಚರಿಯ ಮಾತೇನೂ ಇರಬಾರದು. ಆದರೂ ಈ ಸತ್ಯವನ್ನು ಒಪ್ಪಿಕೊಳ್ಳುವುದು, ಚಿಕಿತ್ಸೆಯನ್ನು ಸರಿಯಾಗಿ, ಸತತವಾಗಿ ಮುಂದುವರಿಸುವುದು ಬಹಳಷ್ಟು ಜನರಿಗೆ ಸುಲಭಸಾಧ್ಯ ಎನಿಸುವುದಿಲ್ಲ. ಎಷ್ಟೋ ಬಾರಿ ಕಾಯಿಲೆಗಿಂತ, ಈ 'ನಿರಾಕರಣೆ' ಯೇ ಹೆಚ್ಚು ನರಳುವಿಕೆಯನ್ನು ತರುತ್ತದೆ.

ವೈದ್ಯರ ಮಾತಿನಲ್ಲಿ ಮಾತ್ರೆಯನ್ನು ತೆಗೆದುಕೊಳ್ಳುವ ಅದರ ನಿಯಮಗಳು, ಅಡ್ಡಪರಿಣಾಮಗಳು ಇವುಗಳ ಜೊತೆಗೇ ಜೀವನಶೈಲಿಯ ಹಲವು ಅಂಶಗಳೂ ಅಡಕವಾಗುತ್ತವೆಯಷ್ಟೆ. ಆದರೆ ಅವುಗಳನ್ನು ಮಾತ್ರೆಯಂತೆ ಪರಿಗಣಿಸಿ, ನಿರ್ದಿಷ್ಟವಾಗಿ ಪಾಲಿಸುವವರು ಬಲು ಕಡಿಮೆ. ಎಲ್ಲಾ ಕಾಯಿಲೆಗಳಿಗೂ ಅವು ಬರದಂತೆ ತಡೆಗಟ್ಟುವ ಕ್ರಮಗಳ ಪಟ್ಟಿಯಲ್ಲಿ ವ್ಯಾಯಾಮ–ಆಹಾರಕ್ರಮ-ವ್ಯಸನಗಳಿಂದ ದೂರವಿರುವುದು ಬಂದೇ ಬರುತ್ತವೆ. ಒಂದೊಮ್ಮೆ ಕಾಯಿಲೆಗಳು ಬಂದೇ ಬಿಟ್ಟವೆನ್ನಿ. ಅವುಗಳ ಚಿಕಿತ್ಸೆಯ ಕ್ರಮಗಳು ಮತ್ತೆ ಇವೇ! ಆದರೂ ವ್ಯಾಯಾಮ ಮಾಡುವುದು, ಸರಿಯಾದ ಆಹಾರಕ್ರಮ ರೂಢಿಸಿಕೊಳ್ಳುವುದು ಮತ್ತು ವ್ಯಸನಗಳಿಂದ ದೂರವಿರುವುದು - ಇವುಗಳನ್ನು ಹೆಚ್ಚಿನ ಮನಸ್ಸುಗಳು 'ಕಷ್ಟಕರ', 'ತಮಗೆ ಸಾಧ್ಯವಿಲ್ಲದ್ದು' ಎಂದೇ ಭಾವಿಸಿ ಬಿಡುತ್ತವೆ. ಉಪ್ಪಿನಕಾಯಿ ತಿನ್ನುವುದನ್ನು ಕಡಿಮೆ ಮಾಡದೆ, ಬಿ.ಪಿ.ಯ ಮಾತ್ರೆ ನಿಲ್ಲಿಸಲಾಗದೆ ಎಂದೂ ಕೇಳಬಹುದು ಅಥವಾ ವ್ಯಾಯಾಮವನ್ನೇ ಮಾಡದ ಮಧ್ಯ ವಯಸ್ಕ ಮಹಿಳೆ ಸಕ್ಕರೆ ಕಾಯಿಲೆಯ ಮಾತ್ರೆಯನ್ನು ದಿನ ಬಿಟ್ಟು ದಿನ ತೆಗೆದುಕೊಂಡು 'ಪ್ರಯೋಗಶೀಲ'ಳಾಗಬಹುದು!!

ಮಾತ್ರೆಯ ಅಡ್ಡಪರಿಣಾಮದ ಬಗ್ಗೆ ಅತಿ ಕಾಳಜಿ-ತಪ್ಪು ನಂಬಿಕೆಗಳನ್ನು ತೋರುವ ಜನರು ಕಾಯಿಲೆಯ ಘೋರಪರಿಣಾಮಗಳ ಬಗ್ಗೆ ಮಾತ್ರ ಯೋಚಿಸಲಾರರು! ಕಾಯಿಲೆಯ ನರಳುವಿಕೆ-ಜೀವನದ ಗುಣಮಟ್ಟಗಳ ಇಳಿಯುವಿಕೆಗಳ ಬಗ್ಗೆ ಅವರದ್ದು ದಿವ್ಯನಿರ್ಲಕ್ಷ್ಯ! ಮಾತ್ರೆ ಬಿಟ್ಟರೂ, ಜೀವನಶೈಲಿಯ ಇತರ ಅಂಶಗಳನ್ನು ಪಾಲಿಸದಿದ್ದಾಗ್ಯೂ, ಕಾಯಿಲೆ ಮರುಕಳಿಸುವ ಬಗ್ಗೆ ಮಾತ್ರ ಅವರದ್ದು ಅಚ್ಚರಿಯ ಭಾವ!! ಇವೆಲ್ಲವೂ ಅವರ ಮಾತಿನಲ್ಲಿ ಸ್ಪಷ್ಟವಾಗಿ ವ್ಯಕ್ತ.

ತನ್ನ ಪ್ರಶ್ನೆ-ಸಂದೇಹಗಳನ್ನು ಮುಕ್ತವಾಗಿ ರೋಗಿ ಮಾತಿನ ಮೂಲಕ ಕೇಳುವುದು, ವೈದ್ಯನು ಮಾತಿನ ಮೂಲಕ ಅವುಗಳನ್ನು ಉತ್ತರಿಸಿ, ಮತ್ತೆ ಮತ್ತೆ ಮಾತನ್ನೂ ಒಂದು ಟಾನಿಕ್‌ನಂತೆ, ಮಾತ್ರೆಯಂತೆ ವೈದ್ಯ-ರೋಗಿ ಸಂಭಾಷಣೆಯಲ್ಲಿ ಬಳಸುವುದು, ಮಾತ್ರೆಯ ಪರಿಣಾಮವನ್ನೇ ಚಿಕಿತ್ಸೆಯಲ್ಲಿ ಉಂಟುಮಾಡಬಹುದು ಎಂಬುದನ್ನು ಅಧ್ಯಯನಗಳು ದೃಢಪಡಿಸಿವೆ. ಹಾಗೆಯೇ ಔಷಧಗಳು ರೋಗದ ಮೇಲೆ ಬೀರುವ ಗುಣವಾಗುವಿಕೆಯ ಪರಿಣಾಮವನ್ನು 'ಮಾತು' ಹೆಚ್ಚಿಸಲೂಬಹುದು.

ಯಾವುದೇ ರೋಗದ ಚಿಕಿತ್ಸೆಯಲ್ಲಿ ಮಾತ್ರೆಯೂ ಬೇಕು. ಮಾತಿನ ಮೂಲಕ ನಡವಳಿಕೆಯಲ್ಲಿ ಅಳವಡಿಕೆಯಾಗಬಹುದಾದ ಜೀವನಶೈಲಿಯ ಅಂಶಗಳೂ ಬೇಕೇ ಬೇಕು. ಮೊದಲು ಬದಲಾಗಬೇಕಾದದ್ದು ಜೀವನಶೈಲಿ. ಸತತವಾದ ಸಹನೆಯ ವೈದ್ಯನ-ರೋಗಿಯ ಮಾತು ಮಾತ್ರ ರೋಗದ ನೋವನ್ನು ವೈದ್ಯನಿಗೆ, ಜೀವನಶೈಲಿಯ ಮಹತ್ವವನ್ನು ರೋಗಿಗೆ ಮನದಟ್ಟು ಮಾಡಿಸಬಹುದು. ಅಂತಹ ಮಾತು ಮಾತ್ರೆಯ ಅಗತ್ಯವನ್ನೂ ತಗ್ಗಿಸಿ, ಜೀವನದ ಗುಣಮಟ್ಟವನ್ನೂ ಸುಧಾರಿಸುವುದು ಖಂಡಿತ. ❖

ಮನಸ್ಸಿಗೂ ಹೃದಯಕ್ಕೂ ಇದೆ ನಂಟು



ಡಾ. ಕಿರಣ್ ವಿ. ಎಸ್.

ಶರೀರದ ಯಾವುದೇ ಅಂಗಕ್ಕಾದರೂ ಕಾಯಿಲೆ ಬರಬಹುದು. ಆದರೆ, ಹೃದಯ-ಸಂಬಂಧಿ ಕಾಯಿಲೆಗಳು ಪ್ರತಿಯೊಬ್ಬರಲ್ಲೂ ತೀವ್ರ ಆತಂಕ ಮೂಡಿಸುತ್ತವೆ. ಅಧಿಕ ರಕ್ತದೊತ್ತಡ, ಹೃದಯದ ಧಮನಿಗಳ ರಕ್ತಸಂಚಾರಕ್ಕೆ ಅಡ್ಡಿ, ಜನ್ಮಜಾತ ಹೃದಯ ಸಮಸ್ಯೆಗಳು, ಹೃದಯದ ಕವಾಟಗಳ ದೋಷ, ಹೃದಯದ ಮಾಂಸಖಂಡಗಳ ದೌರ್ಬಲ್ಯ, ಹೃದಯದ ಮಿಡಿತದಲ್ಲಿನ ಏರುಪೇರು – ಹೀಗೆ ಹಲವಾರು ಅನಾರೋಗ್ಯಗಳು ಯಾವುದೇ ವಯೋಮಾನದಲ್ಲೂ ಹೃದಯವನ್ನು ಕಾಡಬಹುದು. ಇವುಗಳ ಪೈಕಿ ಬಹುತೇಕ ಸಮಸ್ಯೆಗಳನ್ನು ಸಮರ್ಥವಾಗಿ ನಿಯಂತ್ರಿಸಬಹುದು.

ಇಷ್ಟಾದರೂ, ಹೃದಯದ ಕಾಯಿಲೆ ಎಂದ ಒಡನೆಯೇ ಮಾನಸಿಕ ಸಂತುಲನ ಏರುಪೇರಾಗುತ್ತದೆ. ಅಂತೆಯೇ, ಮಾನಸಿಕ ಸಮಸ್ಯೆಗಳಿಂದ ಬಾಧಿತರಾದವರಲ್ಲಿ ಹೃದ್ರೋಗಗಳೂ ಅಧಿಕವಾಗಿ ಕಾಡುತ್ತವೆ. ಮನಸ್ಸು ವ್ಯಗ್ರವಾದಷ್ಟೂ ಶರೀರದಲ್ಲಿ ಹಾರ್ಮೋನುಗಳ ಮಟ್ಟ ಏರುಪೇರಾಗುತ್ತದೆ. ಇದರ ಪರೋಕ್ಷ ಪರಿಣಾಮ ಹೃದಯದ ಗತಿಯ ಮೇಲೆ ಬೀಳುತ್ತದೆ; ರಕ್ತನಾಳಗಳಲ್ಲಿನ ಒತ್ತಡ ಏರುತ್ತದೆ. ಕೋಪ, ತುಮುಲಗಳು ಹೃದಯದ ರಕ್ತನಾಳಗಳನ್ನು ಸಂಕೋಚಿಸಿ, ಆಘಾತ ಉಂಟುಮಾಡಬಲ್ಲವು. ಮಾನಸಿಕ ಅಶಾಂತಿ, ಕೆಲಸದ ಒತ್ತಡಗಳ ಕಾರಣದಿಂದ ಅಧಿಕ ರಕ್ತದೊತ್ತಡಕ್ಕೆ ತುತ್ತಾಗುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಉದ್ವೇಗಗಳಿಗೆ ಸಿಲುಕಿ ಧೂಮಪಾನ, ಮದ್ಯಪಾನಗಳ ಚಟ ಬೆಳೆಸಿಕೊಂಡವರು ಇಬ್ಬಗೆಯಿಂದ ಹೃದಯದ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇಂತಹ ಒತ್ತಡಗಳು ಪ್ರತಿದಿನವೂ ಹಲವು ಬಾರಿ ಆಗುತ್ತಿದ್ದರೆ ಹೃದಯಕ್ಕೆ ಮತ್ತಷ್ಟು ಹಾನಿ ಖಚಿತ.

ಬಹಳ ಮಂದಿ ಹೃದ್ರೋಗಿಗಳ ಮಾನಸಿಕ ಸಾಮರ್ಥ್ಯ ಕುಸಿಯುತ್ತದೆ. ತಮ್ಮ ಹೃದಯದ ಕೆಲಸ ತಮ್ಮ ನಿಯಂತ್ರಣದಲ್ಲಿ ಇಲ್ಲ; ಅದು ದುರ್ಬಲವಾಗಿ, ಔಷಧಗಳ ಹಂಗಿನಲ್ಲಿದೆ ಎಂಬುದು ಯಾರಿಗಾದರೂ ಆಘಾತ ನೀಡುವ ವಿಷಯ. ಸದಾ ಕಾಲ ಯಾವ ಹೊಸ ಸಮಸ್ಯೆ ಕಾಡುತ್ತದೋ, ಹಳೆಯ ಸಮಸ್ಯೆ ಉಲ್ಬಣಿಸುತ್ತದೋ ಎಂಬ ಆತಂಕ. ಹಿಂದೆಂದೂ ನೋಡಿರದಷ್ಟು ಔಷಧಗಳನ್ನು ಸೇವಿಸಿದರೆ ಇನ್ಯಾವ ಅಡ್ಡಪರಿಣಾಮವಾಗಿ ಮತ್ಯಾವ ತೊಂದರೆ ಉದ್ಭವಿಸುತ್ತದೋ ಎಂಬ ಭೀತಿ. ಇಷ್ಟು ಉದ್ವೇಗಗಳ ನಡುವೆ ಮನಸ್ಸನ್ನು ಶಾಂತವಾಗಿ ಇಟ್ಟುಕೊಳ್ಳುವುದು ಸುಲಭದ ಮಾತಲ್ಲ. ಮಾನಸಿಕ ಉದ್ವೇಗ ಹೃದಯದ ಕೆಲಸಗಳನ್ನು, ಇತರ ಅಂಗಗಳ ಜೊತೆಗಿನ ಅದರ ಸಮನ್ವಯವನ್ನು ಕೆಡಿಸಬಲ್ಲದು. ಇದೊಂದು ರೀತಿಯ ವಿಷಮ ಆವರ್ತನ ಚಕ್ರ. ಮನಸ್ಸಿನ ಭೀತಿ ಹೃದಯದ ಆರೋಗ್ಯದ ಮೇಲೆ ಅಸಹಜ ಪರಿಣಾಮವನ್ನು ಬೀರಿ ಚಿತ್ತಶಾಂತಿಯನ್ನು ಮತ್ತಷ್ಟು ಕಂಗೆಡಿಸುತ್ತದೆ. ಮಾನಸಿಕ ಧೃಢತೆಯನ್ನು ಕಳೆದುಕೊಂಡರೆ ಹೃದಯದ ಆರೋಗ್ಯ ಸುಧಾರಣೆ ಸುಲಭವಲ್ಲ. ಹೀಗಾಗಿ ಮನಸ್ಸನ್ನು ಶಾಂತವಾಗಿ, ಧೃಢವಾಗಿ ಇಟ್ಟುಕೊಳ್ಳುವತ್ತ ಪ್ರಯತ್ನಗಳು ಸದಾ ನಡೆಯುತ್ತಿರಬೇಕು.

ಔಷಧಗಳು ಪ್ರತಿಯೊಂದು ಆರೋಗ್ಯ ಸಮಸ್ಯೆಗೂ ಪರಿಹಾರವಲ್ಲ. ಈಚೆಗೆ ಅತ್ಯಲ್ಪ ಮಾನಸಿಕ ಒತ್ತಡವನ್ನೂ ಸಹಿಸಲಾರದ ಪೀಳಿಗೆ ನಿರ್ಮಾಣವಾಗುತ್ತಿದೆ. ಜೀವನದಲ್ಲಿ ಸಣ್ಣ ಸಮಸ್ಯೆಯೊಂದು ಕಾಡಿದರೂ 'ನನಗೆ ಖಿನ್ನತೆಯುಂಟಾಗಿದೆ; ನಾನು ಮಾನಸಿಕ ದೌರ್ಬಲ್ಯಕ್ಕೆ ತುತ್ತಾಗಿದ್ದೇನೆ' ಎಂದು ಔಷಧಗಳ ಮೊರೆ ಹೋಗುವವರಿದ್ದಾರೆ. ಆದರೆ ಮಾನಸಿಕ ಸಮಸ್ಯೆಗಳ ನಿರ್ವಹಣೆಗೆ ಔಷಧಗಳು ಪ್ರಥಮ ಆದ್ಯತೆಯಲ್ಲ. ಮಾತು, ಚರ್ಚೆ, ಉದ್ವೇಗಗಳನ್ನು ಹೊರಹಾಕುವಿಕೆ, ಜೀವನಶೈಲಿಯ ಬದಲಾವಣೆ ಮೊದಲಾದುವುಗಳಿಂದ ಮನಸ್ಸಿನ ಬಹಳಷ್ಟು ತುಮುಲಗಳನ್ನು ನಿರ್ವಹಿಸಬಹುದು. ಮಾನಸಿಕ ಸಮಸ್ಯೆಗಳು ಮೂಲತಃ ಮಿದುಳಿಗೆ ಸಂಬಂಧಿಸಿದವು. ಹೀಗಾಗಿ, ಇದರ ಔಷಧಗಳು ಮಿದುಳಿನ ಮೇಲೆ, ಭಾವನೆಗಳ ಮೇಲೆ ನೇರ ಪರಿಣಾಮ ಬೀರಬಲ್ಲವು. ಇದರಿಂದ ಹಲವಾರು ಅಡ್ಡಪರಿಣಾಮಗಳಾಗುತ್ತವೆ. ಬೊಜ್ಜು, ಇನ್ಸುಲಿನ್ ಪ್ರತಿರೋಧತೆ, ಮಧುಮೇಹ, ಹೃದಯದ ಲಯದಲ್ಲಿ ಏರುಪೇರು, ಮಿದುಳಿನ ರಕನಾಳಗಳ ಸಂಕೋಚನ ಮೊದಲಾದುವು ಕಾಡುತ್ತವೆ. ಇವೆಲ್ಲವೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹೃದಯದ ಆರೋಗ್ಯವನ್ನು ಹದಗೆಡಿಸಬಲ್ಲವು.

ಹೃದ್ರೋಗದಿಂದ ಚೇತರಿಸಿಕೊಳ್ಳುತ್ತಿರುವವರು ಕೂಡ ತಮ್ಮ ಮನಸ್ಸನ್ನು ಉಲ್ಲಸಿತರಾಗಿ ಇಟ್ಟುಕೊಳ್ಳುವುದು ಮುಖ್ಯ. ತಮ್ಮಿಚ್ಛೆಯ ಮುಕ್ತ, ಹಲವೊಮ್ಮೆ ಬೇಜವಾಬ್ದಾರಿ, ಜೀವನಶೈಲಿಗೆ ಹೊಂದಿಕೊಂಡಿರುವ ಜನರಲ್ಲಿ ಹೃದಯದ ಕಾಯಿಲೆ ಏಕಾಏಕಿ ಶಿಸ್ತುಬದ್ಧ ಬದುಕಿನತ್ತ ದೂಡುತ್ತದೆ. ಈ ಸಂಕ್ರಮಣವನ್ನು ಎಲ್ಲರೂ ಸಹಿಸಲಾರರು. ಇದನ್ನು ಅರಗಿಸಿಕೊಳ್ಳಲಾರದೆ ಖಿನ್ನತೆಗೆ ತುತ್ತಾಗುವವರು ಹೆಚ್ಚು. ಇಂತಹ ಸ್ಥಿತ್ಯಂತರದ ಕಾಲದಲ್ಲಿ ಮಾನಸಿಕ ದೃಢತೆ ಬಹಳ ಮುಖ್ಯ. ಇಲ್ಲವಾದರೆ ಹೃದಯ ಮತ್ತೊಂದು ಆಘಾತವನ್ನು ಅನುಭವಿಸುತ್ತದೆ. ಇಂತಹವರಿಗೆ ಮಾನಸಿಕ ತಜ್ಞರ ನೆರವು ಬೇಕಾಗುತ್ತದೆ. ಹೊಸ ಪರಿಸ್ಥಿತಿಯ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಸಮಯಾವಕಾಶ, ಕುಟುಂಬದವರ ಬೆಂಬಲ ಅಗತ್ಯವಾಗುತ್ತದೆ.

ಮಾನಸಿಕ ಒತ್ತಡದ ನಿಯಂತ್ರಣ ಹೃದಯದ ಮೇಲೆ ಬಹಳ ಉತ್ತಮ ಪರಿಣಾಮ ಬೀರಬಲ್ಲದು. ಒತ್ತಡದಿಂದ ಬಳಲುವವರು ಮಾನಸಿಕ ಆರೋಗ್ಯ ಸಲಹೆಗಾರರ ಸಹಾಯ ಪಡೆಯಬೇಕು. ನಿಗದಿತ ವ್ಯಾಯಾಮ, ಪ್ರಾಣಾಯಾಮ, ಧ್ಯಾನ, ಅಧ್ಯಾತ್ಮ ಚಿಂತನೆ, ಸಮಾಜಕ್ಕೆ ಅಭಿಮುಖವಾದ ಹವ್ಯಾಸಗಳು, ಆರೋಗ್ಯಕರ ಜೀವನಶೈಲಿ, ಕುಟುಂಬ ಸಭ್ಯರೊಡನೆ ಒಳ್ಳೆಯ ಸಂಬಂಧ, ಸಮಾನಮನಸ್ಕ ಮಿತ್ರಬಳಗ, ಮಾನಸೋಲ್ಲಸವಾದ ಹವ್ಯಾಸಗಳು ಮೊದಲಾದುವು ಮನಸ್ಸಿನ ಶಾಂತಿಗೆ, ಧೃಢತೆಗೆ ಕಾರಣವಾಗಿ, ಹೃದಯದ ಕಠಿಣ ಸಮಸ್ಯೆಗಳನ್ನೂ ಸಹ್ಯವಾಗಿಸಬಲ್ಲವು. ಇವೆಲ್ಲವೂ ಮನಸ್ಸಿನ ಉದ್ವೇಗವನ್ನು ಕಡಿಮೆ ಮಾಡುವಲ್ಲಿ ಬಹಳ ಸಹಕಾರಿ. ಹಾಗಾಗಿ ಹೃದ್ರೋಗಿಗಳು ಇಂತಹ ಜೀವಪರವಾದ ಹವ್ಯಾಸಗಳಿಂದ ತಮ್ಮ ಮನೋವ್ಯಾಪಾರಗಳನ್ನು ಹತೋಟಿಯಲ್ಲಿ ಇಡಬೇಕು ಎಂದು ವೈದ್ಯರು ಸೂಚಿಸುತ್ತಾರೆ.

ನಮ್ಮ ದೇಹ ಮತ್ತು ಮನಸ್ಸುಗಳು ಒಂದು ಸಮಗ್ರ ಅಸ್ತಿತ್ವ. ಇದನ್ನು ಪ್ರತ್ಯೇಕ ಅಂಗಗಳ ಮಟ್ಟದಲ್ಲಿ ವಿವೇಚಿಸಲು ಸಾಧ್ಯವಿಲ್ಲ. ಮಾನಸಿಕ ಸಮಸ್ಯೆಗಳು ವಯಸ್ಸಿನ ಅಂತರವಿಲ್ಲದೆ ದೇಹದ ಎಲ್ಲ ಅಂಗಗಳ ಕೆಲಸವನ್ನೂ ಪ್ರಭಾವಿಸುತ್ತವೆ. ಅಂತೆಯೇ, ದೇಹದ ಯಾವುದೇ ಅಂಗದ ಕಾಯಿಲೆ ಮಾನಸಿಕ ಆರೋಗ್ಯವನ್ನು ಕುಂದಿಸಬಲ್ಲವು. ಯಾವುದೇ ಚಿಕಿತ್ಸೆಯ ಮೂಲ ಉದ್ದೇಶ ಮನಸ್ಸೂ ಸೇರಿದಂತೆ ಇಡೀ ದೇಹಕ್ಕೆ ಅನ್ವಯವಾಗಬೇಕಾಗುತ್ತದೆ. ಇದನ್ನು ಸಾಧಿಸುವುದು ಸಮಗ್ರ ಆರೋಗ್ಯ ನಿರ್ವಹಣೆಯ ಅತಿ ಮುಖ್ಯ ಭಾಗ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ 5.2

13) ಮೂರು ಅಂಕಿಗಳ ಎಷ್ಟು ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತದೆ?

ಪರಿಹಾರ:– (..........ಹಿಂದಿನ ಸಂಚಿಕೆಯಿಂದ)

ಮೊದಲ ಪದ ಪದಗಳು(a) 105, ಕೊನೆಯ ಪದ (l) = 994

ಇವುಗಳ nನೇ ಪದ= (l)

$$a+(n-1)d=994$$
$$105+(n-1)(7)=994$$
$$(n-1)7=994-105$$
$$(n-1)7=889$$
$$(n-1)=\frac{889}{7}$$
$$(n-1)=127$$
$$n=127+1=128$$

128 ಮೂರು ಅಂಕಿಯ ಸಂಖ್ಯೆಗಳು 7ರಿಂದ ಭಾಗಿಸಲ್ಪಡುತ್ತವೆ.

14) 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?

ಪರಿಹಾರ:– 10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ

12, 16, 20, 24................248

$$\Rightarrow a_2-a_1=16-12=4$$
$$\Rightarrow a_3-a_2=20-16=4$$
$$\Rightarrow a_4-a_3=24-20=4$$

ಪ್ರತಿಯೊಂದು ಹಂತದಲ್ಲಿಯೂ $a_{n+1}-a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d=4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಕೊನೆಯ ಪದ (l)= 248

Then nth term $=l$

$$a+(n-1)d=248$$
$$12+(n-1)(4)=248$$
$$(n-1)4=248-12$$
$$(n-1)4=236$$
$$(n-1)=\frac{236}{4}$$
$$(n-1)=59$$
$$n=59+1=60$$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

15) nನ ಯಾವ ಬೆಲೆಗೆ 63, 65, 67.... ಮತ್ತು 3, 10, 17 ... ಈ ಸಮಾಂತರ ಶ್ರೇಢಿಗಳ nನೇ ಪದಗಳು ಸಮವಾಗಿರುತ್ತವೆ?

ಪರಿಹಾರ:– ಮೊದಲ ಸಮಾಂತರ ಶ್ರೇಢಿ 63, 65, 67............

ಇಲ್ಲಿ $a=63$ $d=65-63=2$

nನೇ ಪದ $=63+(n-1)2$ $(\because a_n=a+(n-1)d)$

ಎರಡನೆ ಸಮಾಂತರ ಶ್ರೇಢಿ 3, 10, 17............

ಇಲ್ಲಿ $a=3$ $d=3-10=7$

nನೇ ಪದ $=3+(n-1)7$ $(\because a_n=a+(n-1)d)$

ಒಂದು ವೇಳೆ nನೇ ಪದ ಎರಡು ಸಮಾಂತರ ಶ್ರೇಢಿಗಳಲ್ಲಿ ಸಮವಾಗಿದ್ದರೆ

$$63+(n-1)2=3+(n-1)7$$
$$(n-1)2-(n-1)7=3-63$$
$$(n-1)(-5)=-60$$
$$(n-1)=-60/-5$$
$$n-1=12$$
$$n=12+1=13$$
$$n=13$$

ಹೀಗಾಗಿ 13 ಎರಡು ಸಮಾಂತರ ಪದಗಳ nನ ಬೆಲೆಯಾಗಿದೆ

16) ಮೂರನೇ ಪದ 16, 7ನೇ ಪದವು 5ನೇ ಪದಕ್ಕಿಂತ 12 ಹೆಚ್ಚಾಗಿರುವ ಸಮಾಂತರ ಶ್ರೇಢಿ ಕಂಡುಹಿಡಿಯಿರಿ.

ಪರಿಹಾರ:– ಮೊದಲ ಪದ a ಆಗಿರಲಿ, ಸಾಮಾನ್ಯ ವ್ಯತ್ಯಾಸ d ಆಗಿರಲಿ,

3ನೇ ಪದ = 16

$$a+(3-1)d=16 \quad (\because a_n=a+(n-1)d)$$
$$a+2d=16 \ldots\ldots\ldots\ldots (1)$$

7ನೇ ಪದ = 5ನೇ ಪದ + 12

$$a+(7-1)d=a+(5-1)d+12$$
$$=a+6d=a+4d+12$$
$$=6d-4d=12$$
$$=2d=12$$
$$d=12/2=6$$

$d=6$ ಅನ್ನು (1) ರಲ್ಲಿ ಹಾಕಿದಾಗ

$$a+2(6)=16$$
$$a+12=16$$
$$a=16-12=4$$

ಹೀಗಾಗಿ ಬೇಕಾಗಿರುವ ಸಮಾಂತರ ಶ್ರೇಢಿ

4, 4+6, 4+6+6, 4+6+6+6.................

i.e 4, 10, 16, 22..............

ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ

1) 8, 3, 2 ..... ಈ ಸಮಾಂತರ ಶ್ರೇಢಿಯ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ $a=8$, $b=3-8=-5$, $n=22$.

ನಮಗೆ ತಿಳಿದಿರುವಂತೆ

$$S_n=\frac{n}{2}[2a+(n-1)d]$$
$$=\frac{22}{2}[16+21(-5)]$$
$$11[16-(-105)]$$
$$=11\,(16-105)$$
$$=11\,(-89)=-979$$

ಹಾಗಾದರೆ, ಸಮಾಂತರ ಶ್ರೇಢಿಯ ಮೊದಲ 22 ಪದಗಳ ಮೊತ್ತವು –979 ಆಗಿದೆ

2) ಒಂದು ಸಮಾಂತರ ಶ್ರೇಢಿಯ ಮೊದಲ 14 ಪದಗಳ ಮೊತ್ತ 1050. ಅದರ ಮೊದಲನೇ ಪದ 10, ಅದರೆ 20ನೇ ಪದ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $S_{14}=1050$, $n=14$, $a=10$

$$S_n=\frac{n}{2}[2a+(n-1)d]$$
$$1050=\frac{14}{2}(20+13d)$$
$$1050=140+91d$$
$$910=91d$$
$$\therefore d=10$$

ಆದ್ದರಿಂದ $a_{20}=10+(20-1)\,10=200$ ಅಂದರೆ 20ನೇ ಪದ 200 ಆಗಿದೆ.

3) 24, 21, 18 .... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 78 ಆಗಿದೆ?

ಪರಿಹಾರ: $a=24$, $d=21-24=-3$, $S_n=78$

ನಾವು n ಕಂಡುಹಿಡಿಯಬೇಕಾಗಿದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

35. Four capacitors 2μ F, 3μ F, 4μ F and 5μ F are connected in the form of a rectangle ABCD as in the figure.



Calculate the capacitance between the diagonals. Across which diagonal is the effective capacitance more.

Soln:- (........Contd)

Capacitances C_1 and C_2 are in parallel.

whose, effective capacity is

$$C_{AC}=C_1+C_2=\left(\frac{6}{5}+\frac{20}{9}\right)\mu F$$
$$=3.42\,\mu F$$

Across BD, the capacitors 2μ F and 5μ F are in series. The effective capacitance,

$$C_3=\frac{2\times5}{2+5}=\frac{10}{7}\,\mu F$$

and the capacitors 4μ F and 5μ Fare in series. The effective capacitance,

$$C_4=\frac{4\times3}{4+3}=\frac{12}{7}\,\mu F$$

Capacitances C_3 and C_4 are in parallel. Its effective capacity =

$$C_{BD}=C_3+C_4=\left(\frac{10}{7}+\frac{12}{7}\right)\mu F$$
$$=3.14\,\mu F$$

Therefore, Equivalent capacitance across AC is more.

36. Two capacitors of capacitances 3 μF and 5μF are connected in series. Calculate the equivalent capacitance. If the battery of e.m.f 10 V is connected across them. Calculate the charge on each capacitor and also the p.d across each capacitor.

Soln :– Given, 2 capacitors $C_1=3\,\mu F$ and $C_2=5\,\mu F$ are connected in series. the capacitance of the resultant capacitor is given by,

$$\frac{1}{C_s}=\frac{1}{C_1}+\frac{1}{C_2}$$
$$=\frac{1}{3}+\frac{1}{5}=\frac{5+3}{3\times5}=\frac{8}{15}$$
$$\therefore C_s=\frac{15}{8}\,\mu F=1.875\times10^{-6}\,F$$

$$q=C_sV=1.875\times10^{-6}\times10$$

Charge on the capacitor,

$$=18.75\times10^{-6}\,C$$

The p.d across first capacitor

$$V_1=\frac{q}{C_1}=\frac{18.75\times10^{-6}}{3\times10^{-6}}=6.25\,V$$

The p.d across second capacitor

$$V_2=V-V_1=10-6.25=3.75\,V$$

37. The graph given shows the variation of the voltage 'V' across the plates of two capacitors A and B versus increase of charge Q stored on them. Which of the two capacitors has higher capacitance?



Ans:- Let Q be the charge on each capacitor at any instant. Corresponding to the charge Q, the p.d across the plates of the capacitors A and B will be V_A and V_B respectively as in the fig.



Now, $C_A=\frac{Q}{V_A}$ and $C_B=\frac{Q}{V_B}$

Since $V_A<V_B$, it follows that $C_A>C_B$

i.e., capacitor A is of higher capacitance

38. Find the equivalent capacitance of the combination shown in the figure between the points X and Y.

Soln:-



Ans:- The given arrangement of the three capacitors is equivalent to their parallel combination as in following fig.



∴ equivalent capacitance =

$$C=C_1+C_2+C_3$$

(Contd.............)



ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮ ಭರ್ತಿಯಾಗಿರುವ ದೃಶ್ಯ ಸೋಮವಾರ ಕಂಡು ಬಂತು (ಎಡಚಿತ್ರ) ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹುಲಿಕಲ್ ಘಾಟಿಯ ಬಾಳೆಬರೆ ಜಲಪಾತ ಧುಮ್ಮಿಕ್ಕಿ ಹರಿಯುತ್ತಿದೆ– ಪ್ರಜಾವಾಣಿ ಚಿತ್ರ

ಕೊಡಗು: ವಿವಿಧೆಡೆ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ/ಮಂಗಳೂರು: ಕೊಡಗು ಜಿಲ್ಲೆಯಾದ್ಯಂತ ಸೋಮವಾರ ಮಳೆ ಬಿರುಸು ಪಡೆದಿದೆ. ಭಾಗಮಂಡಲ, ವಿರಾಜಪೇಟೆ, ಮಡಿಕೇರಿ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿ ಭಾಗದಲ್ಲಿ ಭಾರಿ ಮಳೆ ಸುರಿದಿದೆ. ಕಾವೇರಿ ನದಿ ತೀರದ ನಿವಾಸಿಗಳಲ್ಲಿ ಆತಂಕ ಎದುರಾಗಿದೆ.

ನದಿ ತೊರೆಗಳು ಮತ್ತೆ ಭೋರ್ಗರೆಯುತ್ತಿವೆ. ಎಲ್ಲೆಡೆ ಭತ್ತದ ಬಿತ್ತನೆಗೆ ಸಿದ್ಧತೆ ನಡೆದಿದೆ. ಕೆಲವೆಡೆ ಭತ್ತ ಸಸಿಮಡಿ ಕಾರ್ಯ ಆರಂಭವಾಗಿದೆ.

ವಿರಾಜಪೇಟೆಯಲ್ಲಿ ನಿಲ್ಲಿಸಿದ್ದ ಕಾರಿನ ಮೇಲೆ ಮಣ್ಣು ಕುಸಿತವಾಗಿದೆ. ಭಾಗಮಂಡಲದಲ್ಲಿ ಮತ್ತೆ ನೀರು ಏರಿಕೆಯಾಗುತ್ತಿದೆ. ಹೊಸ ಉದ್ಯಾನಕ್ಕೆ ನೀರು ನುಗ್ಗಿದೆ. ತ್ರಿವೇಣಿ ಸಂಗಮ ಭರ್ತಿಯಾಗಿದೆ.

ಸೋಮವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ವಿರಾಜಪೇಟೆ ಹಾಗೂ ಸುತ್ತಮುತ್ತ 12 ಸೆಂ.ಮೀ, ಭಾಗಮಂಡಲ ಹೋಬಳಿ ವ್ಯಾಪ್ತಿಯಲ್ಲಿ 10 ಸೆಂ.ಮೀ ಭಾರಿ ಮಳೆ ಸುರಿದಿದೆ. ಅಮ್ಮತ್ತಿ ಹಾಗೂ ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ 8, ಮಡಿಕೇರಿ ಹಾಗೂ ಸುತ್ತಮುತ್ತ 6, ಪೊನ್ನಂಪೇಟೆ ತಾಲ್ಲೂಕಿನ ಹುದಿಕೇರಿ ಹಾಗೂ ಕುಶಾಲನಗರ ತಾಲ್ಲೂಕಿನ ಸುಂಟಿಕೊಪ್ಪದಲ್ಲಿ 4 ಸೆಂ.ಮೀ ಮಳೆಯಾಗಿದೆ.

ಗೋಣಿಕೊಪ್ಪಲು, ಕುಟ್ಟ, ಶ್ರೀಮಂಗಲ, ಹುದಿಕೇರಿ, ಪೊನ್ನಂಪೇಟೆ ಭಾಗದಲ್ಲಿ ಸೋಮವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಒಂದೇ ಸಮನೆ ಮಳೆ ಸುರಿಯಿತು.

ಮೈಸೂರಿನಲ್ಲಿ ಆಗಾಗ ಬಿಡುವು ಕೊಟ್ಟು ತುಂತುರು ಮಳೆ ಸುರಿಯಿತು. ಚಳಿಗಾಳಿಯೂ ಬೀಸುತ್ತಿತ್ತು.

ಕರಾವಳಿಯಲ್ಲಿ ಸಾಧಾರಣ ಮಳೆ: ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸೋಮವಾರ ಸಾಧಾರಣ ಮಳೆಯಾಗಿದೆ. ಇಡೀ ದಿನ ಮೋಡಮುಸುಕಿದ ವಾತಾವರಣ ಇತ್ತು. ಬಿಟ್ಟು ಬಿಟ್ಟು ಮಳೆ ಸುರಿಯಿತು.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯಲ್ಲಿ ಭಾನುವಾರ ರಾತ್ರಿ ಉತ್ತಮ ಮಳೆಯಾಗಿದೆ. ಬಾಳೆಹೊನ್ನೂರು ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಕಣಕುಂಬಿ ಅರಣ್ಯ ಪ್ರದೇಶದಲ್ಲಿ ಮಳೆಯಿಂದ ಹಬ್ಬನಹಟ್ಟಿ ಸಮೀಪದ ಆಂಜನೇಯ ದೇವಾಲಯದ ಕಟ್ಟಡ ಮಲಪ್ರಭಾ ನದಿ ನೀರಿನಿಂದ ಜಲಾವೃತಗೊಂಡಿದೆ –ಪ್ರಜಾವಾಣಿ ಚಿತ್ರ: ಪ್ರಸನ್ನ ಕುಲಕರ್ಣಿ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	95.50	9,369	518
ಹಾರಂಗಿ	2,859	2,838.42	1,673	200
ಕಬಿನಿ	2,284	2,277	5,560	1,000
ಹೇಮಾವತಿ	2,922	2,889.54	6,938	250
ಲಿಂಗನಮಕ್ಕಿ	1,819	1,751.45	13,704	2,572.07
ಸೂಪಾ(ಮೀ)	564	525.90	5805.01	4,744.50
ಮಾಣಿ	595	572.58	4,472	0
ತುಂಗಭದ್ರಾ	1,633	1,584.15	12,730	296
ಮಲಪ್ರಭಾ	2,079.50	2,041.80	0	194
ಘಟಪ್ರಭಾ	2,175	2,101.25	4,300	103
ಭದ್ರಾ	186	124.7	4,665	348
ಆಲಮಟ್ಟಿ(ಮೀ)	519.60	511.35	19,409	430
ನಾರಾಯಣಪುರ(ಮೀ)	492.25	489.20	191	80

* ನೆಲಮಟ್ಟದಿಂದ

ಶಿವಮೊಗ್ಗ ವರದಿ: ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ಸೋಮವಾರ ಉತ್ತಮ ಮಳೆ ಸುರಿದಿದ್ದು, ನಗರ ಹೋಬಳಿಯಲ್ಲಿ ವರುಣನ ಆರ್ಭಟ ಮುಂದುವರಿದಿದೆ.

ಮಳೆಯಿಂದಾಗಿ ಜಲಾಶಯಗಳ ನೀರಿನ ಮಟ್ಟ ಏರಿಕೆ ಕಂಡಿದೆ. ಕಳೆದ 24 ಗಂಟೆಯಲ್ಲಿ ಹೊಸನಗರ ತಾಲ್ಲೂಕಿನ ಹುಲಿಕಲ್‌ನಲ್ಲಿ 15.8 ಸೆಂ.ಮೀ., ಮಾಣಿ–16.3 ಸೆಂ.ಮೀ, ಮಾಸ್ತಿಕಟ್ಟೆ– 14.01 ಸೆಂ.ಮೀ., ಯಡಿಯೂರು–14.01 ಸೆಂ.ಮೀ. ಮಳೆಯಾಗಿದೆ.

ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿರುವ ಕಾರಣ ಲಿಂಗನಮಕ್ಕಿ ಜಲಾಶಯದ ಒಳಹರಿವು 13,704 ಕ್ಯುಸೆಕ್‌ಗೆ ಏರಿಕೆಯಾಗದೆ. ಭಾನುವಾರ ಜಲಾಶಯಕ್ಕೆ 11,358 ಕ್ಯುಸೆಕ್ ಒಳಹರಿವು ಇತ್ತು.

20 ಗ್ರಾಮಗಳಿಗೆ ಸಂಪರ್ಕ ಕಡಿತ ಖಾನಾಪುರ ವರದಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಅವ್ಯಾಹತವಾಗಿ ಸುರಿಯುತ್ತಿರುವ ಮಳೆಯಿಂದ ಮಲಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ. ತಾಲ್ಲೂಕಿನ ಹಬ್ಬನಹಟ್ಟಿ ಗ್ರಾಮದ ಬಳಿ ಆಂಜನೇಯ ದೇವಸ್ಥಾನದ ಕಟ್ಟಡ ಜಲಾವೃತವಾಗಿದೆ.

ತಾಲ್ಲೂಕಿನಲ್ಲಿ ಸುರಿಯುತ್ತಿರುವ ಸತತ ಮಳೆಗೆ ಮಲಪ್ರಭಾ, ಮಹದಾಯಿ ಮತ್ತು ಪಾಂಡರಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಿದೆ. ಅರಣ್ಯ ಪ್ರದೇಶದಲ್ಲಿ ಜಲಮೂಲಗಳು ತುಂಬಿ ಹರಿಯಲಾರಂಭಿಸಿವೆ. ಭಾನುವಾರ ರಾತ್ರಿಯಿಂದ ತಾಲ್ಲೂಕಿನ ಗವ್ವಾಳಿ, ಕೊಂಗಳಾ, ಅಮಗಾಂವ, ದೇಗಾಂವ, ಕೃಷ್ಣಾಪುರ, ಮೆಂಡಿಲ್, ಸಡಾ, ಹುಳಂದ, ಮಾನ, ಕೃಷ್ಣಾಪುರ, ವರ್ಕಡ ಸೇರಿ ಕಾನನದಂಚಿನ 20ಕ್ಕೂ ಹೆಚ್ಚು ಗ್ರಾಮಗಳು ಸಂಪರ್ಕ ಕಳೆದುಕೊಂಡಿವೆ.

ಇಬ್ಬರು ಯುವಕರು ನೀರುಪಾಲು

ಪ್ರಜಾವಾಣಿ ವಾರ್ತೆ

ಗಣೇಶ ಕದಮ

ಪ್ರತೀಕ ಪಾಟೀಲ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ಕಾಳಮ್ಮವಾಡಿ ಜಲಾಶಯ ನೋಡಲು ಪ್ರವಾಸಕ್ಕೆ ತೆರಳಿದ್ದ ನಿಪ್ಪಾಣಿಯ ಆಂದೋಲನ ನಗರದ ಗಣೇಶ ಚಂದ್ರಕಾಂತ ಕದಮ್ (18) ಮತ್ತು ಪ್ರತೀಕ ಪಾಟೀಲ (22) ನೀರು ಪಾಲಾಗಿದ್ದಾರೆ.

'10 ಸಹಪಾಠಿಗಳು ತಂಡ ಮಾಡಿಕೊಂಡು ಕೊಲ್ಹಾಪುರ ಜಿಲ್ಲೆಯ ಕಾಳಮ್ಮವಾಡಿ ಜಲಾಶಯ ನೋಡಲು ತೆರಳಿದ್ದರು. ನೀರಿಗಿಳಿದ ಗಣೇಶ, ಈಜಲು ಬಾರದೇ ನೀರಿನ ಸೆಳವಿಗೆ ಸಿಲುಕಿದರು. ಅವರ ರಕ್ಷಣೆಗೆ ವಾಹನ ಚಾಲಕ ಪ್ರತೀಕ ಕೂಡ ನೀರಿಗಿಳಿದಿದರು. ಉಳಿದವರು ದಡದಿಂದಲೇ ಕೂಗಾಡಿದರು. ತುಂಬಾ ಹೊತ್ತಿನವರೆಗೆ ಕಾದರೂ ನೀರಿಗಿಳಿದವರು ಮೇಲೆ ಬರಲೇ ಇಲ್ಲ' ಎಂದು ಮೂಲಗಳು ತಿಳಿಸಿವೆ.

ರಾಧಾನಗರಿ ಠಾಣೆಯ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಶೋಧ ನಡೆಸಿದರೂ ಇಬ್ಬರೂ ಪತ್ತೆಯಾಗಲಿಲ್ಲ.

'ಸುಳ್ಳು ಸುದ್ದಿಗೆ ಕಡಿವಾಣ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಸುದ್ದಿಗಳನ್ನು ಪರಿಶೀಲಿಸುವ ಮತ್ತು ನಿಯಂತ್ರಿಸುವ ಕೆಲಸವನ್ನು ಪತ್ರಕರ್ತರು ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪತ್ರಕರ್ತರ ದಿನಾಚರಣೆ ಅಂಗವಾಗಿ ಬೆಂಗಳೂರು ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಲಾಗಿದ್ದ, 'ಮಾಧ್ಯಮ ಮತ್ತ ಸಾಮಾಜಿಕ ಜಾಲತಾಣ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ವಾರ್ತಾ ಇಲಾಖೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ಪ್ರೆಸ್ ಕ್ಲಬ್ ಮತ್ತು ಕರ್ನಾಟಕ ಮಾಧ್ಯಮ ಅಕಾಡೆಮಿ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

'ಸಾಮಾಜಿಕ ಜಾಲತಾಣಗಳಿಂದ ಉಪಯೋಗವೂ ಇದೆ. ಅಪಾಯವೂ ಇದೆ. ಸತ್ಯವಾದ ಸುದ್ದಿಗಳನ್ನು ಹಂಚಿಕೊಳ್ಳಲು ಬಳಕೆ ಮಾಡಿಕೊಂಡರೆ ಸಾಮಾಜಿಕ ಜಾಲತಾಣಗಳಿಂದ ಉಪಯೋಗವಾಗುತ್ತದೆ. ಆದರೆ ಅವನ್ನು ಸುಳ್ಳು ಸುದ್ದಿ ಮತ್ತು ತಪ್ಪು ಮಾಹಿತಿಗಳನ್ನು ಹರಡಲು ಬಳಸಿಕೊಂಡರೆ ಅಪಾಯ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳೇ ಹೆಚ್ಚು ಹಂಚಿಕೆಯಾಗುತ್ತಿವೆ. ಹೀಗಾಗಿ ನಾನು ಅವನ್ನು ನೋಡುವುದನ್ನೇ ಬಿಟ್ಟಿದ್ದೇನೆ' ಎಂದು ಹೇಳಿದರು.

'ಸುಳ್ಳು ಸುದ್ದಿ ನಿಯಂತ್ರಣಕ್ಕೆ ನಮ್ಮ ಸರ್ಕಾರ ಕ್ರಮ ತೆಗೆದುಕೊಂಡಿದೆ. ಜಿಲ್ಲಾ ಮಟ್ಟದಲ್ಲಿ ಫ್ಯಾಕ್ಟ್‌ಚೆಕ್ ಘಟಕಗಳನ್ನು ಆರಂಭಿಸಿದೆ. ಪತ್ರಕರ್ತರೂ ಫ್ಯಾಕ್ಟ್‌ಚೆಕ್ ಮಾಡಬೇಕು' ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ನಡೆದ 'ಪತ್ರಿಕಾ ದಿನಾಚರಣೆ'ಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಕರ್ತ ಕೃಷ್ಣಪ್ರಸಾದ್ ಅವರಿಗೆ ಹಸ್ತಲಾಘವ ಮಾಡಿದರು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಜೀರ್ ಅಹ್ಮದ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು– ಪ್ರಜಾವಾಣಿ ಚಿತ್ರ

'ಮಾಧ್ಯಮಗಳಿಗೆ ಸವಾಲು'

'ಸಾಮಾಜಿಕ ಜಾಲತಾಣಗಳು ಮುಖ್ಯವಾಹಿನಿಯ ಮಾಧ್ಯಮಗಳಿಗೆ ದೊಡ್ಡ ಸವಾಲು ಒಡ್ಡುತ್ತಿವೆ. ಅವುಗಳ ವಿರುದ್ಧದ ಯುದ್ಧದಲ್ಲಿ ಪತ್ರಕರ್ತರು ಗೆಲ್ಲಲಾಗದು. ಸಾಮಾಜಿಕ ಜಾಲತಾಣಗಳ ಬಳಕೆಯನ್ನು ಕರಗತ ಮಾಡಿಕೊಂಡು, ಜನರನ್ನು ತಲುಪುವುದು ಹೇಗೆ ಎಂಬುದನ್ನು ಕಂಡುಕೊಳ್ಳಬೇಕು. ಆಗ ಈ ಸವಾಲನ್ನು ಎದುರಿಸುವುದು ಸುಲಭವಾಗುತ್ತದೆ' ಎಂದು ಪತ್ರಕರ್ತ ಕೃಷ್ಣ ಪ್ರಸಾದ್ ಹೇಳಿದರು.

'ಶೇಕಡ 70ರಷ್ಟು ಜನರು ಸ್ಮಾರ್ಟ್‌ಫೋನ್‌ಗಳ ಮೂಲಕ ಸುದ್ದಿಗಳನ್ನು ಪಡೆದುಕೊಳ್ಳುತ್ತಾರೆ ಎಂಬುದನ್ನು ಕೆಲವು ಸಮೀಕ್ಷೆಗಳು ಹೇಳಿವೆ. ಸಾಮಾಜಿಕ ಜಾಲತಾಣಗಳು ಮುಖ್ಯವಾಹಿನಿಯ ಮಾಧ್ಯಮಗಳ ಜಾಹೀರಾತು ಆದಾಯವನ್ನು ಕಸಿದುಕೊಳ್ಳುತ್ತಿವೆ. ಜತೆಗೆ ಸುಳ್ಳು ಸುದ್ದಿಯನ್ನು ಹರಡುತ್ತಿವೆ. ಇವುಗಳನ್ನು ಎದುರಿಸುವ ಸವಾಲು ಮಾಧ್ಯಮಗಳ ಎದುರು ಇದೆ' ಎಂದರು.

ತಾಯಿ, ತಮ್ಮನ ಕಂಡು ಕಣ್ಣೀರಿಟ್ಟ ನಟ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರನ್ನು ತಾಯಿ ಮೀನಾ ಸೇರಿದಂತೆ ಅವರ ಕುಟುಂಬಸ್ಥರು ಸೋಮವಾರ ಭೇಟಿಯಾದರು.

ಮೀನಾ ಅವರೊಂದಿಗೆ ದರ್ಶನ್ ಪತ್ನಿ ವಿಜಯಲಕ್ಷ್ಮಿ, ಪುತ್ರ, ಸಹೋದರ ದಿನಕರ್ ತೂಗುದೀಪ್ ಭೇಟಿ ಮಾಡಿ ಕೆಲಕಾಲ ಚರ್ಚಿಸಿದರು. ಒಂದೇ ಕಾರಿನಲ್ಲಿ ಕುಟುಂಬಸ್ಥರು ಬಂದಿದ್ದರು. ಜೂನ್ 24ರಂದೂ ವಿಜಯಲಕ್ಷ್ಮಿ ಹಾಗೂ ಪುತ್ರ ಭೇಟಿ ಮಾಡಿದ್ದರು.

'ತಾಯಿಯನ್ನು ಕಂಡ ದರ್ಶನ್ ಕಣ್ಣೀರು ಹಾಕಿದರು. ಇದೇ ವೇಳೆ ಜತೆಗಿದ್ದ ಎಲ್ಲರೂ ಭಾವುಕರಾದರು' ಎಂದು ಜೈಲಿನ ಮೂಲಗಳು ತಿಳಿಸಿವೆ. ದಿನಕರ್ ಕಾನೂನು ಹೋರಾಟದ ಕುರಿತು ಕೆಲ ಕಾಲ ಚರ್ಚಿಸಿದರು ಎಂದು ಗೊತ್ತಾಗಿದೆ.

ಕಡಿಮೆಯಾಗದ ಅಭಿಮಾನಿಗಳು: 'ಜೈಲಿನಲ್ಲಿರುವ ದರ್ಶನ್ ಅವರನ್ನು ನೋಡಬೇಕು ಮತ್ತು ಅವರನ್ನು ಮಾತನಾಡಿಸಬೇಕು' ಎಂದು ಬರುವ ಅಭಿಮಾನಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸೋಮವಾರ ವೃದ್ಧೆಯೊಬ್ಬರು ಬಂದು ಮೂರು ತಾಸು ಕಾದರು. ಅವರಿಗೆ ಚೆಕ್‌ಪೋಸ್ಟ್‌ನಿಂದ ಮುಂದಕ್ಕೆ ಹೋಗಲು ಅವಕಾಶ ನೀಡಲಿಲ್ಲ. ಬಳಿಕ ಅವರು ವಾಪಸ್ ತೆರಳಿದರು ಎಂದು ಮೂಲಗಳು ತಿಳಿಸಿವೆ.

ವಂದೇ ಭಾರತ್ ದರ ಪರಿಷ್ಕರಣೆ ಇಲ್ಲ: ನೈರುತ್ಯ ರೈಲ್ವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಂದೇ ಭಾರತ್ ರೈಲು ದರದಲ್ಲಿ ಪರಿಷ್ಕರಣೆ ಮಾಡುವ ಯಾವುದೇ ಪ್ರಸ್ತಾವವಿಲ್ಲ ಎಂದು ನೈರುತ್ಯ ರೈಲ್ವೆ ಸ್ಪಷ್ಟಪಡಿಸಿದೆ.

'ಕರ್ನಾಟಕದ ಹಳ್ಳಿಗಳಿಗೆ ರೈಲು ಸಂಪರ್ಕವನ್ನು ಹೆಚ್ಚು ಮಾಡಿ ಜನಸಾಮಾನ್ಯರಿಗೆ ಕೈಗೆಟುಕುವ ದರದಲ್ಲಿ ಪ್ರಯಾಣ ಸೌಲಭ್ಯವನ್ನು ಕಲ್ಪಿಸಲಾಗುವುದು. ಜನಸಾಮಾನ್ಯರ ಅನುಕೂಲಕ್ಕಾಗಿ ರೈಲುಗಳಿಗೆ ಹೆಚ್ಚುವರಿಯಾಗಿ ಸಾಮಾನ್ಯ ಬೋಗಿಗಳನ್ನು ಅಳವಡಿಸುವ ಬಗ್ಗೆಯೂ ಚಿಂತನೆ ಇದೆ' ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ರಾಜ್ಯ ಖಾತೆ ಸಚಿವ ವಿ.ಸೋಮಣ್ಣ ಅವರು, 'ವಂದೇ ಭಾರತ್ ಸೇರಿದಂತೆ ಎಲ್ಲ ರೈಲುಗಳ ದರ ಪರಿಷ್ಕರಿಸಲಾಗುವುದು' ಎಂದು ಶನಿವಾರ ನೀಡಿದ್ದ ಹೇಳಿಕೆಗೆ ನೈರುತ್ಯ ರೈಲ್ವೆ ವಲಯ ಈ ಸ್ಪಷ್ಟನೆಯನ್ನು ನೀಡಿದೆ.

ಕೋನೊಕಾರ್ಪಸ್ ಸಸಿ ನೆಡದಿರಿ: ಸಚಿವ

ಬೆಂಗಳೂರು: 'ಮಳೆ ಪರಿಸರ'ಹಾಳು ಮಾಡುವ, ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಕೋನೊಕಾರ್ಪಸ್ (Conocarpus) ಸಸಿಗಳನ್ನು ರಾಜ್ಯದ ಯಾವುದೇ ಭಾಗದಲ್ಲಿ ನಡೆದಂತೆ ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಜೂನ್ 5ರಂದು ಪ್ರಕಟವಾದ 'ಆರೋಗ್ಯಕ್ಕೆ ಮಾರಕ 'ದುಬೈ ಗಿಡ'– ವಿಶೇಷ ವರದಿಯನ್ನು ಉಲ್ಲೇಖಿಸಿ, ಅದರ ಪ್ರತಿಯನ್ನು ಜುಲೈ 1ರ ಟಿಪ್ಪಣಿಯೊಂದಿಗೆ ಲಗತ್ತಿಸಿರುವ ಸಚಿವರು, ದೇಶದ ಕೆಲವು ರಾಜ್ಯಗಳಲ್ಲಿ ಕೋನೊಕಾರ್ಪಸ್ ಸಸಿಗಳನ್ನು ನಿಷೇಧಿಸಲಾಗಿದೆ. ಈ ಬಗ್ಗೆ ಕೂಡಲೇ ಪರಿಶೀಲನೆ ನಡೆಸಿ, ವೈಜ್ಞಾನಿಕವಾಗಿ ದುಷ್ಪರಿಣಾಮ ಕಂಡುಬಂದರೆ ರಾಜ್ಯ ಎಲ್ಲ ಭಾಗದಲ್ಲೂ ಕೋನೊಕಾರ್ಪಸ್ ಸಸಿಗಳನ್ನು ನೆಡದಂತೆ ಸಾಮಾಜಿಕ ಅರಣ್ಯ ವಿಭಾಗಕ್ಕೆ ಸ್ಪಷ್ಟ ಸೂಚನೆ ನೀಡಲು ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೆ ಸೂಚಿಸಿದ್ದಾರೆ.

ಮುಳುವಾದ ವರದಕ್ಷಿಣೆ ಕಿರುಕುಳ ದೂರು; ಅರ್ಜಿ ವಜಾ
ಪತ್ನಿ ವಿರುದ್ಧ ಕಾನೂನು ಕ್ರಮಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಗಂಡನ ಜನನಾಂಗ ಗುಹ್ಯರೋಗಕ್ಕೆ ತುತ್ತಾಗಿದೆ. ಮದುವೆಯಾದ ದಿನದಿಂದಲೂ ನನ್ನ ಜೊತೆ ಲೈಂಗಿಕ ಸಂಪರ್ಕ ಹೊಂದಲು ನಿರಾಸಕ್ತಿ ತೋರಿದ್ದಾನೆ. ಆತ ಅಮೆರಿಕದಲ್ಲಿದ್ದು ತನ್ನೊಟ್ಟಿಗೆ ನನ್ನನ್ನೂ ಅಲ್ಲಿಗೆ ಕರೆದೊಯ್ಯಲು ನಿರಾಕರಿಸಿದ್ದಾನೆ. ವರದಕ್ಷಿಣೆ ಕಿರುಕುಳ ನೀಡುವ ಮೂಲಕ ನನಗೆ ಮಾನಸಿಕ ಆಘಾತ ಉಂಟು ಮಾಡಿದ್ದಾನೆ, ನನ್ನನ್ನು ಒಂಟಿ ಮಾಡಿದ್ದಾನೆ...' ಎಂದೆಲ್ಲಾ ಆರೋಪಿಸಿ 32 ವರ್ಷದ ಮಹಿಳೆಯೊಬ್ಬರು, ಭಾರತೀಯ ದಂಡ ಸಂಹಿತೆ ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆಯಡಿ ದಾಖಲಿಸಿದ್ದ ದೂರನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಅಮೆರಿಕದ ಪ್ರಸಿದ್ಧ ಕಂಪನಿಯೊಂದರಲ್ಲಿ ಉತ್ಪಾದನಾ ಘಟಕದ ಎಂಜಿನಿಯರ್ ಆಗಿರುವ 35 ವರ್ಷದ ಪತಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರರ ವಿರುದ್ಧ ವಿಚಾರಣಾ ಕೋರ್ಟ್‌ನಲ್ಲಿರುವ ಪ್ರಕರಣವನ್ನು ರದ್ದುಗೊಳಿಸಿದೆ.

'ಜುಜುಬಿ ಕಾರಣಗಳಿಗಾಗಿ ಕಾನೂನಿನ ದುರ್ಬಳಕೆ ಮಾಡಿಕೊಂಡು ತನ್ನ ಗಂಡನನ್ನು ಪೊಲೀಸ್ ಠಾಣೆ, ಕೋರ್ಟ್–ಕಚೇರಿ ಅಲೆಯುವಂತೆ ಮಾಡಿರುವ ಪತ್ನಿಯ ದುರುದ್ದೇಶಪೂರಿತ ನಡೆಯನ್ನು ಆಕ್ಷೇಪಿಸಿ ಅರ್ಜಿದಾರ ಪತಿ ಇಚ್ಛೆಪಟ್ಟಲ್ಲಿ ಸೂಕ್ತ ಕಾನೂನು ಕ್ರಮಕ್ಕೆ ಮುಂದಾಗಬಹುದು' ಎಂದು ಆದೇಶಿಸಿದೆ.

ಪ್ರಕರಣದಲ್ಲಿ ಪೊಲೀಸರ ಹೇಳಿಕೆ ಮತ್ತು ದೋಷಾರೋಪ ಪಟ್ಟಿಯಲ್ಲಿರುವ ಅಂಶಗಳ ಮುಖಾಂತರ ಫಿರ್ಯಾದುದಾರ ಪತ್ನಿಯ ದೂರಿನ ಲೋಪಗಳನ್ನು ಹೆಕ್ಕಿ ತೋರಿಸಿರುವ ನ್ಯಾಯಪೀಠ, 'ಭಾರತೀಯ ಸಂಪ್ರದಾಯದಂತೆ ವಿಧಿಬದ್ಧವಾಗಿ ಪಾಣಿಗ್ರಹಣ ಮಾಡಿರುವ ತನ್ನ ಪತಿಯ ವಿರುದ್ಧ ಧರ್ಮಪತ್ನಿ ಸಲ್ಲದ ಆರೋಪ ಹೊರಿಸಿ ಆತನನ್ನು ಕಂಗಾಲಾಗಿಸಿದ್ದಾರೆ. ಕ್ಷುಲ್ಲಕ ಮತ್ತು ಕೌಟುಂಬಿಕ ಕಾರಣಗಳಿಗೆ ರೋಗದ ಲೇಪನ ಮಾಡಿ ವ್ಯಾಜ್ಯ ಹೂಡಿ ನ್ಯಾಯಾಲಯದ ಅಮೂಲ್ಯ ಸಮಯ ಹಾಳು ಮಾಡಿದ್ದಾರೆ. ಹೀಗಾಗಿ, ಈ ಪ್ರಕರಣ; ಪತ್ನಿಯ ವಿರುದ್ಧ ಪತಿ ಐಪಿಸಿ ಕಲಂ 211ರ ಅಡಿಯಲ್ಲಿ ಕ್ರಿಮಿನಲ್ ದೂರು ದಾಖಲಿಸಿ ತಮಗಾಗಿರುವ ಅನ್ಯಾಯದ ವಿರುದ್ಧ ನ್ಯಾಯಪಡೆಯಲು ಅತ್ಯಂತ ಯೋಗ್ಯವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ವರದಕ್ಷಿಣೆ ಬೇಡಿದ್ದಾರೆ ಎಂಬ ಅನುಮಾನಗಳ ಹುತ್ತಕಟ್ಟಿ; ಪತ್ನಿಯು ತನ್ನ ಪತಿಯನ್ನು ಎಚ್‌ಐವಿ, ಸಿಫಿಲಿಸ್, ಹೆಪಟೈಟಿಸ್ ಬಿ ಮತ್ತು ಎಸ್‌ಟಿಡಿ ಪರೀಕ್ಷೆಗಳಿಗೆ ಒಳಪಡುವಂತೆ ಒತ್ತಾಯಿಸಿದ್ದಾರೆ. ಆದರೆ, ಈ ಸಂಬಂಧ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆಸಲಾದ ಈ ಎಲ್ಲಾ ಪರೀಕ್ಷೆಗಳಲ್ಲೂ ಪತಿಗೆ ಯಾವುದೇ ರೋಗವಿಲ್ಲ ಎಂಬುದು ದೃಢಪಟ್ಟಿದೆ. ಆಕೆಯ ತಾಯಿ ಮತ್ತು ಸಹೋದರ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ ವರದಕ್ಷಿಣೆ ಕಿರುಕುಳವನ್ನು ನಿರಾಕರಿಸಿದ್ದಾರೆ. ಹೀಗಾಗಿ, ಈ ಪ್ರಕರಣದಲ್ಲಿನ ಸಂಪೂರ್ಣ ದಾಖಲೆಗಳನ್ನು ಗಮನಿಸಿದಾಗ ಪತಿಯ ದೋಷ, ಕೌಟುಂಬಿಕ ಕ್ರೌರ್ಯದ ಆರೋಪಗಳು ನಿರಾಧಾರ ಎಂಬುದು ಸ್ಪಷ್ಟವಾಗಿದೆ' ಎಂದು ನ್ಯಾಯಪೀಠ ವಿವರಿಸಿದೆ.

ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅರ್ಜಿ: ನೋಟಿಸ್

ಬೆಂಗಳೂರು: ಖಾಸಗಿ ಅನುದಾನರಹಿತ ಶಾಲೆಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿಗೆ ವಿದ್ಯಾರ್ಥಿಗಳ ದಾಖಲಾತಿ, ಶುಲ್ಕ ಸಂಗ್ರಹಣೆಗೆ ಸಂಬಂಧಿಸಿದಂತೆ ಹೊರಡಿಸಲಾಗಿರುವ ಸುತ್ತೋಲೆ ಆಕ್ಷೇಪಿಸಿ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ 'ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟ' ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಸೋಮವಾರ ವಿಚಾರಣೆ ನಡೆಸಿತು. ಕೆಲಕಾಲ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್ ವಾದ ಆಲಿಸಿದ ನ್ಯಾಯಪೀಠ, ಶಿಕ್ಷಣ ಇಲಾಖೆ ಕಾರ್ಯದರ್ಶಿ ಹಾಗೂ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ವಿಚಾರಣೆ ಮುಂದೂಡಿತು.

ದೇವರಾಜೇಗೌಡಗೆ ಜಾಮೀನು

ಬೆಂಗಳೂರು: ಮಹಿಳೆಯೊಬ್ಬರ ವಿರುದ್ಧದ ಅತ್ಯಾಚಾರ ಆರೋಪದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಹೈಕೋರ್ಟ್ ವಕೀಲ ಜಿ.ದೇವರಾಜೇಗೌಡ ಅವರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಹಾಸನದ ಜಿ.ದೇವರಾಜೇಗೌಡ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪುರಸ್ಕರಿಸಿ ಆದೇಶಿಸಿದೆ.

ದೇವರಾಜೇಗೌಡ ವಿರುದ್ಧ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ ಕಲಂ 354(ಎ), 354(ಬಿ), 354(ಸಿ), 448, 504, 506 ಜೊತೆಗೆ ಕಲಂ 34ರ ಅಡಿ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಕಲಂ 66(ಇ) ಅಡಿ ಪ್ರಕರಣ ದಾಖಲಿಸಲಾಗಿತ್ತು. ತದನಂತರ ಹೆಚ್ಚುವರಿಯಾಗಿ ಐಪಿಸಿ ಕಲಂಗಳಾದ 354(ಡಿ) ಮತ್ತು 376(1) ಅನ್ನು ಎಫ್‌ಐಆರ್‌ಗೆ ಸೇರ್ಪಡೆ ಮಾಡಲಾಗಿತ್ತು. ಹಾಸನ ಜಿಲ್ಲಾ ವಿಚಾರಣಾ ನ್ಯಾಯಾಲಯ ದೇವರಾಜೇಗೌಡ ಅವರಿಗೆ ಜೂನ್ 5ರಂದು ಜಾಮೀನು ನೀಡಲು ನಿರಾಕರಿಸಿತ್ತು. ಹೀಗಾಗಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ಹವಾ ನಿಯಂತ್ರಣ ಉಪಕರಣಗಳ ವಾರ್ಷಿಕ ನಿರ್ವಹಣಾ ಸೇವೆ ಒದಗಿಸುವ ಬಗ್ಗೆ ಅಲ್ಪಾವಧಿ ಟೆಂಡರ್ ಆಹ್ವಾನ

"ಖನಿಜ ಭವನ"ದ ಪೂರ್ವ ಭಾಗ, 4ನೇ ಮಹಡಿ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001 ನಲ್ಲಿರುವ ಕೆಎಸ್‌ಐಐಡಿಸಿ ಕಛೇರಿಯಲ್ಲಿ ಅಳವಡಿಸಿರುವ ಹವಾ ನಿಯಂತ್ರಣ ಉಪಕರಣಗಳ ವಾರ್ಷಿಕ ನಿರ್ವಹಣಾ ಸೇವೆಗೆ ಸೇವಾ ಸಂಸ್ಥೆಯನ್ನು ನೇಮಕಾತಿ ಮಾಡಿಕೊಳ್ಳುವ ಸಂಬಂಧ ಕಂಪನಿ/ ಸಂಸ್ಥೆಗಳಿಂದ ಕರ್ನಾಟಕ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಆಹ್ವಾನಿಸಲಾಗಿದೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಯಾವುದೇ ದಿನದ ಕೆಲಸದ ಅವಧಿಯಲ್ಲಿ ಸಂಪರ್ಕಿಸಬಹುದು ಮತ್ತು ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿ & ಅ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ–ಆರ್‌ಐ
ಎನ್. ಆರ್. ಚೌಕ, ಬೆಂಗಳೂರು– 560 002.
ಸಂ: ಕಾಪಾಅ/ರಮೂಸೌ/ಟೆಂಡ್/06/2024–25 ದಿನಾಂಕ: 01.07.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ	ಕಾಮಗಾರಿ ವಿವರ
1.	ವೈಬ್ರೆಂಟ್ ಬೆಂಗಳೂರು ಅಡಿಯಲ್ಲಿ ಡಿಜಿಟಲ್ ಮೂಲಸೌಕರ್ಯ ಯುಟಿಲಿಟಿ ಕಾರಿಡಾರ್ – ಬ್ರಾಂಡ್ ಬೆಂಗಳೂರು ಅನುಷ್ಠಾನಕ್ಕೆ ಕಾರ್ಯಸಾಧ್ಯತೆ / ಪರಿಕಲನೆ ಮತ್ತು ಡಿಪಿಆರ್ ತಯಾರಿಗಾಗಿ ವಹಿವಾಟು ಸಲಹೆಗಾರ ಮತ್ತು ಸಲಹಾ ಸೇವೆಗಳ ನೇಮಕಾತಿ. ಇಎಂಡಿ: ರೂ. 1.00 ಲಕ್ಷ. ಪೂರ್ಣ ಗೊಳಿಸುವಿಕೆಯ ನಿಗದಿತ ಅವಧಿ: 90 ದಿನಗಳು.

1) ಆರ್‌ಎಫ್‌ಪಿ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: 02.07.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ: 08.07.2024ರ ಸಂಜೆ 4.00 ಗಂಟೆಗೆ. 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11.07.2024ರ ಸಂಜೆ 4.30 ಗಂಟೆಯವರೆಗೆ 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 12.07.2024ರ ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ–ಆರ್‌ಐ

ಕರ್ನಾಟಕ ಗೃಹ ಮಂಡಳಿ
Karnataka Housing Board – Building Communities
ಹಂಚಿಕೆ ವಿಭಾಗ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/2024–25 ದಿನಾಂಕ: 01–07–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಸೂರ್ಯನಗರ 2ನೇ ಹಂತದ ಮುಂದುವರೆದ ರಾಜಾಪುರ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ಹಂಚಿಕೆಗೆ 13.04.2021 ರಂದು ಪತ್ರಿಕಾ ಪ್ರಕಟಣೆ ನೀಡಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಾರ್ವಜನಿಕರಿಂದ ಆಹ್ವಾನಿಸಲಾಗಿರುತ್ತದೆ. ಸದರಿ ಪ್ರಕಟಣೆಗೆ ಅನುಗುಣವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಜಿದಾರರು www.khb.karnataka.gov.in ಅಂತರ್ಜಾಲ ಮೂಲಕ ತಮ್ಮ ನೋಂದಣಿ ಸಂಖ್ಯೆ ನಮೂದಿಸಿ ಪ್ರವರ್ಗಕ್ಕನುಗುಣವಾಗಿ (Reservation) ಸಲ್ಲಿಸಬೇಕಿರುವ ದಾಖಲಾತಿಗಳನ್ನು ದಿನಾಂಕ: 15.07.2024 ರೊಳಗೆ upload ಮಾಡಲು ತಿಳಿಸಿದೆ. ತಪ್ಪಿದ್ದಲ್ಲಿ ಅಂತಹ ಅರ್ಜಿಗಳನ್ನು ಅನರ್ಹತಾ ಪಟ್ಟಿಗೆ ಪರಿಗಣಿಸಲಾಗುವುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/RO704/AAPL/2024-25

ONE NATION ONE TAX ONE MARKET
ಕೇಂದ್ರಿಯ ತೆರಿಗೆ ಆಯುಕ್ತರ ಕಚೇರಿ
ಬೆಂಗಳೂರು ಉತ್ತರ ಆಯುಕ್ತಾಲಯ
ನಂ. 59, ನೆಲಮಹಡಿ, ಹೆಚ್‌ಎಂಟಿ ಭವನ, ಬಳ್ಳಾರಿ ರಸ್ತೆ, ಬೆಂಗಳೂರು–560032
ಎಫ್.ನಂ.2/(31)/4/2024–ಅಡ್ಮಿನ್ & ಎಸ್ಟೇಟ್/ಕಮಿಷ/ಸಿಜಿಎಸ್‌ಟಿ–ಬೆಂಗಳೂರು (ಎನ್)
ದಿನಾಂಕ: 19.06.2024

ಕ್ರೀಡಾ ಕೋಟಾ ಅಡಿಯಲ್ಲಿ ನೇಮಕಾತಿ

ಕೇಂದ್ರಿಯ ತೆರಿಗೆ ಪ್ರಧಾನ ಮುಖ್ಯ ಆಯುಕ್ತರು, ಬೆಂಗಳೂರು ವಲಯ, ಇವರು ಕೆಳಗಿನ ದರ್ಜೆಗಳಲ್ಲಿನ ಕ್ರೀಡಾ ಕೋಟಾ ಅಡಿಯಲ್ಲಿ ನೇಮಕಾತಿಗಾಗಿ ಪ್ರತಿಭಾನ್ವಿತ ಕ್ರೀಡಾಪಟುಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂ.	ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ
1	ಟ್ಯಾಕ್ಸ್ ಅಸಿಸ್ಟಂಟ್	08	ಹಂತ 4 (ರೂ.25,500–81,100)
2	ಸ್ಟೆನೊಗ್ರಾಫರ್ ಗ್ರೇಡ್–2	01	ಹಂತ 4 (ರೂ.25,500–81,100)
3	ಹವಾಲ್ದಾರ್	07	ಹಂತ 1 (ರೂ.18,000–56,900)

ಸೂಚನೆ: ಶೈಕ್ಷಣಿಕ ವಿದ್ಯಾರ್ಹತೆ, ಇನ್ನಿತರ ಅರ್ಹತಾ ಷರತ್ತುಗಳು ಹಾಗೂ ಸಂಪೂರ್ಣ ಷರತ್ತು ಮತ್ತು ನಿಬಂಧನೆಗಳ ವಿವರಗಳು ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳ ವಿವರಗಳು ಇಲಾಖೆಯ www.cbic.gov.in ವೆಬ್‌ಸೈಟ್‌ನಲ್ಲಿನ https://www.cbic.gov.in/entities/cbic-content-mst/MTcwMDM%3D ಲಿಂಕ್‌ನಲ್ಲಿ ಲಭ್ಯವಿರುತ್ತದೆ. ಅರ್ಹ ಅಭ್ಯರ್ಥಿಗಳು ಮೇಲ್ಕಂಡ ವಿಳಾಸದಲ್ಲಿ ತಮ್ಮ ಕರಡು ಪ್ರತಿ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿಗಳ ಪರಿಶೀಲನೆಯ ಸಂದರ್ಭದಲ್ಲಿ, ಅಪೂರ್ಣವಾಗಿ ಭರ್ತಿ ಮಾಡಿರುವ ಅರ್ಜಿಗಳನ್ನು ಮುಲಾಜಿಲ್ಲದೆ ತಿರಸ್ಕರಿಸಲಾಗುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 09.08.2024 ರಂದು 1800 ಗಂಟೆ.

ಕೇಂದ್ರಿಯ ತೆರಿಗೆ ಆಯುಕ್ತರು
ಬೆಂಗಳೂರು ಉತ್ತರ ಆಯುಕ್ತಾಲಯ

INNOVATE KARNATAKA | K-tech
ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ)–3ನೇ ಕರೆ
ಪ್ರೊಪೆಲ್ ಪ್ಲಾಟ್‌ಫಾರಂನ ವಿನ್ಯಾಸ, ಅಭಿವೃದ್ಧಿ ಮತ್ತು ಕಾರ್ಯಗತಗೊಳಿಸಲು ಏಜೆನ್ಸಿಯ ಆಯ್ಕೆ

ಆರ್‌ಎಫ್‌ಪಿ ಪ್ರಕಟಣೆ ಸಂಖ್ಯೆ: ITBTST/2023-24/SE0005/CALL-3 dt.02/07/2024

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿಯು (ಕಿಟ್ಸ್) ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಇಲಾಖೆಯು 'ಪ್ರೊಪೆಲ್' ವೇದಿಕೆಯ ವಿನ್ಯಾಸ, ಅಭಿವೃದ್ಧಿ ಹಾಗೂ ಅನುಷ್ಠಾನಕ್ಕಾಗಿ ಏಜೆನ್ಸಿಯನ್ನು ನೇಮಿಸಲು ಇಚ್ಛಿಸಿದೆ. ಈ ಬಗ್ಗೆ ಕಿಟ್ಸ್, ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ) ಯ ಪ್ರತಿಕ್ರಿಯೆಗೆ ಅನ್ವಯಿಸುವಂತೆ ಅರ್ಹ ಏಜೆನ್ಸಿಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ಏಜೆನ್ಸಿಗಳು ಪ್ರಸ್ತಾವನೆಗಾಗಿ ಮನವಿಯ ಎಲೆಕ್ಟ್ರಾನಿಕ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು ಮತ್ತು ಬಿಡ್ಡರ್ಸ್ ಡಿಜಿಟಲ್ ಸಿಗ್ನೇಚರ್ ಪ್ರಮಾಣ ಪತ್ರ (DSC) ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ನಲ್ಲಿ ಪ್ರಸ್ತಾವನೆಯನ್ನು (PDF ನಮೂನೆಯಲ್ಲಿ) ಅಪ್‌ಲೋಡ್ ಮಾಡಬೇಕು.

ಈ ಪ್ರಸ್ತಾವನೆಗಾಗಿ ಮನವಿಗೆ ಸಂಬಂಧಿಸಿದ ಯಾವುದೇ ಸೂಚನೆ/ಮಾಹಿತಿಗಳನ್ನು ಮುಂದೆ https://kppp.karnataka.gov.in ನಲ್ಲಿ ಮಾತ್ರ ಲಭ್ಯವಿರುತ್ತದೆ.

ಪ್ರಸ್ತಾವನೆಯನ್ನು ದಿನಾಂಕ 09.07.2024 ರಂದು ಸಂಜೆ 5.00 ಗಂಟೆ ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು. ಅರ್ಹತೆ, ಅಗತ್ಯತೆ ಹಾಗೂ ಇತರೆ ನಿಬಂಧನೆಗಳಿಗೆ ಪ್ರಸ್ತಾವನೆಗಾಗಿ ಮನವಿಯನ್ನು ಉಲ್ಲೇಖಿಸುವುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ 'ಬಿ' ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in
ವಾಸಾಸಂಇ/ವಾಪ್ರ/713/ಆಕಾರ್/2024–25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸ.ಇಂ–3/ಟೆಂಡರ್01/2024–25 ದಿ: 20.06.2024

ಮುಂದೂಡಿದ ಪ್ರಕಟಣೆ ಸಂಖ್ಯೆ: 01/2024–25
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಉಪವಿಭಾಗ ಪಾವಗಡ ತಾಲ್ಲೂಕಿನ ಕಾಮಗಾರಿಗೆ KPPP Portal ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ತಾಂತ್ರಿಕ ಕಾರಣಗಳಿಂದ ಕ್ರ.ಸಂ: 01ರ ಕಾಮಗಾರಿಗೆ ಈ ಕೆಳಕಂಡ ದಿನಾಂಕದಂತೆ ಮುಂದೂಡಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.180.00 ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 11.07.2024 ಸಂಜೆ 4.00 ಗಂಟೆಯ ನಂತರ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 12.07.2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 16.07.2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ : 08.07.2024 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/101/KSMCA/2024-25

ಪಟ್ಟಣ ಪಂಚಾಯತ್ ಕಾರ್ಯಾಲಯ, ಕುಕನೂರು
Tq: Kukanoor Dist: Koppal Ph No:08534- 230845
Email ID : itstaff_ulb_kukanoor@yahoo.com
ಕ್ರ.ಸಂ:ಪ.ಪಂ./ಕಾ.ವಿ/2024–25/49 ದಿನಾಂಕ:–01–07–2024

ಕೆ.ಪಿ.ಪಿ.ಪಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ ಟೆಂಡರ ಪ್ರೊಕ್ಯೂರ್‌ಮೆಂಟ್ ಕೆ.ಡಬ್ಲ್ಯೂ–1/2/3/4 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಕುಕನೂರು ಪಟ್ಟಣ ಪಂಚಾಯತ ವ್ಯಾಪ್ತಿಯ ವಿವಧ ಯೋಜನೆಗಳ ಅನುದಾನದ ಅಡಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 16–07–2024 ರ ಸಾಯಂಕಾಲ 5:00 ಗಂಟೆಗೆ ಮತ್ತು ಟೆಂಡರ್ ತೆರೆಯುವ ದಿನಾಂಕ: 17–07–2024 ರ ಸಾಯಂಕಾಲ 5:30 ಗಂಟೆಗೆ ಅಥವಾ ನಂತರದ ದಿನಗಳಲ್ಲಿ ಮತ್ತು ಆರ್ಥಿಕ ಬಿಡ್‌ಗಳನ್ನು ನಂತರದ ದಿನಗಳಲ್ಲಿ ತೆರಯಲಾಗುವುದು.

1.DMA/2024-25/OW/WORK_INDENT18828. ಟೆಂಡರ್‌ಗಿಟ್ಟ ಮೊತ್ತ ರೂ:43,66,543.21. ಇ.ಎಂ.ಡಿ ಮೊತ್ತ ರೂ:88,000.00. 2.DMA/2024-25/OW/WORK_INDENT18826. ಟೆಂಡರ್‌ಗಿಟ್ಟ ಮೊತ್ತ ರೂ:65,78,431.58. ಇ.ಎಂ.ಡಿ ಮೊತ್ತ ರೂ:1,32,000.00. 3.DMA/2024-25/BD/WORK_INDENT18821. ಟೆಂಡರ್‌ಗಿಟ್ಟ ಮೊತ್ತ ರೂ:84,34,305.27. ಇ.ಎಂ.ಡಿ ಮೊತ್ತ ರೂ:1,69,000.00. 4.DMA/2024-25/WS/WORK_INDENT18899. ಟೆಂಡರ್‌ಗಿಟ್ಟ ಮೊತ್ತ ರೂ:5,25,496.09. ಇ.ಎಂ.ಡಿ ಮೊತ್ತ ರೂ: 13,200.00. 5.DMA/2024-25/WS/WORK_INDENT19910. ಟೆಂಡರ್‌ಗಿಟ್ಟ ಮೊತ್ತ ರೂ:15,24,790.90. ಇ.ಎಂ.ಡಿ ಮೊತ್ತ ರೂ:38,200.00. 6.DMA/2024-25/EL/WORK_INDENT119945. ಟೆಂಡರ್‌ಗಿಟ್ಟ ಮೊತ್ತ ರೂ:3,16,457.12. ಇ.ಎಂ.ಡಿ ಮೊತ್ತ ರೂ: 8,000.00. 7.DMA/2024-25/BR/WORK_INDENT19941. ಟೆಂಡರ್‌ಗಿಟ್ಟ ಮೊತ್ತ ರೂ:19,21,577.10. ಇ.ಎಂ.ಡಿ ಮೊತ್ತ ರೂ: 49,000.00

Note :- Any changes in Calendar of events will be published in http://kppp.karnataka.gov.in portal only

ಸಹಿ/–ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕುಕನೂರು.
ಡಿಐಪಿಆರ್/ಕೊಪ್ಪಳ/104/ಎಂಸಿಎ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಬದುಕಿನಲ್ಲಿ ಪರಮಾವಧಿಯ ತೃಪ್ತಿಯನ್ನು ಕೊಡಬಲ್ಲುದು ಒಂದೇ ಒಂದು, ತಾನು ಸರಿಯಾಗಿ ನಡೆದಿದ್ದೇನೆ ಎಂಬ ಆತ್ಮವಿಶ್ವಾಸ.

–ಕೆ. ಶಿವರಾಮ ಕಾರಂತ

ಮಕ್ಕಳಿಗೆ ಪೌಷ್ಟಿಕ ಆಹಾರ ತುರ್ತು ಕ್ರಮದ ಅಗತ್ಯ ಇದೆ

ಮಕ್ಕಳ ಪೌಷ್ಟಿಕತೆ ಕುರಿತು ಯುನಿಸೆಫ್ ಇತ್ತೀಚೆಗೆ ವರದಿಯೊಂದನ್ನು ಬಿಡುಗಡೆ ಮಾಡಿದೆ. ಜಗತ್ತಿನಾದ್ಯಂತ ಮತ್ತು ಭಾರತದ ಮಕ್ಕಳ ಮೇಲೆ ಅಪೌಷ್ಟಿಕತೆಯು ಬೀರಬಹುದಾದ ಪರಿಣಾಮವು ಕಳವಳ ಮೂಡಿಸುವಂತಿದೆ. ಮಕ್ಕಳ ಪೌಷ್ಟಿಕತೆ ವರದಿ- 2024ರ ಪ್ರಕಾರ, ಜಗತ್ತಿನಲ್ಲಿ ಐದು ವರ್ಷದ ಒಳಗಿನ 18.1 ಕೋಟಿ ಮಕ್ಕಳು ತೀವ್ರವಾದ ಆಹಾರ ಕೊರತೆಯನ್ನು ಎದುರಿಸುತ್ತಿದ್ದಾರೆ. ಭಾರತ, ಚೀನಾ, ಅಫ್ಘಾನಿಸ್ತಾನ, ಪಾಕಿಸ್ತಾನ ಸೇರಿದಂತೆ 20 ದೇಶಗಳ ಪಾಲು ಇದರಲ್ಲಿ ಶೇಕಡ 65ರಷ್ಟಿದೆ ಎಂಬುದು ಆತಂಕಕಾರಿ ವಿಚಾರ. ಆಫ್ರಿಕಾ ಖಂಡದ ಕೆಲವು ದೇಶಗಳಲ್ಲಿಯೂ ಮಕ್ಕಳ ಆಹಾರ ಕೊರತೆಯು ಕಳವಳ ಮೂಡಿಸುವ ಪ್ರಮಾಣದಲ್ಲಿ ಇದೆ. ಮೂವರಲ್ಲಿ ಇಬ್ಬರು ಮಕ್ಕಳು ಆಹಾರದ ಕೊರತೆಯಿಂದ ಬಳಲುತ್ತಿದ್ದಾರೆ. ನಾಲ್ಕರಲ್ಲಿ ಒಂದು ಮಗು ತೀವ್ರ ಪ್ರಮಾಣದ ಆಹಾರದ ಕೊರತೆ ಎದುರಿಸುತ್ತಿದೆ. ಭಾರತದ ಮಕ್ಕಳ ಪೈಕಿ ಶೇ 40ರಷ್ಟು ಮಕ್ಕಳಿಗೆ ಆಹಾರದ ಕೊರತೆ ಇದೆ. ಕುಟುಂಬದಲ್ಲಿನ ಬಡತನವೇ ಅಪೌಷ್ಟಿಕತೆಗೆ ಮುಖ್ಯ ಕಾರಣ. ಪೌಷ್ಟಿಕಾಂಶಗಳು ಇಲ್ಲದ ಆಹಾರ ಸೇವನೆಯೊಂದೇ ಅಪೌಷ್ಟಿಕತೆಗೆ ಕಾರಣ ಅಲ್ಲ. ಬೇಕಾದಷ್ಟು ಪ್ರಮಾಣದಲ್ಲಿ ಆಹಾರ ಸೇವಿಸದಿರುವುದು, ಆಹಾರ ಸೇವನೆಯ ವಾತಾವರಣ ಕೂಡ ಈಗಿನ ಪರಿಸ್ಥಿತಿಗೆ ಕಾರಣವಾಗಿದೆ. ಐದು ವರ್ಷದವರೆಗಿನ ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಮತ್ತು ಸಮತೋಲಿತ ಆಹಾರ ಸಿಗದಿರುವುದು ಮತ್ತು ಸೇವಿಸದಿರುವುದನ್ನು ಮಕ್ಕಳಿಗೆ ಆಹಾರದ ಕೊರತೆ ಎಂದು ಯುನಿಸೆಫ್ ವ್ಯಾಖ್ಯಾನಿಸಿದೆ.

ಆಹಾರ ವಸ್ತುಗಳ ದುಬಾರಿ ದರ ಕೂಡ ಹಲವರಿಗೆ ಪೌಷ್ಟಿಕ ಆಹಾರ ಸರಿಯಾಗಿ ದೊರಕದಂತೆ ಮಾಡಿದೆ

ಮಕ್ಕಳ ಪೌಷ್ಟಿಕತೆ ಪರಿಸ್ಥಿತಿಯನ್ನು ನಿರ್ಧರಿಸುವ ಅಂಶಗಳಲ್ಲಿ ಕುಟುಂಬದ ಆದಾಯವೊಂದೇ ಮುಖ್ಯ ಅಲ್ಲ ಎಂಬುದು ವರದಿಯಲ್ಲಿ ಇರುವ ಒಂದು ಮುಖ್ಯ ಅಂಶ. ಆಹಾರದ ತೀವ್ರ ಕೊರತೆ ಎದುರಿಸುತ್ತಿರುವ ಮಕ್ಕಳ ಪೈಕಿ ಅರ್ಧದಷ್ಟು ಮಕ್ಕಳು ತುಲನಾತ್ಮಕವಾಗಿ ಉತ್ತಮ ವರಮಾನ ಹೊಂದಿರುವ ಕುಟುಂಬಗಳಲ್ಲಿಯೇ ಇದ್ದಾರೆ. ಬಾಧಿತರಾದ ಶೇ 46ರಷ್ಟು ಮಕ್ಕಳು ಬಡ ಕುಟುಂಬಗಳಲ್ಲಿ ಇರುವವರು. ಆದರೆ, ಶೇ 54ರಷ್ಟು ಮಕ್ಕಳು ಬಡತನ ರೇಖೆಗಿಂತ ಮೇಲೆ ಇರುವ ಕುಟುಂಬಗಳಲ್ಲಿ ಇರುವವರು. ಆಹಾರ ಸೇವನೆಯಲ್ಲಿ ಅಸಮರ್ಪಕತೆ, ಆಹಾರ ಸೇವನೆಯ ವಾತಾವರಣದಲ್ಲಿನ ಮಾಲಿನ್ಯ ಮತ್ತು ಅಗ್ಗದ ಅನಾರೋಗ್ಯಕರ ಆಹಾರ ಸೇವನೆ ಕೂಡ ಮಕ್ಕಳಲ್ಲಿ ಅಪೌಷ್ಟಿಕತೆಗೆ ಕಾರಣ. ಸಂಘರ್ಷಗಳು, ಹವಾಮಾನ ಬಿಕ್ಕಟ್ಟು, ಆರ್ಥಿಕ ಅಸಮಾನತೆಗಳು ಈ ಪರಿಸ್ಥಿತಿಯು ಮತ್ತಷ್ಟು ಶೋಚನೀಯಗೊಳ್ಳುವಂತೆ ಮಾಡಿವೆ. ಆಹಾರದ ಅತಿ ಹೆಚ್ಚಿನ ದರ ಕೂಡ ಹಲವರಿಗೆ ಪೌಷ್ಟಿಕ ಆಹಾರ ದೊರಕದಂತೆ ಮಾಡಿದೆ.

ಪ್ರತಿ ದಿನವೂ ಎರಡು ಬಗೆಯ ಆಹಾರಗಳನ್ನು ಮಾತ್ರ ತೆಗೆದುಕೊಳ್ಳುವ ಮಕ್ಕಳಲ್ಲಿ ತೀವ್ರ ಅಪೌಷ್ಟಿಕತೆ ಉಂಟಾಗುವ ಸಾಧ್ಯತೆ ಶೇ 50ರಷ್ಟು ಹೆಚ್ಚು ಎಂಬುದರತ್ತ ವರದಿಯು ಗಮನ ಸೆಳೆದಿದೆ. ಎರಡು ಬಗೆಯ ಆಹಾರ ಎಂದರೆ ಪ್ರತಿ ದಿನವೂ ಹಾಲು ಮತ್ತು ಅನ್ನವನ್ನು ಮಾತ್ರ ತೆಗೆದುಕೊಳ್ಳುವುದು. ಎಂಟು ಬಗೆಯ ಪ್ರಮುಖ ಆಹಾರಗಳಲ್ಲಿ ಐದು ಬಗೆಯ ಆಹಾರಗಳನ್ನಾದರೂ ತೆಗೆದುಕೊಳ್ಳಬೇಕು. ಅವುಗಳೆಂದರೆ, ಎದೆಹಾಲು, ಹಾಲಿನ ಉತ್ಪನ್ನಗಳು, ಮೊಟ್ಟೆ, ಮಾಂಸ ಮತ್ತು ಮೀನು, ಧಾನ್ಯಗಳು ಮತ್ತು ಬೀಜಗಳು, ವಿಟಮಿನ್ ಎ ಸಮೃದ್ಧವಾಗಿರುವ ಹಣ್ಣುಗಳು ಮತ್ತು ತರಕಾರಿಗಳು, ಕಾಳು ಮತ್ತು ಗೆಡ್ಡೆಗಳು. ಈ ಮಾರ್ಗಸೂಚಿಯು ಜನರಿಗೆ ತಲುಪುವಂತೆ ಮಾಡಬೇಕಿದೆ. ಹೀಗೆ ಜನರಿಗೆ ತಲುಪಿದರೆ ಮಾತ್ರ ಕುಟುಂಬಗಳಿಗೆ ವೈವಿಧ್ಯಮಯ ಮತ್ತು ಸಮತೋಲಿತ ಆಹಾರದ ಮಹತ್ವ ಅರ್ಥವಾಗುತ್ತದೆ. ಭಾರತದ ಮುಂದೆ ಎರಡು ಸವಾಲುಗಳಿವೆ. ಮಕ್ಕಳಿಗೆ ಪೌಷ್ಟಿಕ ಆಹಾರದ ಖಾತರಿಗಾಗಿ ಕುಟುಂಬದ ಬಡತನದ ಸಮಸ್ಯೆಯನ್ನು ಬಗೆಹರಿಸಬೇಕಿದೆ. ಬೇಕಾದಷ್ಟು ಪೌಷ್ಟಿಕತೆಯನ್ನು ಒದಗಿಸಬೇಕಿದ್ದರೆ ಮೂಲಭೂತವಾದ ಆಹಾರವಷ್ಟೇ ಸಾಲುವುದಿಲ್ಲ. ಮಹಿಳೆಯರು, ಹಸುಳೆಯರು ಮತ್ತು ಮಕ್ಕಳಿಗಾಗಿ ಹಲವಾರು ಯೋಜನೆಗಳನ್ನು ಸರ್ಕಾರ ರೂಪಿಸಿದ್ದರೂ ಅವು ಅಗತ್ಯ ಇರುವವರಿಗೆ ಪೌಷ್ಟಿಕತೆಯನ್ನು ಒದಗಿಸುವಲ್ಲಿ ಯಶಸ್ವಿಯಾಗಿಲ್ಲ. ಉತ್ತಮ ಸ್ಥಿತಿಯಲ್ಲಿರುವ ಕುಟುಂಬಗಳು ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಆಹಾರ ನೀಡುವಂತೆ ಜಾಗೃತಿ ಮೂಡಿಸುವುದು ಮತ್ತೊಂದು ಸವಾಲಾಗಿದೆ. ಹಲವು ಕುಟುಂಬಗಳಲ್ಲಿ ಪೌಷ್ಟಿಕತೆ ಕೊರತೆಯ ಮುಖ್ಯ ಕಾರಣ ಸಂಪನ್ಮೂಲದ ಕೊರತೆ ಅಲ್ಲ, ಬದಲಿಗೆ ಜಾಗೃತಿ ಇಲ್ಲದಿರುವುದಾಗಿದೆ. ಹಾಗಾಗಿ ಜಾಗೃತಿ ಮೂಡಿಸುವುದು ಕೂಡ ಬಹಳ ಮುಖ್ಯವಾದ ಕೆಲಸವಾಗಿದೆ.

ದಿನದ ಟ್ವೀಟ್

ಅಂತೂ ಪಡೆದುಕೊಂಡಿದ್ದೇವೆ...

ವಿರೋಧ ಪಕ್ಷಕ್ಕೆ ಧ್ವನಿ ಇರುವ ಸಂಸತ್ತನ್ನು ನಾವು ಹತ್ತು ವರ್ಷಗಳ ನಂತರ ಅಂತೂ ಪಡೆದುಕೊಂಡಿದ್ದೇವೆ. ಆ ಧ್ವನಿಯನ್ನು ಉಪೇಕ್ಷಿಸಲು ಆಗುವುದಿಲ್ಲ.

ರಾಜದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ರಾಹುಲ್ ಗಾಂಧಿ ಇಂದು ಮಾಡಿದ ಭಾಷಣವು ಲೋಕಸಭೆಯ ವಿರೋಧ ಪಕ್ಷದ ನಾಯಕನೊಬ್ಬನ ಅತ್ಯಂತ ನಿಷ್ಠುರ ಭಾಷಣಗಳಲ್ಲೊಂದು. ಇದು ನರೇಂದ್ರ ಮೋದಿ, ಅಮಿತ್ ಶಾ ಮತ್ತು ಅವರ ಬೆಂಬಲಿಗರನ್ನು ಸಂಪೂರ್ಣವಾಗಿ ತಬ್ಬಿಬ್ಬುಗೊಳಿಸಿದೆ. ಅವರು ರಾಹುಲ್ ಅವರನ್ನು ಹಿಂದೂ ವಿರೋಧಿ ಎನ್ನಲು ಸರ್ವ ರೀತಿಯಲ್ಲೂ ಮುಂದಾಗುತ್ತಾರೆ. ಆದರೆ ರಾಹುಲ್ ಅವರು ನಿಜವಾದ ಹಿಂದೂವಿನಂತೆ ಮಾತನಾಡಿದರು ಎಂಬುದು ನನ್ನ ನಂಬಿಕೆ.

ಶಾಹಿದ್ ಸಿದ್ದಿಕಿ, ಪತ್ರಕರ್ತ

25 ವರ್ಷಗಳ ಹಿಂದೆ

ಶುಕ್ರವಾರ, 2-7-1999

- **ಪಾಕಿಸ್ತಾನಕ್ಕೆ ಬ್ರಿಟನ್ ತರಾಟೆ**

ನವದೆಹಲಿ, ಜುಲೈ 1– ಕಾರ್ಗಿಲ್ ವಲಯಕ್ಕೆ ನುಸುಳಿ ಅದನ್ನು ಆಕ್ರಮಿಸಿಕೊಳ್ಳುವ ಪ್ರಯತ್ನವು 'ಗಂಭೀರ ಸಮಸ್ಯೆ'ಯನ್ನು ಉಂಟು ಮಾಡಲಿದೆ ಎಂಬುದಾಗಿ ಬ್ರಿಟನ್ ಪ್ರಧಾನಿ ಟೋನಿ ಬ್ಲೇರ್ ಪಾಕಿಸ್ತಾನಿ ಪ್ರಧಾನಿಗೆ ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಕಾರ್ಗಿಲ್ ವಲಯದಲ್ಲಿ ಉಂಟಾಗಿರುವ ಪಾಕಿಸ್ತಾನಿ ಸೈನಿಕರ ಅತಿಕ್ರಮಣಕಾರಿ ಘಟನೆಯ ಬಗೆಗೆ ಭಾರತವು ಅಂತರ ರಾಷ್ಟ್ರೀಯ ಬೆಂಬಲ ಗಳಿಸಲು ನಡೆಸಿರುವ ಯತ್ನದಲ್ಲಿ ಈಗ ಮತ್ತೊಂದು ಪ್ರಬಲ ರಾಷ್ಟ್ರವಾದ ಬ್ರಿಟನ್‌ನ ಬೆಂಬಲ ಗಳಿಸುವಲ್ಲಿ ಯಶಸ್ವಿಯಾದಂತಾಗಿದೆ.

- **ಬತ್ತಿದ ಬಾವಿಗಳ ವಿದ್ಯುತ್ ಬಿಲ್ ಬಾಕಿ ಮನ್ನಾ**

ಬೆಂಗಳೂರು, ಜುಲೈ 1– ನೈಸರ್ಗಿಕ ಕಾರಣಗಳಿಂದ ನೀರು ಬತ್ತಿಹೋಗಿರುವ ತೆರೆದ ಬಾವಿಗಳ ರೈತರು ಕೆಇಬಿಗೆ ಕೊಡಬೇಕಾಗಿರುವ ವಿದ್ಯುತ್ ದರದ ಬಾಕಿ ಅದರ ಮೇಲಿನ ಬಡ್ಡಿ ಹಾಗೂ ಸುಸ್ತಿಬಡ್ಡಿಯನ್ನು ಮನ್ನಾ ಮಾಡಲಾಗುವುದೆಂದು ಕೃಷಿ ಸಚಿವ ಸಿ. ಬೈರೇಗೌಡ ಅವರು ವಿಧಾನಸಭೆಯಲ್ಲಿ ಇಂದು ಪ್ರಕಟಿಸಿದರು.

ಬಾವಿಗಳಲ್ಲಿ ನೀರಿಲ್ಲದೆ ಇದ್ದರೂ ವಿದ್ಯುತ್ ಸಂಪರ್ಕ ಬೇಡವೆಂದು ಕೆಇಬಿಗೆ ತಿಳಿಸದೆ ಅನೇಕ ರೈತರು ಉಪಯೋಗಿಸದಿರುವ ವಿದ್ಯುತ್‌ಗೆ ಬಾಕಿ ಕೊಡಬೇಕಾಗಿದೆ. ರೈತರು ಈ ಸಂಬಂಧ ವಿದ್ಯುತ್ ಸಂಪರ್ಕ ಬೇಡವೆಂದು ಕೆಇಬಿಗೆ ತಿಳಿಸಿ ವಿದ್ಯುತ್ ಸಂಪರ್ಕವನ್ನು ಹಿಂತಿರುಗಿಸಿದ ರೈತರಿಗೆ ಬಾಕಿ ಮನ್ನಾದ ಅನುಕೂಲ ದೊರೆಯುತ್ತದೆ ಎಂದು ಶೂನ್ಯವೇಳೆಯಲ್ಲಿ ಸಚಿವರು ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 2-7-1974

- **ಸರ್ಕಾರದ ಜೊತೆ ಪೂರ್ಣ ಅಸಹಕಾರ: ಸೋಷಲಿಸ್ಟರ ಚಳವಳಿಗೆ ಸಿಪಿಐ ವಿರೋಧ**

ನವದೆಹಲಿ, ಜುಲೈ 1– ಸೋಷಲಿಸ್ಟ್ ಪಕ್ಷವು ಸೂಚಿಸಿರುವ 'ಸರ್ಕಾರದ ಜೊತೆ ಸಂಪೂರ್ಣ ಅಸಹಕಾರ' ಚಳವಳಿಯನ್ನು ಭಾರತದ ಕಮ್ಯುನಿಸ್ಟ್ ಪಕ್ಷವು ವಿರೋಧಿಸುವುದೆಂದು ಸಿ.ಪಿ.ಐ.ನ ಪ್ರಧಾನ ಕಾರ್ಯದರ್ಶಿ ರಾಜೇಶ್ವರರಾವ್ ಅವರು ಇಂದು ಇಲ್ಲಿ ತಿಳಿಸಿದರು.

ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸುರೇಂದ್ರಮೋಹನ್ ಅವರ ಹೇಳಿಕೆಗೆ ಪ್ರತಿ ಹೇಳಿಕೆಯೊಂದನ್ನು ನೀಡಿ ರಾಜೇಶ್ವರ ರಾಯರು ಸಿ.ಪಿ.ಐ. ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

ಪ್ರಗತಿಪರ ಕಾಂಗ್ರೆಸ್ಸಿಗರ ಜೊತೆ ಮೈತ್ರಿಯುತ ಬಾಂಧವ್ಯ ಅಂತೆಯೇ ಸರ್ಕಾರದ ಜನತಾ ವಿರೋಧಿ ನೀತಿಗಳ ವಿರುದ್ಧ ಹೋರಾಟ ಕುರಿತ ಸಿ.ಪಿ.ಐ. ಧೋರಣೆಯನ್ನು ಅವರು ಸಮರ್ಥಿಸಿಕೊಂಡಿದ್ದಾರೆ.

- **ರಾಷ್ಟ್ರದಲ್ಲಿ ನೈತಿಕ ಪುನರುತ್ಥಾನವೇ ತಮ್ಮ ಚಳವಳಿ ಗುರಿ ಎಂದು ಜೆ.ಪಿ.**

ರಾಂಚಿ, ಜುಲೈ 1– ಗುಜರಾತಿನಲ್ಲಿ ಮಾಡಿದಂಥ ತಪ್ಪನ್ನೇ ಮತ್ತೆ ಮಾಡಬೇಡಿ ಎಂದು ಬಿಹಾರ ರಾಜ್ಯದ ವಿದ್ಯಾರ್ಥಿಗಳು ಮತ್ತು ಯುವಕರಿಗೆ ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು ಕರೆ ನೀಡಿದ್ದಾರೆ.

ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಸಂಘರ್ಷ ಸಮಿತಿಗಳನ್ನು ವ್ಯವಸ್ಥೆಗೊಳಿಸಲು ಗ್ರಾಮಗಳಿಗೆ ಹೋಗುವಂತೆಯೂ ಅವರು ಹೇಳಿದ್ದಾರೆ.

ನಿನ್ನೆ ಇಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದ ಅವರು 'ನಿಜವಾದ ಉತ್ತಮ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪಿಸಲು ಮುಂದಿನ ಚುನಾವಣೆಗೆ ಸರಿಯಾದ ಜನರನ್ನು ಆಯ್ಕೆ ಮಾಡಲು ಅನುವಾಗುವಂತೆ ಸೂಕ್ತ ಅಡಿಪಾಯ ಹಾಕಿ' ಎಂದರು.

ವಿರೋಧ ಪಕ್ಷಗಳ ಆರೋಪ ಎದುರಿಸುವುದು ಈಗ ಸವಾಲಿನ ಕೆಲಸದಂತೆ ಕಾಣುತ್ತಿದೆ

ಮಾಡಿದ್ದನ್ನೂ ಹೇಳಲಾಗದೆ ಮಂಕಾದ ಬಿಜೆಪಿ

ಸೂರ್ಯ-ನಮಸ್ಕಾರ

ಎ. ಸೂರ್ಯ ಪ್ರಕಾಶ್

ಈಚೆಗೆ ನಡೆದ ಲೋಕಸಭಾ ಚುನಾವಣೆಯ ನಂತರ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು (ಎನ್‌ಡಿಎ) ಕೇಂದ್ರದಲ್ಲಿ ಸರ್ಕಾರ ರಚಿಸಿದೆಯಾದರೂ 2019ರ ಲೋಕಸಭಾ ಚುನಾವಣೆಯಲ್ಲಿ 303 ಸ್ಥಾನಗಳನ್ನು ಗೆದ್ದುಕೊಂಡಿದ್ದ ಬಿಜೆಪಿಯು ಈ ಬಾರಿಯ ಚುನಾವಣೆಯಲ್ಲಿ 63 ಸ್ಥಾನಗಳನ್ನು ಕಳೆದುಕೊಂಡಿರುವುದು ವಾಸ್ತವ.

ಸ್ಥಾನಗಳ ಸಂಖ್ಯೆಯಲ್ಲಿ ಆಗಿರುವ ಈ ಕುಸಿತಕ್ಕೆ ಚುನಾವಣಾ ವಿಶ್ಲೇಷಕರು ಹಲವು ಕಾರಣಗಳತ್ತ ಬೊಟ್ಟು ಮಾಡಿದ್ದಾರಾದರೂ 'ಇಂಡಿಯಾ' ಮೈತ್ರಿಕೂಟದ ನಾಯಕರು ನಡೆಸಿದ ಪ್ರಚಾರವನ್ನು ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಬಿಜೆಪಿ ಸೋಲು ಕಂಡಿದ್ದು ಹೆಚ್ಚಿನ ನಷ್ಟ ಉಂಟುಮಾಡಿತು ಎಂಬುದು ಸತ್ಯ. ಬಿಜೆಪಿಯು ಮತ್ತೆ ಅಧಿಕಾರಕ್ಕೆ ಮರಳಿದಲ್ಲಿ, ಅದು ಸಂವಿಧಾನವನ್ನು ಹಾಳುಮಾಡುತ್ತದೆ ಹಾಗೂ ದಲಿತರು ಮತ್ತು ಇತರೆ ಹಿಂದುಳಿದ ಸಮುದಾಯಗಳಿಗೆ (ಒಬಿಸಿ) ನೀಡಿರುವ ಮೀಸಲಾತಿಯನ್ನು ಕಿತ್ತುಕೊಳ್ಳುತ್ತದೆ ಎಂದು 'ಇಂಡಿಯಾ' ಮೈತ್ರಿಕೂಟದ ನಾಯಕರು ಪ್ರಚಾರ ಮಾಡಿದ್ದರು. ಬಿಜೆಪಿಯನ್ನು ಮತ್ತೆ ಗೆಲ್ಲಿಸಿದರೆ ಎದುರಾಗುವ 'ಅಪಾಯ'ಗಳ ಬಗ್ಗೆ 'ಇಂಡಿಯಾ' ಮೈತ್ರಿಕೂಟದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಅಖಿಲೇಶ್ ಯಾದವ್, ರಾಹುಲ್ ಗಾಂಧಿ ಅವರು ಚುನಾವಣಾ ಪ್ರಚಾರದ ಅವಧಿಯುದ್ದಕ್ಕೂ ಮತದಾರರನ್ನು ಎಚ್ಚರಿಸುತ್ತಿದ್ದರು. ಸಾಂವಿಧಾನಿಕ ಮೌಲ್ಯಗಳಿಗೆ, ದಲಿತರು ಹಾಗೂ ಒಬಿಸಿ ಸಮುದಾಯಗಳ ಬಗ್ಗೆ ತಾನು ಹೊಂದಿರುವ ಬದ್ಧತೆ ಎಂಥದ್ದು ಎಂಬುದನ್ನು ಮತದಾರರ ಮುಂದೆ ಹೇಳಲು ಬೇಕಾದಷ್ಟು ಆಧಾರಗಳು ಕೈಯಲ್ಲಿ ಇದ್ದರೂ ಚುನಾವಣೆಯಲ್ಲಿ ತನ್ನ ವಿರುದ್ಧ ನಡೆಯುತ್ತಿದ್ದ ಪ್ರಚಾರವನ್ನು ಪರಿಣಾಮಕಾರಿಯಾಗಿ ಹಾಗೂ ಪೂರ್ಣ ಬಲದೊಂದಿಗೆ ಕೊನೆಗಾಣಿಸಲು ಬಿಜೆಪಿಗೆ ಆಗಲಿಲ್ಲ.

ಅಲ್ಲದೆ, ಮೀಸಲಾತಿಯನ್ನು ಕೊನೆಗೊಳಿಸುವ ಯಾವುದೇ ಉಲ್ಲೇಖ ಬಿಜೆಪಿ ಪ್ರಣಾಳಿಕೆಯಲ್ಲಿ ಇರಲಿಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಬಿಜೆಪಿಯ ಯಾವುದೇ ರಾಷ್ಟ್ರೀಯ ನಾಯಕ ಈ ಬಗೆಯ ಆಲೋಚನೆ ಇರುವುದಾಗಿ ಹೇಳಿರಲಿಲ್ಲ. ಆಶ್ಚರ್ಯದ ಸಂಗತಿಯೆಂದರೆ, ದಲಿತರು ಹಾಗೂ ಒಬಿಸಿ ಸಮುದಾಯಗಳಿಗೆ ಮೀಸಲಾತಿ ನೀಡುವ ವಿಚಾರವಾಗಿ ತಾನು ಹಿಂದೆಲ್ಲ ಮಾಡಿದ್ದು ಏನನ್ನು ಎಂಬುದನ್ನು ಮತದಾರರ ಮುಂದೆ ಹೇಳುವಲ್ಲಿಯೂ ಬಿಜೆಪಿ ಸೋಲು ಕಂಡಿತು. ಉದಾಹರಣೆಗೆ, ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಿಯಾಗಿದ್ದಾಗ, 2000ನೇ ಇಸವಿಯ ಜನವರಿಯಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ, ಸಂಸತ್ತು ಹಾಗೂ ರಾಜ್ಯಗಳ ಶಾಸನಸಭೆಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಕಲ್ಪಿಸುವ ಸಂಪ್ರದಾಯವನ್ನು 10 ವರ್ಷಗಳ ಅವಧಿಗೆ ಮುಂದುವರಿಸಿತು. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೂಡ ಇದೇ ಬಗೆಯ ತಿದ್ದುಪಡಿಗೆ 2020ರ ಜನವರಿಯಲ್ಲಿ ಸಂಸತ್ತಿನ ಒಪ್ಪಿಗೆ ಪಡೆದುಕೊಂಡಿತು. ಆ ಮೂಲಕ ಅವರಿಗೆ ನೀಡುವ ಮೀಸಲಾತಿಯನ್ನು 2030ರವರೆಗೆ ವಿಸ್ತರಿಸಿತು. 1950ರಲ್ಲಿ ಜಾರಿಗೆ ಬಂದ ಸಂವಿಧಾನವು ಈ ಮೀಸಲಾತಿಯು ಹತ್ತು ವರ್ಷಗಳ ಅವಧಿಗೆ ಜಾರಿಯಲ್ಲಿ ಇರಬೇಕು ಎಂದು ಹೇಳಿತ್ತು. ಅದಾದ ನಂತರ, 1960ರಿಂದ ಸಂಸತ್ತಿನ ಉಭಯ ಸದನಗಳು ಈ ಮೀಸಲಾತಿಯನ್ನು ಹತ್ತು ವರ್ಷಗಳಿಗೆ ವಿಸ್ತರಿಸುವ ಕೆಲಸವನ್ನು ಕಾಲಕಾಲಕ್ಕೆ ಮಾಡಿಕೊಂಡು ಬಂದಿವೆ. ಅದೇ ಕೆಲಸವನ್ನು ವಾಜಪೇಯಿ ನೇತೃತ್ವದ ಸರ್ಕಾರ ಹಾಗೂ ಮೋದಿ ನೇತೃತ್ವದ ಸರ್ಕಾರ ಮಾಡಿವೆ. ಇದು ಮಾಮೂಲಿ ಕೆಲಸ ಎಂದು ಕಾಣಬಹುದಾದರೂ ಇದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಯ ವಿಚಾರದಲ್ಲಿ ಹಾಗೂ ಹಿಂದಿನ ಸರ್ಕಾರಗಳು ರೂಪಿಸಿದ ನಿಯಮಗಳ ವಿಚಾರದಲ್ಲಿ ಬಿಜೆಪಿ ಹೊಂದಿರುವ ಬದ್ಧತೆಯನ್ನು ಸಾಬೀತು ಮಾಡುವಂಥದ್ದು. ಈ ಪಕ್ಷಕ್ಕೆ ಬೇರೆಯದೇ ಆಲೋಚನೆಗಳು ಇದ್ದವು ಎಂದಾದಲ್ಲಿ ಈ ನಿಯಮಕ್ಕೆ ಬದ್ಧವಾಗಿ ಅದು ಏಕೆ ನಡೆದುಕೊಳ್ಳುತ್ತಿತ್ತು?

ವಾಜಪೇಯಿ ನೇತೃತ್ವದ ಸರ್ಕಾರವು ರೂಪಿಸಿದ ಇನ್ನೂ ಮೂರು ತಿದ್ದುಪಡಿಗಳು ಹೆಚ್ಚು ಗಮನಾರ್ಹ. 2000ನೇ ಇಸವಿಯ ಜೂನ್‌ನಲ್ಲಿ ಅಂಗೀಕಾರ ಪಡೆದ, ಸಂವಿಧಾನಕ್ಕೆ ತಂದ 81ನೇ ತಿದ್ದುಪಡಿಯು ಸಂವಿಧಾನದ 16ನೇ ವಿಧಿಗೆ ತಿದ್ದುಪಡಿ ತಂದಿತು. ಇದು ಬ್ಯಾಕ್‌ಲಾಗ್ ನೇಮಕಾತಿಗಳಲ್ಲಿ ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ಮೀಸಲಾತಿಯ ಸೌಲಭ್ಯವನ್ನು ರಕ್ಷಿಸುವ ಕೆಲಸ ಮಾಡಿತು. 2002ರ ಸೆಪ್ಟೆಂಬರ್‌ನಲ್ಲಿ ಅಂಗೀಕಾರ ಪಡೆದುಕೊಂಡ 82ನೇ ತಿದ್ದುಪಡಿಯು ಸಂವಿಧಾನದ 335ನೇ ವಿಧಿಗೆ ಬದಲಾವಣೆ ತಂದು, ಎಸ್‌ಸಿ ಹಾಗೂ ಎಸ್‌ಟಿ ಅಭ್ಯರ್ಥಿಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀಡುವಾಗ, ಅವರ ಅರ್ಹತಾ ಅಂಕಗಳು ಹಾಗೂ ಇತರ ಮಾನದಂಡಗಳ ಸಡಿಲಿಕೆಗೆ ಅವಕಾಶ ಕಲ್ಪಿಸಿತು. ಸಂವಿಧಾನದ 16ನೇ ವಿಧಿಗೆ ಮತ್ತೊಮ್ಮೆ ತಿದ್ದುಪಡಿ ತರಲು ವಾಜಪೇಯಿ ನೇತೃತ್ವದ ಸರ್ಕಾರವು 2002ರ ಜನವರಿಯಲ್ಲಿ 85ನೇ ತಿದ್ದುಪಡಿಯನ್ನು ಮಂಡಿಸಿತು. ಇದು ಎಸ್‌ಸಿ ಮತ್ತು ಎಸ್‌ಟಿ ಅಭ್ಯರ್ಥಿಗಳಿಗೆ ಬಡ್ತಿ ನೀಡಿದಾಗ ಆಗುವ ತತ್ಪರಿಣಾಮದ ಹಿರಿತನವನ್ನು ರಕ್ಷಿಸುವ ಉದ್ದೇಶದ ತಾಂತ್ರಿಕ ತಿದ್ದುಪಡಿ ಆಗಿತ್ತು. ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳಿಗಾಗಿನ ರಾಷ್ಟ್ರೀಯ ಆಯೋಗವನ್ನು ಎರಡಾಗಿ ವಿಭಜಿಸಿ, ಪರಿಶಿಷ್ಟ ಪಂಗಡಗಳಿಗೆ ಪ್ರತ್ಯೇಕ ಆಯೋಗವನ್ನು ರಚಿಸಲು ವಾಜಪೇಯಿ ನೇತೃತ್ವದ ಸರ್ಕಾರವು ಸಂವಿಧಾನಕ್ಕೆ ಇನ್ನೊಂದು ತಿದ್ದುಪಡಿ (89ನೇ ತಿದ್ದುಪಡಿ) ತಂದಿತು. ಇದು ಕೂಡ ಬಹಳ ಮಹತ್ವದ ತಿದ್ದುಪಡಿ.

ಈ ವಿಚಾರದಲ್ಲಿ ಮೋದಿ ನೇತೃತ್ವದ ಸರ್ಕಾರವು ವಾಜಪೇಯಿ ನೇತೃತ್ವದ ಸರ್ಕಾರದ ಹಾದಿಯಲ್ಲಿಯೇ ಸಾಗಿದೆ.

ಒಬಿಸಿ ಸಮುದಾಯಗಳು ಯಾವುವು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ರಾಜ್ಯಗಳಿಗೆ ಮರಳಿ ನೀಡಲು 338(ಬಿ) ವಿಧಿ, 342 (ಎ) ಮತ್ತು 366ನೇ ವಿಧಿಗಳಿಗೆ ತಿದ್ದುಪಡಿ ತರಲು ಮಹತ್ವದ ತಿದ್ದುಪಡಿಯೊಂದಕ್ಕೆ (105ನೇ ತಿದ್ದುಪಡಿ) ಮೋದಿ ನೇತೃತ್ವದ ಸರ್ಕಾರವು 2021ರಲ್ಲಿ ಅಂಗೀಕಾರ ಪಡೆದುಕೊಂಡಿತು. 2021ರ ಮೇ ತಿಂಗಳಲ್ಲಿ ತೀರ್ಪೊಂದನ್ನು ನೀಡಿದ್ದ ಸುಪ್ರೀಂ ಕೋರ್ಟ್, ಯಾವ ಜಾತಿಗಳನ್ನು ಒಬಿಸಿ ಪಟ್ಟಿಗೆ ಸೇರಿಸಬಹುದು ಎಂಬುದನ್ನು ತೀರ್ಮಾನಿಸುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಮಾತ್ರ ಇದೆ ಎಂದು ಹೇಳಿತ್ತು. ಆದರೆ ಸರ್ಕಾರ ತಂದ ಈ ತಿದ್ದುಪಡಿಯು ಒಬಿಸಿ ಪಟ್ಟಿಗೆ ಯಾವ ಜಾತಿಗಳನ್ನು ಸೇರಿಸಬಹುದು ಎಂಬ ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಿತು. ಇದು ರಾಜ್ಯ ಸರ್ಕಾರಗಳಿಗೆ ಬಲ ನೀಡಿದ ಮಹತ್ವದ ತಿದ್ದುಪಡಿ ಮಾತ್ರವೇ ಅಲ್ಲದೆ, ಒಕ್ಕೂಟ ವ್ಯವಸ್ಥೆಯ ತತ್ವವನ್ನು ಎತ್ತಿಹಿಡಿದ ತಿದ್ದುಪಡಿ ಕೂಡ ಆಗಿದೆ.

ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳಿಗೆ ನೀಡಿರುವ ಮೀಸಲಾತಿಯನ್ನು ಕೊನೆಗೊಳಿಸಲು ರಾಜಕೀಯ ಪಕ್ಷವೊಂದು ಈ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತದೆಯೇ? ಒಬಿಸಿ ಪಟ್ಟಿಯಲ್ಲಿ ಇರಬೇಕಾದ ಜಾತಿಗಳು ಯಾವುವು ಎಂಬುದನ್ನು ತೀರ್ಮಾನಿಸುವ ಅಧಿಕಾರವನ್ನು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ನೀಡಿತ್ತಾದರೂ ಮಹತ್ವದ ಈ ಅಧಿಕಾರವನ್ನು ರಾಜ್ಯಗಳಿಗೆ ವರ್ಗಾಯಿಸುವ ತೀರ್ಮಾನವನ್ನು ಮೋದಿ ನೇತೃತ್ವದ ಸರ್ಕಾರವು ಕೈಗೊಂಡಿತು. ರಾಜ್ಯಗಳನ್ನು ದುರ್ಬಲಗೊಳಿಸುವ ಉದ್ದೇಶವು ಮೋದಿ ನೇತೃತ್ವದ ಸರ್ಕಾರಕ್ಕೆ ಇದೆ ಎಂದು ವಿರೋಧ ಪಕ್ಷಗಳು ಮಂಡಿಸಿದ್ದ ವಾದಕ್ಕೆ ಇದು ವಿರುದ್ಧವಾಗಿದೆ. ಆದರೆ, ವಿರೋಧಿಗಳನ್ನು ಎದುರಿಸಲು, ಜನರ ಮನವೊಲಿಸುವ ರೀತಿಯಲ್ಲಿ ಈ ಮಾತುಗಳನ್ನು ಬಿಜೆಪಿಯ ಕಡೆಯಿಂದ ಯಾರೊಬ್ಬರೂ ಹೇಳಿದ್ದು ಕೇಳಿಬರಲಿಲ್ಲ.

ಆದರೆ, ಅಖಿಲೇಶ್ ಯಾದವ್, ರಾಹುಲ್ ಗಾಂಧಿ ಮತ್ತು ಇತರರು ತಮ್ಮ ವಾದವನ್ನು ಚುನಾವಣಾ ಪ್ರಚಾರದ ಉದ್ದಕ್ಕೂ ಜನರ ಮುಂದಿರಿಸುತ್ತ ಬಂದರು, ಚುನಾವಣೆಯಲ್ಲಿ ಅದರ ಲಾಭ ಪಡೆದುಕೊಂಡರು. ಅಖಿಲೇಶ್ ಅವರು ಟಿಕೆಟ್ ಹಂಚಿಕೆಯಲ್ಲಿ ಜಾಣತನದಿಂದ ಕೆಲವೊಂದಿಷ್ಟು ಸಾಮಾಜಿಕ ಸಮೀಕರಣದ ಕೆಲಸಗಳನ್ನೂ ಮಾಡಿದರು. ಬಹುಹಳೆಯ ಕಾಲದ ಮುಸ್ಲಿಂ–ಯಾದವ ಮೈತ್ರಿಯನ್ನು ಮತ್ತೆ ಸಾಧ್ಯವಾಗಿಸಿದರು, ಟಿಕೆಟ್ ಹಂಚಿಕೆಯಲ್ಲಿ ನಿರ್ದಿಷ್ಟ ಕಾರ್ಯತಂತ್ರವನ್ನು ಅನುಸರಿಸುವ ಮೂಲಕ ಒಂದಿಷ್ಟು ದಲಿತ ಮತಗಳೂ ತಮಗೆ ಸಿಗುವಂತೆ ಮಾಡಿಕೊಂಡರು. ಉತ್ತರಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಹರಿಯಾಣದಲ್ಲಿ ಇಂತಹ ಅಭಿಯಾನವನ್ನು ಎದುರಿಸುವಲ್ಲಿ ಬಿಜೆಪಿಯು ಸೋತಿದ್ದು ಅಲ್ಲಿ ಪಕ್ಷವು ಲೋಕಸಭಾ ಸ್ಥಾನಗಳನ್ನು ಕಳೆದುಕೊಂಡಿದ್ದಕ್ಕೆ ಕಾರಣ ಎನ್ನಬಹುದು.

ಹರಿಯಾಣ, ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಯುವುದಕ್ಕೂ ಮೊದಲು ಬಿಜೆಪಿಯು ಇಂತಹ ಆರೋಪಗಳನ್ನು ನಿಭಾಯಿಸುವ ಕೆಲಸವನ್ನು ಮಾಡಬೇಕು. ಆದರೆ ಈಗಿನ ಸಂದರ್ಭದಲ್ಲಿ ಅದು ಭಾರಿ ಸವಾಲಿನ ಕೆಲಸದಂತೆ ಕಾಣುತ್ತಿದೆ.

ಚುರುಮುರಿ

ಪರಮಾತ್ಮ ಆಡಿಸಿದಂತೆ...

• ಗುರು ಪಿ.ಎಸ್.

'ಸೋರುತಿಹುದು ಮನೆಯ ಮಾಳಿಗೆ...' ಷರೀಫಜ್ಜನ ಹಾಡನ್ನು ಹಾಡುತ್ತಾ ಒಳ ಬಂದೆ.

'ಬಂದ್ರಾ, ಬನ್ನಿ, ಬನ್ನಿ' ಎಂದ ಹೆಂಡತಿ, 'ನಮ್ಮ ಮನೆಯ ಮಾಳಿಗೆಯೂ ಸೋರುತಿದೆ, ನೋಡಿದಿರಾ?' ಕೇಳಿದಳು.

'ದೇಶದಲ್ಲಿ ನೀಟ್-ನೆಟ್ ಪೇಪರ್‌ಗಳೇ ಸೋರುತ್ತಿವೆ. ನಮ್ಮ ಮನೆ ಯಾವ ಲೆಕ್ಕ ಬಿಡಮ್ಮ?' ಹೇಳಿದೆ ಉಡಾಫೆಯಿಂದ.

'ನಮ್ಮ ದೇವರ ಮನೆಯೂ ಸೋರುತ್ತಿದೆ'

'ಅಂಥ ಅಯೋಧ್ಯೆ ಶ್ರೀರಾಮದೇವರ ದೇಗುಲವೇ ಸೋರುತ್ತಿದೆಯಂತೆ, ಇನ್ನು ನಮ್ಮ ದೇವರ ಮನೆ ಸೋರದಿರುತ್ತದೆಯೇ'

'ಏನಾಗಿದೆ ರೀ ನಿಮಗೆ' ಎಂದು ರೇಗಿದ ಪತ್ನಿ, 'ನಮ್ಮನೆ ಆವರಣದಲ್ಲಿರೋ ಗೋಡೆ ಕುಸಿದಿದೆ, ಅದಾದರೂ ಗೊತ್ತಿದೆಯಾ?'

'ದೊಡ್ಡ ದೊಡ್ಡ ಸೇತುವೆಗಳೇ ಕುಸಿಯುತ್ತಿವೆ...' ಎನ್ನುತ್ತಿದ್ದಂತೆ ಬಾಯಿ ಮುಚ್ಚಿದ ಹೆಂಡತಿ, 'ನಮ್ಮ ಊರಿನಲ್ಲಿ ಬಸ್‌ಸ್ಟ್ಯಾಂಡ್ ಬಿಲ್ಡಿಂಗ್ ಕೂಡ ಸೋರುತ್ತಿದೆಯಂತೆ ' ಎಂದಳು.

'ಏರ್‌ಪೋರ್ಟ್‌ಗಳೇ ಸೋರುತ್ತಿವೆ. ನಿಮ್ಮೂರಿನ ಬಸ್‌ಸ್ಟ್ಯಾಂಡ್ ಏನ್ ಮಹಾ' ಎಂದೆ.

'ಒಂದಾದರೂ ಒಳ್ಳೆಯ ಸುದ್ದಿ ಹೇಳ್ರಿ'

'ಆ ಪರಮಾತ್ಮ ಏನು ಹೇಳಿಸುತ್ತಿದ್ದಾನೋ ಅದನ್ನೇ ನಾನು ಹೇಳುತ್ತಿದ್ದೇನೆ' ಎಂದೆ.

'ಯಪ್ಪಾ, ನಿಮ್ಮ ವೇದಾಂತ ಕೇಳುವುದಕ್ಕಾಗ್ತಿಲ್ಲ ನನಗೆ. ಅದಿರಲಿ. ನಮ್ಮ ಇಂಡಿಯಾ ಟಿ20 ವಿಶ್ವಕಪ್ ಗೆದ್ದಿದೆ. ಅದಕ್ಕಾದರೂ ಖುಷಿ ಪಡಿ'.

'ಖುಷಿಯ ವಿಚಾರವೇ, ಆದರೆ ಇನ್ನು ಮುಂದೆ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ರವೀಂದ್ರ ಜಡೇಜ ಟಿ20 ಮ್ಯಾಚ್‌ಗಳಲ್ಲಿ ಇಂಡಿಯನ್ ಜೆರ್ಸಿಯಲ್ಲಿ ಕಾಣಲ್ವಲ್ಲ' ಎಂದೆ.

'ಇದರಲ್ಲಿಯೂ ಬೇಸರವನ್ನೇ ನೋಡಬೇಡಿ. ಯುವಕರಿಗೂ ಅವಕಾಶ ಸಿಗಲಿ ಅನ್ನೋದು ಅವರ ಆಸೆ'.

'ಎಲ್ಲರೂ ಹೀಗೇ ಯೋಚನೆ ಮಾಡಬೇಕು ಎಂದು ಪರಮಾತ್ಮ ನನ್ನಲ್ಲಿ ಹೇಳಿಸುತ್ತಿದ್ದಾನೆ'.

'ಅದೇನಾದರೂ ನಿಜವಾದರೆ, ಶೇ 90ರಷ್ಟು ರಾಜಕಾರಣಿಗಳು ರಿಟೈರ್ಡ್ ಆಗಬೇಕಾಗುತ್ತೆ' ನಕ್ಕಳು ಹೆಂಡತಿ.

ಸಂಗತ

ಪ್ರಾಣಿಗಳಿಗೂ ಬದುಕುವ ಹಕ್ಕಿದೆ

ಅಪಘಾತಕ್ಕೆ ಒಳಗಾಗಿ ಬದುಕಿ ಉಳಿದ ಪ್ರಾಣಿಗಳ ಗೋಳು ಹೇಳತೀರದು. ಏಳಲಾಗದೆ, ನಡೆಯಲಾಗದೆ ಗಾಯವನ್ನು ಹೊತ್ತುಕೊಂಡೇ ಮಲಗುತ್ತವೆ

• ಸದಾಶಿವ್ ಸೊರಟೂರು

ನಮ್ಮ ಮನೆಯ ಮುಂದಿನ ತಿರುವಿನಲ್ಲಿ ಎಂತಹ ವೇಗದಲ್ಲಿ ಚಲಿಸುವ ವಾಹನಗಳೂ ವೇಗ ತಗ್ಗಿಸುತ್ತವೆ. ಅಲ್ಲಿ ರಸ್ತೆ ಉಬ್ಬು ಇಲ್ಲ, ಸಿಗ್ನಲ್ ಕೂಡ ಇಲ್ಲ. ಆದರೆ ಅಲ್ಲೊಂದು ನಾಯಿ ಸದಾ ಎಚ್ಚರವಿರುತ್ತದೆ. ವೇಗವಾಗಿ ಬರುವ ವಾಹನಗಳನ್ನು ಅಟ್ಟಿಸಿಕೊಂಡು ಹೋಗುತ್ತದೆ. ಬೊಗಳುತ್ತದೆ. ದೊಡ್ಡ ರಾದ್ಧಾಂತ ಮಾಡುತ್ತದೆ. ನಿಧಾನಕ್ಕೆ ಒಂದು ಎಚ್ಚರದಲ್ಲಿ ಹೋಗುವ ವಾಹನಗಳ ತಂಟೆಗೆ ಅದು ಹೋಗುವುದಿಲ್ಲ. ಆ ನಾಯಿ ಈ ರಸ್ತೆಯಲ್ಲಿ ಒಂದಿಷ್ಟು ಭಯ ಹುಟ್ಟಿಸಿದೆ.

ಇದರ ಹಿಂದಿನ ಕಾರಣ ತಿಳಿದಾಗ ನಿಜಕ್ಕೂ ಅಚ್ಚರಿಯಾಯಿತು. ಈ ನಾಯಿಯ ಜೊತೆ ಇನ್ನೊಂದು ನಾಯಿ ಇತ್ತಂತೆ. ಮರಿ ಆಗಿದ್ದಾಗಿನಿಂದಲೂ ಆ ಎರಡೂ ನಾಯಿಗಳು ಸದಾ ಒಟ್ಟಿಗೆ ಇರುತ್ತಿದ್ದವಂತೆ. ಇವೆರಡೂ ಬೀದಿ ನಾಯಿಗಳು. ಒಂದು ತಿಂಗಳ ಹಿಂದೆ ವೇಗವಾಗಿ ಬಂದ ಕಾರೊಂದು ರಸ್ತೆಯ ಪಕ್ಕ ಮಲಗಿದ್ದ ನಾಯಿಯನ್ನು ಗುದ್ದಿ ಹೋಗಿದೆ. ಅದು ಅಲ್ಲೇ ಪ್ರಾಣಬಿಟ್ಟಿದೆ. ಅದರ ಮೇಲೆ ಮತ್ತೆರಡು ವಾಹನಗಳು ಹಾದು ಹೋಗಿವೆ. ಈ ನಾಯಿ ಬೊಗಳಿ ಬೊಗಳಿ ಸಂಕಟಗೊಂಡಿದೆ. ಅಂದಿನಿಂದ ಅದು ಯಾವುದೇ ವೇಗದ ವಾಹನವನ್ನು ತರಾಟೆಗೆ ತೆಗೆದುಕೊಳ್ಳುತ್ತದೆ.

ಮನುಷ್ಯನಜೀವಮಾತ್ರವೇಮುಖ್ಯವಾದದ್ದು;ಪ್ರಾಣಿಗಳದ್ದಲ್ಲ ಎಂಬ ಮನೋಭಾವ ಹಲವರಲ್ಲಿದೆ. ನಮ್ಮ ಸಂಕಟ ಮಾತ್ರವೇ ನಿಜವಾದ ಸಂಕಟ; ಪ್ರಾಣಿಗಳದ್ದು ಸಂಕಟವೇ ಅಲ್ಲ ಅನ್ನುವಷ್ಟರ ಮಟ್ಟಿಗೆ ಮನುಷ್ಯ ಜಗತ್ತು ನಿರ್ಭಾವುಕವಾಗಿದೆ. ವೇಗದ ಚಾಲನೆಯೇ ಈ ಕಾಲದ ದೊಡ್ಡ ನಶೆ. ರಸ್ತೆ ಅಪಘಾತಗಳಲ್ಲಿ ಬಹುತೇಕವು 'ಅತೀ ವೇಗದ' ಕಾಣಿಕೆಗಳೇ ಆಗಿವೆ. ವೇಗವಾಗಿ ವಾಹನ ಚಾಲನೆ ಮಾಡಿ, ತಮ್ಮ ಪಾಡಿಗೆ ತಾವಿರುವ ಜೀವವನ್ನು ಕಬಳಿಸಿಸುವವರಿಗೆ ಎಂದೂ ಕ್ಷಮೆ ಇರಬಾರದು.

ಅತಿವೇಗದಿಂದ ವಾಹನ ಚಾಲನೆ ಮಾಡುವವರು ಪ್ರತಿವರ್ಷ ಅದೆಷ್ಟೋ ಪ್ರಾಣಿಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದಾರೆ. ವಾಹನಗಳ ಚಕ್ರಕ್ಕೆ ಸಿಕ್ಕಿಹಾಕಿಕೊಳ್ಳುವ ಕಾಡು ಬೆಕ್ಕಿನಿಂದ ಹಿಡಿದು, ರೈಲಿಗೆ ಸಿಲುಕಿ ಸಾಯುವ ಆನೆಗಳವರೆಗೂ ಅನೇಕ ಪ್ರಾಣಿಗಳು ಈ ಅಪಘಾತದ ಲೆಕ್ಕದಲ್ಲಿವೆ. ಕಾಡಿನ ರಸ್ತೆಯಲ್ಲಿ ಅಪಘಾತದಿಂದ ಸತ್ತು ಬೀಳುವ ಪ್ರಾಣಿಗಳ ಲೆಕ್ಕ ಇಟ್ಟುವರಾರು?

ವಾಹನದಲ್ಲಿ ಕೂತು ಜೋರಾಗಿ ಆಕ್ಸಿಲರೇಟರ್ ತುಳಿಯುವವರಿಗೆ ಈ ಜಗತ್ತು ಕ್ಷುಲ್ಲಕವಾಗಿ ಕಾಣುತ್ತದೆಯೇನೊ... ಅದರಲ್ಲೂ ಪ್ರಾಣಿಗಳು ಬದುಕಲು ಯೋಗ್ಯವಲ್ಲದ ವ್ಯರ್ಥ ಸರಕು ಎಂದು ಅವರು ಭಾವಿಸುತ್ತಾರೇನೋ. ಅವರೆಲ್ಲಾ ಅಷ್ಟೊಂದು ವೇಗವಾಗಿ ಸಾಗಿ ಅದೇನು ಸಾಧಿಸಿದ್ದಾರೋ ಏನೋ. ಗಂಟೆಗೆ 150 ಕಿ.ಮೀ. ವೇಗವಾಗಿ ವಾಹನ ಚಲಾಯಿಸಿ, ಮನೆಯಲ್ಲಿ ಕುಳಿತು ರೀಲ್ಸ್ ನೋಡುತ್ತಾರೆ. ಇಲ್ಲವೇ ಹೊರಗೆ ಕುಳಿತು ಗೆಳೆಯರೊಂದಿಗೆ ಹರಟೆ ಹೊಡೆಯುತ್ತಾರೆ. ವಾಹನಗಳಲ್ಲಿ ವೇಗವಾಗಿ ಸಾಗುವ ಜನರನ್ನು ಕಂಡು, ಬದುಕಿನ ಎಲ್ಲದರಲ್ಲೂ ಅದೇ ಬಗೆಯ ವೇಗ ಇದ್ದಿದ್ದರೆ ಈ ದೇಶ ಅದೆಷ್ಟು ಉದ್ಧಾರವಾಗಿರಬಹುದಾಗಿತ್ತು ಎಂದು ಅನ್ನಿಸುವುದಿದೆ. ಸದಾ 100 ಕಿ.ಮೀ. ವೇಗದಲ್ಲಿ ವಾಹನ ಚಲಾಯಿಸುವ ನೌಕರರು ಎರಡು ಪುಟದ ಕಡತ ಸಿದ್ಧಗೊಳಿಸಲು ಆರು ತಿಂಗಳು ಸಮಯ ತೆಗೆದುಕೊಳ್ಳುವುದೂ ಇದೆ! ನಮ್ಮದು ಏನಿದ್ದರೂ ಕೊಲ್ಲುವ ವೇಗಕ್ಕೆ ಆದ್ಯತೆ ನೀಡುವ ಸ್ವಭಾವ!

ವಾಹನ ಸವಾರನೊಬ್ಬ ಒಂದು ಪ್ರಾಣಿಗೆ ಗುದ್ದಿ, ಅದು ಮೃತಪಟ್ಟರೆ ಉಳಿದವರು ಅದರ ಮೇಲೆ ವಾಹನ ಹತ್ತಿಸಿಕೊಂಡು ಹೋಗುತ್ತಾರೆ. ಆ ಕಳೇಬರವನ್ನು ಕಣ್ಣಲ್ಲಿ ನೋಡಲಾಗದಷ್ಟು ವಿಕಾರಗೊಳಿಸುತ್ತಾರೆ. ಕೆಲವರು ರಸ್ತೆಯ ಪಕ್ಕದಲ್ಲಿ ತಮ್ಮ ಪಾಡಿಗೆ ತಾವು ಏನೂ ಆಗಿಯೇ ಇಲ್ಲವೇನೊ ಎಂಬಂತೆ ಹೋಗುತ್ತಿರುತ್ತಾರೆ. ಅದನ್ನು ಎತ್ತಿ ಒಂದು ಸರಿಯಾದ ಜಾಗಕ್ಕೆ ಹಾಕುವ ಮನಸ್ಸನ್ನೂ ಮಾಡುವುದಿಲ್ಲ. ಸಂಸ್ಕಾರವಂತೂ ದೂರದ ಮಾತು

ಬಿಡಿ. ಅಪಘಾತಕ್ಕೆ ಒಳಗಾಗಿ ಬದುಕಿ ಉಳಿದ ಪ್ರಾಣಿಗಳ ಗೋಳು ಮತ್ತೊಂದು ರೀತಿ. ಏಳಲಾಗದೆ, ನಡೆಯಲಾಗದೆ ಗಾಯವನ್ನು ಹೊತ್ತುಕೊಂಡೇ ಮಲಗುತ್ತವೆ. ಆಹಾರವಿಲ್ಲದೆ ಎಲ್ಲೋ ಒಂದು ಕಡೆ ಸದಾ ನರಳುತ್ತವೆ. ನರಳಿ ನರಳಿಯೇ ಸಾಯುತ್ತವೆ.

ಹೆಲ್ಮೆಟ್ ಇಲ್ಲ, ಪರವಾನಗಿ ಇಲ್ಲ ಅಂತ ದಂಡ ವಸೂಲಿಗೆ ಆಸಕ್ತಿ ತೋರಿಸುವ ಕೆಲವು ಪೋಲಿಸರು ಈ ಅತಿವೇಗವನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಂಡಂತೆ ಕಾಣಿಸುವುದಿಲ್ಲ. ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ವೇಗಕ್ಕೆ ಪೊಲೀಸ್ ಬ್ರೇಕ್ ಬೀಳಬಹುದಾದರೂ ತಾಲ್ಲೂಕು ಹಂತಗಳಲ್ಲಿ ವಾಹನಗಳ ವೇಗಕ್ಕೆ ಮಿತಿಯೇ ಇಲ್ಲ. ಎಷ್ಟೇ ವೇಗದಲ್ಲಿ ಹೋದರೂ ಕೇಳುವವರಿಲ್ಲ. ಪ್ರಾಣಿಗಳಿಗೂ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ ಹೇಳುತ್ತದೆ. ಒಡೆಯನೇ ಇಲ್ಲದ ಪ್ರಾಣಿಗಳ ಸಾವಿಗೆ ನ್ಯಾಯ ಕೇಳುವವರಾರು? ಮನುಷ್ಯರ ಅಬ್ಬರದ ಧಿಮಾಕಿನ ನಡುವೆ ಪ್ರಾಣಿಗಳಾದರೂ ಹೇಗೆ ಬದುಕಿಯಾವು ನೆಮ್ಮದಿಯಾಗಿ?

ಕೆಲವು ಸ್ವಯಂ ಸೇವಾ ಸಂಸ್ಥೆಗಳು ಇಂತಹ ಪ್ರಾಣಿಗಳನ್ನು ರಕ್ಷಿಸುವ ಕೆಲಸ ಮಾಡುತ್ತಿವೆ. ಅಷ್ಟರ ಮಟ್ಟಿಗೆ ಒಂದು ಸಮಾಧಾನ. ಅಪಘಾತದಲ್ಲಿ ಗಾಯಗೊಂಡ ಪ್ರಾಣಿಗಳನ್ನು ರಕ್ಷಿಸುವುದು ಹಾಗೂ ಅವುಗಳಿಗೆ ಚಿಕಿತ್ಸೆ ಕೊಡಿಸುವ ಕೆಲಸಗಳು ಅಲ್ಲಲ್ಲಿ ನಡೆಯುತ್ತಿವೆ. ನ್ಯಾಯಾಲಯದ ಮೂಲಕ ನ್ಯಾಯ ಕೊಡಿಸುವ ಕೆಲಸಗಳು ಕೂಡ ಆಗಿವೆ. ಇವೆಲ್ಲಾ ತುಂಬಾ ಒಳ್ಳೆಯ ಬೆಳವಣಿಗೆಗಳು. ನಾವು ನಮ್ಮ ಗೆಳೆಯರನ್ನೋ, ಬಂಧುಗಳನ್ನೋ, ಪರಿಚಿತರನ್ನೋ ಅಪಘಾತದಲ್ಲಿ ಕಳೆದುಕೊಂಡಿದ್ದರೆ, ಅದರ ನಂತರವೂ ಮತ್ತದೇ ವೇಗದಲ್ಲಿ ವಾಹನ ಚಾಲನೆ ಮಾಡುತ್ತೇವೆ ಎಂದಾದರೆ ಆ ನಾಯಿಗಿರುವಷ್ಟು ಪ್ರಜ್ಞೆ ನಮಗಿಲ್ಲವಾಯಿತೇ?

ವಾಚಕರ ವಾಣಿ

ಭಕ್ತಿ ಭಂಡಾರಕ್ಕಿಂತ, ಬಟ್ಟೆ ಭಂಡಾರವೇ ಜಾಸ್ತಿ

ದೀಪಾ ಫಡ್ಕೆ ಅವರು ಬರೆದ 'ನಿಜ ಭಕ್ತಿಯಲ್ಲ, ಕಣ್ಕಟ್ಟಿನ ಆಚರಣೆ' ಎಂಬ ಲೇಖನವನ್ನು (ಸಂಗತ, ಜೂನ್ 27) ಓದಿದ ನಂತರ ಮನಸ್ಸು ಆಲೋಚನೆಗೆ ತೊಡಗಿತು. ಬಟ್ಟೆ ಭಂಡಾರವನ್ನು ದೇವಸ್ಥಾನಗಳಲ್ಲಿ, ಹರಿಯುವ ನದಿ ತೊರೆಗಳ ಬದಿಗಳಲ್ಲಿ ನೋಡಿ, ಇದೇನು ಭಕ್ತಿಯೋ ಅಥವಾ ಪರಿಸರಕ್ಕೆ ಕುತ್ತೋ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು.

ಇಂತಹ ಬೇಜವಾಬ್ದಾರಿಯ ನಡೆಗೆ ಉತ್ತರ ಕರ್ನಾಟಕದ ಪ್ರಸಿದ್ಧ ಕ್ಷೇತ್ರವಾದ ಸವದತ್ತಿ ಯಲ್ಲಮ್ಮನ ದೇವಸ್ಥಾನದ ಹತ್ತಿರದ ಎಣಗೊಂಡ ಸಾಕ್ಷಿ. ಇಲ್ಲಿ ಇಂತಹ ಬಟ್ಟೆಗಳ ರಾಶಿಯೇ ಬಿದ್ದಿರುತ್ತದೆ. ಅದನ್ನು ವಿಲೇವಾರಿ ಮಾಡಲು ಸಿಬ್ಬಂದಿ ಹರಸಾಹಸಪಡುತ್ತಾರೆ. ವಿದ್ಯಾವಂತ, ಬುದ್ಧಿವಂತ ಮಹಾಜನರೇ ಹೀಗೆ ಮಾಡಿದರೆ ಹೇಗೆ? ನಮ್ಮ ಸುತ್ತಲಿನ ಪರಿಸರವನ್ನು ಶುಚಿಯಾಗಿ ಇಟ್ಟುಕೊಳ್ಳುವುದನ್ನು ಬಿಟ್ಟು, ಇರುವ ಪರಿಸರವನ್ನು ಹಾಳು ಮಾಡುತ್ತಿದ್ದೇವೆ. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಅಲ್ಲವೇ?

ಶಕುಂತಲಾ ಲಕ್ಷ್ಮಣ, ಬೆಂಗಳೂರು

ಮದುವೆ ಖರ್ಚು: ಮಿತಿ ಅರಿಯೋಣ

ಭಾರತದಲ್ಲಿ ಮದುವೆಗೆ ಮಾಡುವ ವೆಚ್ಚವು ಶಿಕ್ಷಣಕ್ಕೆ ಮಾಡುವ ವೆಚ್ಚಕ್ಕಿಂತ ಎರಡು ಪಟ್ಟು ಹೆಚ್ಚಿದೆ ಎಂದು ವರದಿಯೊಂದು ಹೇಳಿದೆ (ಪ್ರ.ವಾ., ಜುಲೈ 1). ನನ್ನ ಸ್ನೇಹಿತನೊಬ್ಬ ತನ್ನ ಮಗಳ ಮದುವೆಯನ್ನು ಇತ್ತೀಚೆಗೆ ಸುಮಾರು ₹20 ಲಕ್ಷ ಖರ್ಚು ಮಾಡಿ ಅದ್ದೂರಿಯಾಗಿ ಮಾಡಿದ. ಮದುವೆಯೆಂದರೆ ಸುಮಾರು ಒಂದು ವಾರದ ಕಾರ್ಯಕ್ರಮ. ಮದುವೆಯ ಹಿಂದಿನ ದಿನ ಸತ್ಯನಾರಾಯಣ ವ್ರತ, ಮದುವೆ, ಹುಡುಗನ ಮನೆಯ ನೆಂಟರ ಊಟ, ಹುಡುಗಿ ಮನೆಯ ನೆಂಟರ ಊಟ, ಬೀಗರ ಶಾಸ್ತ್ರ ಹೀಗೆ ಹತ್ತಿರದ ಸಂಬಂಧಿಕರಿಗೆ ಅದು ಒಂದು ವಾರದ ಕಾರ್ಯಕ್ರಮ. ಬಂಗಾರ, ಬಟ್ಟೆ ಮುಂತಾದವುಗಳಿಗೆ ಭರ್ಜರಿಯಾಗಿಯೇ ಹಣ ಖರ್ಚು ಮಾಡಿದ್ದ. ಮದುವೆಗೆ ಮೊದಲು ಸುಮಾರು ₹1 ಕೋಟಿ ವೆಚ್ಚ ಮಾಡಿ ಹೊಸ ಮನೆ ಕಟ್ಟಿದ್ದ. ಮನೆಗಾಗಿ ಕೂಡಿಟ್ಟಿದ್ದ ಹಣ ಖರ್ಚಾಗಿ ಆತನಿಗೆ ಸಾಲವೂ ಆಗಿತ್ತು. ಇವನ್ನೆಲ್ಲಾ ನಿಭಾಯಿಸುವಷ್ಟು ಆತ ಶ್ರೀಮಂತನೇನಲ್ಲ. ಆತನಿಗೆ ಅಡಿಕೆಯಿಂದ ಹೆಚ್ಚೆಂದರೆ ವರ್ಷಕ್ಕೆ ₹8 ಲಕ್ಷ ಆದಾಯ ಇರಬಹುದು. ಆತನಿಗೆ ಒಬ್ಬ ಮಗ, ಒಬ್ಬಳು ಮಗಳು.

ಅಡಿಕೆ ಹೊರತುಪಡಿಸಿ ಬೇರೆ ಆದಾಯ ಇಲ್ಲ. ಇಂತಹ ಮಧ್ಯಮ ವರ್ಗದವನೊಬ್ಬ ಒಂದೇ ಬಾರಿಗೆ ದೊಡ್ಡ ಮನೆ ಕಟ್ಟಿ, ಭರ್ಜರಿಯಾಗಿ ಮದುವೆ ಮಾಡುವುದು ಹುಡುಗಾಟವೇ?! ಇದು ನನ್ನಲ್ಲಿ ಕುತೂಹಲ ಮೂಡಿಸಿದ ಪ್ರಶ್ನೆ. 'ಅಲ್ಲಾ ಮಾರಾಯ, ನೀನು ಇಷ್ಟೆಲ್ಲಾ ಕಾರುಬಾರು ಹೇಗೆ ಮಾಡಿದೆ' ಎಂದು ನಾನು ಒಂದು ದಿನ ಆತನನ್ನು ಕೇಳಿದೆ. 'ನಾಲ್ಕೈದು ಅಡಿಕೆ ಮಂಡಿಗಳಲ್ಲಿ ಅಡಿಕೆ ಕೊಡ್ತೀನಿ ಅಂತ ಮದುವೆಗೆ ಒಂದಿಪ್ಪತ್ತು ಲಕ್ಷ ಸಾಲ ಮಾಡಿದ್ದೇನೆ' ಎಂದ. 'ಹೇಗೆ ಆ ಸಾಲ ತೀರಿಸ್ತೀಯ' ಎಂದು ಕೇಳಿದಾಗ, 'ದೇವರಿಗೇ ಗೊತ್ತು' ಎಂದು ಕೈ ಮುಗಿದ. ಮದುವೆ ಸಮಾರಂಭಗಳಿಗೆ ಅನಗತ್ಯವಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕೊನೆಗೆ ಸಾಲ ತೀರಿಸಲಾಗದೇ ಪರದಾಡುವವರು ಇದ್ದಾರೆ. ಆರ್ಥಿಕ ಮಿತಿಗಳನ್ನು ಅರಿತು ಬದುಕಿದರೆ ನೆಮ್ಮದಿಯಿಂದ ಇರಲು ಸಾಧ್ಯವಾಗುತ್ತದಲ್ಲವೇ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ಭತ್ಯೆ ಬೇಕು, ಬದ್ಧತೆಯೂ ಬೇಕು

ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕಾಲಕಾಲಕ್ಕೆ ನಡೆಯುತ್ತದೆ. ಹಾಗೆಯೇ ಬೆಲೆ ಸೂಚ್ಯಂಕ ಆಧರಿಸಿ ವರ್ಷಕ್ಕೆ ಎರಡು ಬಾರಿ ತುಟ್ಟಿಭತ್ಯೆ ದೊರೆಯುತ್ತದೆ. ವೇತನ ಪರಿಷ್ಕರಣೆಗಾಗಿ ಒಂದು ಆಯೋಗ ರಚಿಸಿ, ಸೂತ್ರಗಳನ್ನು ರೂಪಿಸಲಾಗುತ್ತದೆ. ನೌಕರರ ಸಂಘಟನೆಗಳು ಆಗಾಗ್ಗೆ ಸರ್ಕಾರದ ಮುಂದೆ ಬೇಡಿಕೆಗಳನ್ನು ಇಡುತ್ತವೆ. ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯಗಳಲ್ಲಿನ ವೇತನದ ಪ್ರಮಾಣ ಗಮನಿಸಿ ಸಮಾನ ವೇತನ ಮತ್ತು ಸೌಲಭ್ಯಗಳಿಗೆ ಹಕ್ಕೊತ್ತಾಯ ಮಾಡುತ್ತವೆ.

ವೇತನ ಏರಿಕೆ ಮಾಡುವಾಗ, ನೌಕರರ ಕಾರ್ಯಕ್ಷಮತೆಯು ಹೆಚ್ಚಳ ಆಗಿದೆಯೇ ಎಂಬುದನ್ನು ಕಾಲಕಾಲಕ್ಕೆ ಪರಾಮರ್ಶಿಸಿ, ಅದರ ಬಗ್ಗೆ ಅಗತ್ಯ ಶಿಫಾರಸುಗಳನ್ನು ಮಾಡಲು ಆಗದೇ? ಬೇಡಿಕೆ ಈಡೇರಿಕೆಗೆ ಚಳವಳಿ ಮಾಡುವ ಸಂಘಟನೆಗಳು ಆತ್ಮವಿಮರ್ಶೆ ಮಾಡಿಕೊಳ್ಳುವುದು ಬೇಡವೇ? ವೇತನ ಮತ್ತು ಭತ್ಯೆಗಳನ್ನು ಬದ್ಧತೆ ಮತ್ತು ಹೊಣೆಗಾರಿಕೆಗಳ ಜೊತೆ ಜೋಡಿಸುವ ಅಗತ್ಯ ಇದೆ.

ಟಿ.ವಿ ನಾಗರಾಜ, ಬೆಂಗಳೂರು

ಕನ್ನಡ ಬೋಧನೆ: ತಡವಾದರೂ ಸ್ವಾಗತಾರ್ಹ

ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮ ಅನುಸರಿಸುವ ಎಲ್ಲ ಖಾಸಗಿ ಶಾಲೆಗಳಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕನ್ನಡ ಕಲಿಕೆಯನ್ನು 2015ರ ನಿಯಮಗಳ ಅನ್ವಯ ಕಡ್ಡಾಯಗೊಳಿಸಿ ಸರ್ಕಾರ ಕೈಗೊಂಡಿರುವ ಕ್ರಮ ತಡವಾಗಿದೆಯಾದರೂ ಸ್ವಾಗತಾರ್ಹ. ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಕಡ್ಡಾಯ ಕಲಿಕೆ ವಿಷಯವು 2014ರ ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಹಿನ್ನಡೆ ಅನುಭವಿಸುವಂತಾಯಿತು.

ಈಗ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆಗಿಂತಲೂ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಪ್ರವೇಶ ಪಡೆಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಕೇಂದ್ರ ಪಠ್ಯಕ್ರಮ ಅನುಸರಿಸುವ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪಿನ ನಂತರ ದೇಸಿ ಭಾಷೆಗಳನ್ನು ಬಲಪಡಿಸಲು ಕೇಂದ್ರ ಸರ್ಕಾರವು ಅಗತ್ಯ ಸಾಂವಿಧಾನಿಕ ಬದಲಾವಣೆಗೆ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು.

ಆದರೆ ಅದರ ಒಲವು ಸಂಸ್ಕೃತ ಹಾಗೂ ಹಿಂದಿ ಭಾಷೆಗಳ ಕಡೆ ಮಾತ್ರ ಇದೆ ಎಂಬಂತೆ ಕಾಣುತ್ತಿದೆ. ದೇಸಿ ಭಾಷೆಗಳಲ್ಲಿ ಕಲಿಕೆಯು ಹಿನ್ನೆಲೆಗೆ ಸರಿದರೆ ಭಾರತದ ಬಹುತ್ವಕ್ಕೆ ಮತ್ತು ಸೃಜನಶೀಲತೆಗೆ ಧಕ್ಕೆ ಉಂಟಾಗಬಹುದೆಂಬ ಕನಿಷ್ಠ ಕಾಳಜಿಯೂ ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಗೆ ಇಲ್ಲವಾಯಿತು.

ಈ ದೃಷ್ಟಿಯಿಂದ, ಈಗ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಕ್ರಮವು ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಕೈಗೊಳ್ಳಬಹುದಾದ ಒಂದು ಕನಿಷ್ಠ ಕ್ರಮವಾಗಿದೆ. ಸರ್ಕಾರದ ಈ ಕ್ರಮಕ್ಕೆ ಕಾನೂನಿನ ಮೂಲಕ ಅಡೆತಡೆ ಸೃಷ್ಟಿಸುವ ಸಾಧ್ಯತೆ ಇದ್ದೇ ಇದೆ. ಆದರೆ ಸರ್ಕಾರವು ನೀತಿ ನಿರೂಪಣೆಯ ಈ ವಿಷಯದಲ್ಲಿ ದೃಢ ಮತ್ತು ಜವಾಬ್ದಾರಿಯುತ ನಿಲುವು ತಾಳಿ ನಿಯಮಗಳನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವುದು ಅತಿ ಅವಶ್ಯಕ.

ವೆಂಕಟೇಶ ಮಾಚಕನೂರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಲಬುರಗಿಯ ಅಫಜಲಪುರದಲ್ಲಿ ಎರಡು ವರ್ಷಗಳಿಂದ ಹಾಳುಬಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಸತಿ ನಿಲಯದ ಕಟ್ಟಡ



ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್ ಖರ್ಚು (ಕೋಟಿಗಳಲ್ಲಿ)



ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್ ಪ್ರವೇಶಾತಿ

ವಿದ್ಯಾರ್ಥಿ ನಿಲಯ ಸಮಸ್ಯೆಗಳ ಆಲಯ

● ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: 'ಬಡತನ, ಅಪಮಾನಗಳ ಚಕ್ರದಿಂದ ಬಿಡುಗಡೆ ಪಡೆದು, ಭವಿಷ್ಯದ ಕನಸುಗಳನ್ನು ಹೊತ್ತು ಹಾಸ್ಟೆಲ್‌ಗಳಿಗೆ ಬರುತ್ತೇವೆ. ಉಣ್ಣಲು ಕನಿಷ್ಠ ಗುಣಮಟ್ಟದ ಅನ್ನ, ಕುಡಿಯಲು ಶುದ್ಧ ನೀರು, ಓದಿಗೆ ಪೂರಕವಾದ ವಾತಾವರಣ ಕೇಳಿದ್ದಕ್ಕೆ ಹಾಸ್ಟೆಲ್ ಸಿಬ್ಬಂದಿ ಕೊಡಬಾರದ ಕಾಟ ಕೊಟ್ಟರು...' ಕಲಬುರಗಿಯ ಕಲ್ಯಾಣ ನಗರದ ಡಿ.ದೇವರಾಜ ಅರಸು ವೃತ್ತಿಪರ ಬಾಲಕರ ವಸತಿ ನಿಲಯದಲ್ಲಿದ್ದು ಬಿ.ಇಡಿ ಮುಗಿಸಿದ ಅಂಬರೀಶ್ ಅವರ ಬೇಸರದ ನುಡಿಗಳಿವು.

'ಜೇವರ್ಗಿಯ ಮಲ್ಲಾ ಗ್ರಾಮದಿಂದ ಬಂದು ವೃತ್ತಿಪರ ಬಾಲಕರ ವಸತಿ ನಿಲಯ ಸೇರಿದೆ. ಮೆನು ಪ್ರಕಾರ ಉಪಾಹಾರ, ಊಟ, ಶುಚಿ ಕಿಟ್ ಕೊಡುವಂತೆ ಧ್ವನಿ ಎತ್ತಿದ್ದಕ್ಕೆ ಹಾಸ್ಟೆಲ್ ಸಿಬ್ಬಂದಿ ಹೊರಗಿನವರಿಂದ ಹಲ್ಲೆ ಮಾಡಿಸಿ, ಮಾನಸಿಕ ಹಿಂಸೆಯನ್ನೂ ಕೊಟ್ಟರು. ಕೊನೆಗೆ ಹಾಸ್ಟೆಲ್ ಸಹವಾಸವೇ ಬೇಡವೆಂದು ಮಧ್ಯದಲ್ಲಿ ಹಾಸ್ಟೆಲ್ ತೊರೆದು ರೂಮ್ ಮಾಡಿ, ಶಿಕ್ಷಣ ಮುಗಿಸಿದೆ' ಎಂದು ಭಾವುಕರಾದರು.

ಶೈಕ್ಷಣಿಕ ಬದುಕಿನ ಕನಸಿನ ಮೂಟೆಗಳನ್ನು ಹೊತ್ತು ಬಡ, ಮಧ್ಯಮದ ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಸ್ಟೆಲ್‌ಗಳಲ್ಲಿ ದಾಖಲಾಗುತ್ತಿದ್ದಾರೆ. ಆದರೆ, ಅಲ್ಲಿನ ಮೂಲಸೌಕರ್ಯಗಳ ಕೊರತೆ ಹಾಗೂ ಕೆಲವು ಸಿಬ್ಬಂದಿಯ ಕಿರುಕುಳ ಅವರಲ್ಲಿನ ಕಲಿಕಾ ಗುಣಮಟ್ಟವನ್ನು ಕುಸಿಯುವಂತೆ ಮಾಡುತ್ತಿದೆ.

ಮತ್ತೊಂದು ಕಡೆ ಶಿಥಿಲಗೊಂಡಿರುವ ಕಟ್ಟಡಗಳು, ಉದುರುತ್ತಿರುವ ಚಾವಣಿಯ ಸಿಮೆಂಟ್, ಸಿಬ್ಬಂದಿ ಕೊರತೆ, ಶೌಚಾಲಯ, ಗ್ರಂಥಾಲಯಗಳು, ಬಿಸಿ ನೀರಿನ ವ್ಯವಸ್ಥೆ ಇಲ್ಲದಿರುವುದು, ಉದ್ಘಾಟನೆಯ ಭಾಗ್ಯ ಕಾಣದೇ ಹಾಳುಬಿದ್ದ ಕಟ್ಟಡಗಳು. ಹೀಗೆ ಸಾಲು–ಸಾಲು ಸಮಸ್ಯೆಗಳು ಸರ್ಕಾರದ ಅರಿವಿಗೆ ಬಂದರೂ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗುತ್ತಿಲ್ಲ ಎಂದು ಪೋಷಕರು ಅಳಲು ತೋಡಿಕೊಳ್ಳುತ್ತಾರೆ.

ವಿದ್ಯಾಕಾಶಿ ಧಾರವಾಡದಲ್ಲಿ ವಿದ್ಯಾರ್ಥಿನಿಲಯದ ಕೊರತೆ ಬಹುವಾಗಿ ಕಾಡುತ್ತಿದೆ. ತಾಜಾ ಅಲ್ಲದ ತರಕಾರಿ, ಗುಣಮಟ್ಟವಿಲ್ಲದ ದಿನಸಿ ಬಳಕೆ, ಅರೆಬೆಂದ ಆಹಾರ ನೀಡಿದ್ದಕ್ಕೆ ಹಲವು ಬಾರಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಆ ಕ್ಷಣಕ್ಕೆ ಉತ್ತಮ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡುವ ಅಧಿಕಾರಿಗಳು ಆ ನಂತರ, ಕ್ರಮ ವಹಿಸುವುದಿಲ್ಲ ಎಂಬುದು ವಿದ್ಯಾರ್ಥಿ ಸಂಘಟನೆಗಳ ಆರೋಪ. ಸ್ವಂತ ಕಟ್ಟಡ ಇಲ್ಲದೆ, ಬಾಡಿಗೆ ಕಟ್ಟಡದಲ್ಲಿ ಎಲ್ಲ ಸೌಲಭ್ಯ ಕಲ್ಪಿಸುವುದು ಕಷ್ಟ ಎಂಬುದು ಅಧಿಕಾರಿಗಳ ಸಮರ್ಥನೆ.

'ಅವರಿವರ ಪ್ರಭಾವ ಬಳಸಿ ನಿಗದಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಹಾಸ್ಟೆಲ್‌ಗಳಿಗೆ ದಾಖಲಿಸಿಕೊಳ್ಳುತ್ತಾರೆ. ಹೆಚ್ಚಿನ ವಿದ್ಯಾರ್ಥಿಗಳ ಕಾರಣ ಹೇಳಿ, ಗುಣಮಟ್ಟದ ಆಹಾರ ನೀಡುವುದಿಲ್ಲ. ಕಡಿಮೆ ದರದ ಉತ್ಪನ್ನಗಳನ್ನು ತಂದು, ಹೆಚ್ಚು ದರದ ಬಿಲ್ ನೀಡಿ ವಂಚಿಸಿದ ಹಲವು ಪ್ರಕರಣಗಳಿವೆ' ಎನ್ನುತ್ತಾರೆ ಎಸ್‌ಎಫ್‌ಐ ರಾಜ್ಯ ಘಟಕದ ಪದಾಧಿಕಾರಿ ಎಸ್.ಬಸವರಾಜ್.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳು ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳನ್ನು ಕಲಿಸುವ ಕಾಲೇಜುಗಳ ಸಂಖ್ಯೆ ಹೆಚ್ಚಿವೆ. ಹೀಗಾಗಿ, ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಹೊರ ಜಿಲ್ಲೆಗಳ ವಿದ್ಯಾರ್ಥಿಗಳ ಸಂಖ್ಯೆಯೇ ಅಧಿಕವಾಗಿದೆ.

ತುಮಕೂರು ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ದಿನೇ ದಿನೇ ವಿಸ್ತಾರವಾಗುತ್ತಾ 'ಶಿಕ್ಷಣದ ಹಬ್' ಆಗಿ ಬದಲಾಗುತ್ತಿದೆ. ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ನರ್ಸಿಂಗ್, ವೈದ್ಯಕೀಯ ಕೋರ್ಸ್‌ಗಳ ಅಭ್ಯಾಸಕ್ಕಾಗಿ ರಾಮನಗರ, ಚಿತ್ರದುರ್ಗ, ಚಿಕ್ಕಮಗಳೂರು ಸೇರಿದಂತೆ ಹೊರ ಜಿಲ್ಲೆ, ರಾಜ್ಯಗಳ ವಿದ್ಯಾರ್ಥಿಗಳು ಜಿಲ್ಲೆಯ ವಿವಿಧ ಕಾಲೇಜುಗಳಲ್ಲಿ ಪ್ರವೇಶ ಪಡೆಯುತ್ತಿದ್ದಾರೆ. ಆದರೆ ಇಲ್ಲಿಗೆ ಬರುವ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯವೇ ಸಿಗುತ್ತಿಲ್ಲ.

ಹಾಸ್ಟೆಲ್: ರಾಜ್ಯದ ಸ್ಥೂಲ ನೋಟ

2,445	1,906	304	₹1,650	₹1,750
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ವಿದ್ಯಾರ್ಥಿ ನಿಲಯಗಳು	ಸಮಾಜ ಕಲ್ಯಾಣ ಇಲಾಖೆ ನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳು	ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ನಿರ್ವಹಿಸುವ ವಿದ್ಯಾರ್ಥಿನಿಲಯಗಳು	ಮೆಟ್ರಿಕ್ ಪೂರ್ವದ ಪ್ರತಿ ವಿದ್ಯಾರ್ಥಿಗೆ ಮಾಡುವ ಮಾಸಿಕ ವೆಚ್ಚ	ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ನಿಗದಿ ಪಡಿಸಿರುವ ಮಾಸಿಕ ವೆಚ್ಚ

ವಾರ್ಡನ್‌ಗಳು ವಾಟ್ಸ್‌ಆ್ಯಪ್ ಗ್ರೂಪ್‌ಗೆ ಊಟದ ಚಿತ್ರಗಳನ್ನು ಕಳಿಸಿದರೆ ನೋಡಲ್ ಅಧಿಕಾರಿಗಳು ಅದರ ಗುಣಮಟ್ಟ ಪರಿಶೀಲಿಸುವರು
ಜಾವೇದ್ ಕೆ.ಕರಂಗಿ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ (ಪ್ರಭಾರ), ಕಲಬುರಗಿ

ಕೊಠಡಿ ಕೊರತೆ ಇರುವ ಕಾರಣ ಗ್ರಂಥಾಲಯ ವ್ಯವಸ್ಥೆ ಕಲ್ಪಿಸುವುದು ಕಷ್ಟ. ಇರುವ ಜಾಗದಲ್ಲೇ ಪುಸ್ತಕ ಸಂಗ್ರಹಿಸಿ, ಓದಲು ವ್ಯವಸ್ಥೆ ಮಾಡಿಕೊಡಲಾಗಿದೆ
ಗೋಪಾಲ, ಬಿಸಿಎಂ ಇಲಾಖೆಯ ಜಿಲ್ಲಾ ಅಧಿಕಾರಿ, ಧಾರವಾಡ

ವಿದ್ಯಾರ್ಥಿನಿಲಯಗಳ ಕಟ್ಟಡದಲ್ಲಿ ಸ್ಥಳಾವಕಾಶ ಕಡಿಮೆಯಾದರೆ, ಬೇರೆ ಕಟ್ಟಡಗಳನ್ನು ಬಾಡಿಗೆಗೆ ಪಡೆದು ಅವಕಾಶ ಮಾಡಿಕೊಡಲಾಗುತ್ತಿದೆ
ಮಾಲತಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ, ದಕ್ಷಿಣ ಕನ್ನಡ

ಜಿಪಿಎಸ್ ವಿವರವುಳ್ಳ ಫೋಟೊ ಕಡ್ಡಾಯ

ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ಊಟದ ಸಮಯ, ಮೆನು ಸೇರಿದಂತೆ ಆಹಾರಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಜಿಪಿಎಸ್ ವಿವರಗಳ ಸಹಿತ ಫೋಟೊ ಕಳುಹಿಸುವುದನ್ನು ಅಧಿಕಾರಿಗಳು ಕಡ್ಡಾಯ ಮಾಡಿದ್ದಾರೆ

ವಿದ್ಯಾರ್ಥಿ ನಿಲಯಗಳಲ್ಲಿ ಕೊಡುವ ಆಹಾರದ ಗುಣಮಟ್ಟದ ಬಗ್ಗೆ ಪದೇ ಪದೇ ದೂರುಗಳು ಕೇಳಿಬರುತ್ತಿರುತ್ತವೆ. ಆಹಾರ ವ್ಯತ್ಯಾಸದಿಂದಾಗಿ ವಿದ್ಯಾರ್ಥಿಗಳು ಅನಾರೋಗ್ಯಕ್ಕೆ ಒಳಗಾದ ನಿದರ್ಶನಗಳೂ ಇವೆ. ಮೆನು ಪ್ರಕಾರ ಆಹಾರ ನೀಡಲಾಗುತ್ತಿಲ್ಲ, ಸಮಯಕ್ಕೆ ಸರಿಯಾಗಿ ಆಹಾರ ಕೊಡಲಾಗುತ್ತಿಲ್ಲ ಎಂಬ ಆರೋಪಗಳೂ ಇವೆ.

ಇಲಾಖೆ ಸಿದ್ಧಪಡಿಸಿರುವ ಮೆನುವಿನ ವೇಳಾಪಟ್ಟಿಯಂತೆ ಹಾಸ್ಟೆಲ್‌ಗಳಲ್ಲಿ ಆಹಾರ ನೀಡಲಾಗುತ್ತಿದೆಯೇ? ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆಯೇ? ದಿನಸಿ, ತರಕಾರಿಗಳು ನಿಗದಿತ ಪ್ರಮಾಣದಷ್ಟೇ ಬರುತ್ತಿದೆಯೇ ಎಂಬುದನ್ನು ಖಾತ್ರಿ ಪಡಿಸಲು ಜಿಪಿಎಸ್ ವಿವರ ಸಹಿತ ಫೋಟೊಗಳನ್ನು ಹಂಚಿಕೊಳ್ಳುವ ವ್ಯವಸ್ಥೆಯನ್ನು ಸಮಾಜ ಕಲ್ಯಾಣ ಇಲಾಖೆ ಜಾರಿಗೆ ತಂದಿದೆ. ಎಲ್ಲ ಜಿಲ್ಲೆಗಳಲ್ಲೂ ಇದರ ಅನುಷ್ಠಾನಕ್ಕೆ ಒತ್ತು ನೀಡಲಾಗಿದೆ.

ಹಾಸ್ಟೆಲ್ ವಾರ್ಡನ್‌ಗಳು, ಅಧಿಕಾರಿಗಳು ಇರುವ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ರಚಿಸಲಾಗಿದೆ. ಪ್ರತಿ ಹಾಸ್ಟೆಲ್‌ನ ವಾರ್ಡನ್‌ಗಳು ಸಿದ್ಧಪಡಿಸಿದ ಆಹಾರ, ಸಮಯಕ್ಕೆ ಸರಿಯಾಗಿ ಪೂರೈಸುತ್ತಿರುವ, ಖರೀದಿ ಮಾಡಿರುವ ದಿನಸಿ, ತರಕಾರಿಗಳ ಜಿಪಿಎಸ್ ವಿವರ ಸಹಿತ ಚಿತ್ರಗಳನ್ನು ತೆಗೆದು ಗ್ರೂಪ್‌ಗಳಿಗೆ ಕಡ್ಡಾಯವಾಗಿ ಹಂಚಬೇಕು.

ಈ ವ್ಯವಸ್ಥೆ ಬಂದ ನಂತರ ದೂರುಗಳು ಕಡಿಮೆಯಾಗಿವೆ ಎಂಬುದು ಅಧಿಕಾರಿಗಳ ಹೇಳಿಕೆ.

ಕಾಮಗಾರಿಗೆ ಆಮೆಗತಿ

ದೀನದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿನಿಲಯ ಯೋಜನೆಯಡಿ ಬೆಳಗಾವಿ, ಹುಬ್ಬಳ್ಳಿ- ಧಾರವಾಡ, ಕಲಬುರಗಿ, ಮಂಗಳೂರು ಮತ್ತು ಮೈಸೂರಿನಲ್ಲಿ ತಲಾ 1,000 ಸಾಮರ್ಥ್ಯದ ಬಹುಮಹಡಿ ವಿದ್ಯಾರ್ಥಿನಿಲಯಗಳ ಕಾಮಗಾರಿ ತೆವಳುತ್ತಾ ಸಾಗುತ್ತಿದೆ.

2022ರಲ್ಲಿ ಘೋಷಣೆಯಾದ ಈ ಯೋಜನೆಯು ಪೂರ್ಣಗೊಂಡರೆ ಉನ್ನತ ವ್ಯಾಸಂಗದ 5,000 ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ಗುಲಬರ್ಗಾ ವಿ.ವಿ, ಧಾರವಾಡದ ಕರ್ನಾಟಕ ವಿ.ವಿ, ಬೆಳಗಾವಿಯ ರಾಣಿ ಚೆನ್ನಮ್ಮ ವಿ.ವಿ. ಮತ್ತು ಮಂಗಳೂರು ವಿ.ವಿ.ಯಲ್ಲಿನ ಕಟ್ಟಡ ಕಾಮಗಾರಿ ಇನ್ನೂ ಪ್ರಗತಿಯಲ್ಲಿದೆ. ಆದರೆ, ಮೈಸೂರು ವಿಶ್ವವಿದ್ಯಾಲಯದಲ್ಲಿನ ಕಟ್ಟಡ ಕಾಮಗಾರಿ ಕೊನೆಯ ಹಂತ ತಲುಪಿದೆ.

'ಮೈಸೂರು ವಿ.ವಿ.ಯ ಬಹುಮಹಡಿ ವಿದ್ಯಾರ್ಥಿನಿಲಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ಜಂಟಿಯಾಗಿ ನಿರ್ವಹಣೆ ಮಾಡಲಿದ್ದು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮುಖ್ಯ ಜವಾಬ್ದಾರಿ ನೀಡಲಾಗಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಬಾಡಿಗೆ ಕಟ್ಟಡದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಕಾಮಗಾರಿ ಮುಗಿದ ನಂತರ ಇಲ್ಲಿಗೆ ಸ್ಥಳಾಂತರಿಸಲಾಗುವುದು' ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಭಕ್ತ ಮಾರ್ಕಂಡೇಯ 'ಪ್ರಜಾವಾಣಿ'ಗೆ ತಿಳಿಸಿದರು.

ಸುಧಾರಿಸದ ಮೂಲಸೌಕರ್ಯ

ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ. ಇಲಾಖೆಗಳು ಮಾಡುತ್ತಿರುವ ಖರ್ಚು ಕೂಡ ಜಾಸ್ತಿಯಾಗುತ್ತಿದೆ. ಆದರೆ, ಮೂಲಸೌಕರ್ಯಗಳ ಕೊರತೆ ಸುಳಿಯಿಂದ ಪಾರಾಗಲು ಸಾಧ್ಯವಾಗಿಲ್ಲ.

ಸರ್ಕಾರಿ ಮೆಟ್ರಿಕ್ ಪೂರ್ವದ ಪ್ರತಿ ವಿದ್ಯಾರ್ಥಿಗೆ ಮಾಸಿಕ ₹1,650 ಮತ್ತು ಮೆಟ್ರಿಕ್ ನಂತರದ ಪ್ರತಿ ವಿದ್ಯಾರ್ಥಿಗೆ ಮಾಸಿಕ ವೆಚ್ಚ ₹1,750 ಖರ್ಚು ಮಾಡಲಾಗುತ್ತಿದೆ. ದುಬಾರಿ ದಿನಗಳಲ್ಲಿ ಈ ಹಣ ಸಾಲುವುದಿಲ್ಲ ಎಂಬುದು ವಾರ್ಡನ್‌ಗಳ ವಾದ.

'ವಿದ್ಯಾರ್ಥಿಗಳ ಮಾಸಿಕ ವೆಚ್ಚವನ್ನು ಏರಿಕೆ ಮಾಡುವಂತೆ ಕಳೆದ ವರ್ಷವೇ ಹಾಸ್ಟೆಲ್ ವಾರ್ಡನ್ ಸಂಘದ ವತಿಯಿಂದ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಲಾಗಿದೆ' ಎಂದು ಕಲಬುರಗಿ ನಗರದ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದ ವಾರ್ಡನ್ ಬಸಮ್ಮ ಬೂದಿ ತಿಳಿಸಿದರು.

ಆಗಸ್ಟ್ 15ಕ್ಕೆ 'ಗೌರಿ' ತೆರೆಗೆ

ಸಾನ್ಯ, ಸಮರ್ಜಿತ್

ನಿರ್ದೇಶಕ ಹಾಗೂ ನಿರ್ಮಾಪಕ ಇಂದ್ರಜಿತ್ ಲಂಕೇಶ್ ಪುತ್ರ ಸಮರ್ಜಿತ್ ಲಂಕೇಶ್ ನಟನೆಯ 'ಗೌರಿ' ಸಿನಿಮಾ ಆಗಸ್ಟ್ 15ರಂದು ಬಿಡುಗಡೆಯಾಗಲಿದೆ.

ಈ ಚಿತ್ರದ ಮೂಲಕ ಸಮರ್ಜಿತ್ ನಾಯಕನಾಗಿ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ ಸಾನ್ಯ ಅಯ್ಯರ್ ನಟಿಸಿದ್ದು, ಇತ್ತೀಚೆಗೆ ನಡೆದ ಅದ್ದೂರಿಯಾದ ಕಾರ್ಯಕ್ರಮದಲ್ಲಿ ಚಿತ್ರತಂಡ ಬಿಡುಗಡೆ ದಿನಾಂಕ ಘೋಷಿಸಿತು. 'ವರಮಹಾಲಕ್ಷ್ಮೀ, ಸ್ವಾತಂತ್ರ್ಯ ದಿನ, ರಕ್ಷಾ ಬಂಧನ ಹೀಗೆ ಸಾಲುಸಾಲು ರಜೆಗಳು ಆ ಸಮಯದಲ್ಲಿದೆ. ಹಾಗಾಗಿ ಆಗಸ್ಟ್ 15ರಂದು ಬಿಡುಗಡೆಗೆ ನಿರ್ಧರಿಸಿದ್ದೇವೆ. ಒಬ್ಬ ಪ್ರೇಕ್ಷಕನಾಗಿ ಸಿನಿಮಾ ನೋಡಿದಾಗ ನನಗೆ ಬಹಳ ಇಷ್ಟವಾಯಿತು' ಎಂದರು ಇಂದ್ರಜಿತ್ ಲಂಕೇಶ್.

'ಚಿತ್ರಕ್ಕೆ ಸಕಾರಾತ್ಮಕವಾದ ಪ್ರತಿಕ್ರಿಯೆ ಬಂದಿದೆ. ಚಿತ್ರತಂಡದ ಸಹಕಾರದಿಂದ ಚಿತ್ರ ಚೆನ್ನಾಗಿ ಬಂದಿದೆ' ಎನ್ನುತ್ತಾರೆ ಸಮರ್ಜಿತ್ ಲಂಕೇಶ್.

'ಚೌಕಿದಾರ್'ಗೆ ಧನ್ಯ ಜೋಡಿ

'ದಿಯಾ' ಖ್ಯಾತಿಯ ನಟ ಪೃಥ್ವಿ ಅಂಬಾರ್ ನಟನೆಯ 'ಚೌಕಿದಾರ್' ಸಿನಿಮಾ ಸೆಟ್ಟೇರಲು ಸಜ್ಜಾಗುತ್ತಿದ್ದು, ನಟಿ ಧನ್ಯ ರಾಮ್‌ಕುಮಾರ್ ನಾಯಕಿಯಾಗಿ ಚಿತ್ರತಂಡ ಸೇರಿಕೊಂಡಿದ್ದಾರೆ.

'ರಥಾವರ' ಖ್ಯಾತಿಯ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶಿಸುತ್ತಿರುವ ಚಿತ್ರ ಇದಾಗಿದ್ದು, ಚಿತ್ರದಲ್ಲಿ 'ಡೈಲಾಗ್ ಕಿಂಗ್' ಸಾಯಿಕುಮಾರ್ ಅವರೂ ನಟಿಸುತ್ತಿದ್ದಾರೆ. 'ನಿನ್ನ ಸನಿಹಕೆ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ ಧನ್ಯ, ಇತ್ತೀಚೆಗಷ್ಟೇ 'ದ ಜಡ್ಜ್‌ಮೆಂಟ್' ಸಿನಿಮಾ ಮೂಲಕ ಪ್ರೇಕ್ಷಕರ ಎದುರು ಬಂದಿದ್ದರು. ಸದ್ಯ 'ಕಾಲಪತ್ತರ್' ಸಿನಿಮಾ ರಿಲೀಸ್‌ಗೆ ಎದುರು ನೋಡುತ್ತಿರುವ ದೊಡ್ಮನೆ ಸುಂದರಿ ಈಗ 'ಚೌಕಿದಾರ್' ಬಳಗ ಸೇರಿಕೊಂಡಿದ್ದಾರೆ. ಬಹುಭಾಷೆಯಲ್ಲಿ ಮೂಡಿಬರಲಿರುವ 'ಚೌಕಿದಾರ್' ಸಿನಿಮಾದಲ್ಲಿ ಭಿನ್ನ ಪಾತ್ರದ ಮೂಲಕ ಪೃಥ್ವಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. 'ಸಿನಿಮಾಗಳಲ್ಲಿ ಲವರ್‌ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ ಈ ಚಿತ್ರದಲ್ಲಿ ಆ್ಯಕ್ಷನ್ ಸೀಕ್ವೆನ್ಸ್ ಮೂಲಕ ಪ್ರೇಕ್ಷಕರನ್ನು ರಂಜಿಸಲಿದ್ದಾರೆ. ಹಾಗೆಂದು 'ಚೌಕಿದಾರ್' ಸಂಪೂರ್ಣ ಆ್ಯಕ್ಷನ್ ಸಿನಿಮಾವಲ್ಲ. ಇದು ಫ್ಯಾಮಿಲಿ ಎಂಟರ್‌ಟೈನರ್' ಎಂದಿದೆ ಚಿತ್ರತಂಡ.

ವಿದ್ಯಾ ಶೇಖರ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ಅಡಿಯಲ್ಲಿ ಕಲ್ಲಹಳ್ಳಿ ಚಂದ್ರಶೇಖರ್ 'ಚೌಕಿದಾರ್' ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಸಚಿನ್ ಬಸ್ರೂರು ಸಂಗೀತ ನಿರ್ದೇಶನ, ವಿ. ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ ಸಾಹಿತ್ಯ ಚಿತ್ರಕ್ಕಿದೆ. ಜೂನ್ 3ರಂದು ಚಿತ್ರ ಮುಹೂರ್ತ ನಡೆಯಲಿದೆ.

ಧನ್ಯ ರಾಮ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಗೊಂದಲ

ನುಡಿ ಬೆಳಗು

ಪಿ. ಚಂದ್ರಿಕಾ

ಸುಖದಲ್ಲಿ ತೇಲಾಡಿ ಬೇಸರಗೊಂಡ ಶ್ರೀಮಂತನೊಬ್ಬ ಊರ ಹೊರಗಿನ ಪಾಳುಮಂಟಪದಲ್ಲಿದ್ದ ಸಂತನ ಬಳಿಗೆ ಬಂದು, 'ನನ್ನ ಬಳಿ ಎಲ್ಲವೂ ಇದೆ ಆದರೆ ನೆಮ್ಮದಿ ಇಲ್ಲ. ಯಾಕೆ ಈ ಗೊಂದಲ' ಎಂದು ಕೇಳಿದ. ಸಂತ, 'ನಿನ್ನ ಬಳಿ ಏನೇನಿವೆಯೋ ಎಲ್ಲವನ್ನೂ ತಂದು ನನ್ನ ಕೈಗಿಡು. ನಿನಗೆ ನೆಮ್ಮದಿಯನ್ನು ನಾನು ಕೊಡುತ್ತೇನೆ' ಎಂದ. ಒಪ್ಪಿದ ಶ್ರೀಮಂತ ತನ್ನ ಬಳಿಯಿರುವ ಧನಕನಕ ವಜ್ರ ವೈಡೂರ್ಯಗಳನ್ನು ಮೂಟೆಕಟ್ಟಿ ಕುದುರೆಗಾಡಿಯಲ್ಲಿ ಹೇರಿ, ಸಂತನ ಬಳಿಗೆ ಬಂದು, 'ಈಗ ನನಗೆ ಆನಂದದ ದಾರಿಯನ್ನು ತೋರಿಸು' ಎಂದ.

ಸಂತ ಗಾಡಿಯನ್ನು ಸುತ್ತಿ ಬಂದ. ಶ್ರೀಮಂತ ಅವನನ್ನೇ ನೋಡುತ್ತಾ ನಿಂತಿದ್ದ. ಇದ್ದಕ್ಕಿದ್ದ ಹಾಗೆ ಗಾಡಿಯನ್ನು ಏರಿದ ಸಂತ ಜೋರಾಗಿ ಚಾವಟಿಯಿಂದ ಕುದುರೆಗೆ ಒಂದು ಏಟನ್ನು ಕೊಟ್ಟ. ಕುದುರೆ ಬೆದರಿ ಓಡತೊಡಗಿತು. ಇವ್ಯಾವುದನ್ನೂ ಆ ಶ್ರೀಮಂತ ಊಹಿಸಿಯೂ ಇರಲಿಲ್ಲ. ಎಲ್ಲವೂ ನಿಮಿಷಾರ್ಧದಲ್ಲಿ ನಡೆದು ಹೋಯಿತು. ಶ್ರೀಮಂತನಿಗೆ ಈತ ತನಗೆ ಮೋಸ ಮಾಡಿದ ಅನ್ನಿಸಿದ್ದೇ ತಡ, ಅವನ ಹಿಂದೆ 'ಈ ಕೆಟ್ಟ ಮನುಷ್ಯ ನನ್ನ ಗಳಿಕೆಯನ್ನೆಲ್ಲಾ ಕಳವು ಮಾಡಿಕೊಂಡು ಹೋಗುತ್ತಿದ್ದಾನೆ' ಎಂದು ಕೂಗುತ್ತಾ ತಾನೂ ಹಿಂದೆ ಓಡತೊಡಗಿದ. ಅವನ ಜೊತೆ ಸುತ್ತ ಮುತ್ತ ಇದ್ದವರೆಲ್ಲಾ ಓಡತೊಡಗಿದರು. ಕುದುರೆ ಮತ್ತು ಗಾಡಿ ಎರಡೂ ಮರೆಯಾಯಿತು. ಶ್ರೀಮಂತ ಎದೆ ಹೊಡೆದುಕೊಳ್ಳುತ್ತಾ ಕಷ್ಟಪಟ್ಟ ತನ್ನ ಸ್ವತ್ತು ಹೀಗೆ ನಾಶವಾಯಿತಲ್ಲಾ ಎಂದು ಗೋಳಾಡುತ್ತಾನೆ. ಸುತ್ತಲಿದ್ದ ಊರಿನವರು, ಆತ ಇಲ್ಲೇ ಸುಮಾರು ವರ್ಷಗಳಿಂದ ಇದ್ದಾನೆ, ಆದರೆ ಎಂದೂ ಹೀಗೆ ಮಾಡಿರಲಿಲ್ಲವೆಂದು ಕೆಲವರು ಹೇಳಿದರೆ, ದುಡ್ಡಿನ ದುರಾಸೆ ಯಾರನ್ನೂ ಬಿಡಲಿಲ್ಲ ಎನ್ನುತ್ತಾ ಇನ್ನು ಕೆಲವರು ಪ್ರತಿಕ್ರಿಯಿಸುತ್ತಾರೆ.

ಇದೆಲ್ಲಾ ನಡೆದು ಸ್ವಲ್ಪ ಹೊತ್ತಿಗೆ ಸಂತ ಕುದುರೆ ಗಾಡಿಯೊಂದಿಗೆ ತಾನು ಹೊರಟ ಜಾಗಕ್ಕೆ ಬಂದು ನಿಲ್ಲುತ್ತಾನೆ. ಜನರೆಲ್ಲಾ ಅವನ ಕಡೆಗೆ ಓಡಿಬರುತ್ತಾರೆ. ಶ್ರೀಮಂತ ಕೂಡಾ ಓಡಿಬಂದು, ತಾನು ತಂದಿದ್ದ ಎಲ್ಲವೂ ಗಾಡಿಯಲ್ಲೇ ಇವೆಯೇ ಎಂದು ಪರೀಕ್ಷಿಸಿ, 'ಭಗವಂತಾ ನನ್ನ ದುಡಿಮೆಯನ್ನು ನನಗೇ ವಾಪಾಸು ಮಾಡಿಬಿಟ್ಟೆಯಲ್ಲಾ... ನೀನೆಂಥಾ ಕರುಣಾಳು' ಎಂದು ಭಗವಂತನನ್ನು ಸ್ಮರಿಸುತ್ತಾನೆ. ನಂತರ ಸಂತನನ್ನು ನೋಡಿ, 'ಅಲ್ಲಯ್ಯಾ ನೀನು ನನಗೆ ಆನಂದವನ್ನು ತಂದುಕೊಡು ಎಂದರೆ ಗಳಿಸಿದ್ದನ್ನೆಲ್ಲಾ ಎತ್ತಿಕೊಂಡುಹೋಗಿ ದುಃಖವನ್ನು ತಂದು ಕೊಟ್ಟೆಯಲ್ಲಾ. ಹೀಗೆ ಯಾಕೆ ಮಾಡಿದೆ?' ಎನ್ನುತ್ತಾ ಬೈಯ್ಯಲು ಶುರುಮಾಡುತ್ತಾನೆ.

ಆಗ ಸಂತ, 'ನಿನ್ನ ಹತ್ತಿರ ಇದ್ದದ್ದೇ ಸಂತೋಷ. ಇದಕ್ಕಾಗಿ ನೀನು ಜೀವಮಾನ ಪೂರ್ತಿ ದುಡಿದಿದ್ದೀಯ. ಅದನ್ನು ಬಿಟ್ಟು ನನ್ನ ಬಳಿ ಎಲ್ಲ ಇದೆ, ಆನಂದವಿಲ್ಲವೆಂದು ಕೊರಗುತ್ತಿದ್ದೀಯ... ಜೀವಮಾನಪೂರ್ತಿ ಗಳಿಸಿದ್ದರಲ್ಲಿ ಅಲ್ಲದೆ ಬೇರೆ ಯಾವುದರಲ್ಲಿ ನಿನಗೆ ಆನಂದ ಸಿಗುತ್ತದೆ' ಎಂದು ಕೇಳುತ್ತಾನೆ. ಶ್ರೀಮಂತ ಅಚ್ಚರಿಯಲ್ಲಿ, 'ಅದು ನನ್ನ ಹತ್ತಿರ ಇದ್ದಿದ್ದರೆ ಅದರ ಬಯಕೆ ಮತ್ತೆ ಯಾಕೆ ಬರುತ್ತಿತ್ತು' ಎನ್ನುತ್ತಾನೆ. 'ಸುಖದ ಅನುಭವ ಆಗಬೇಕೆಂದರೆ ನಿನಗೆ ದುಃಖದ ಅನುಭವ ಆಗಬೇಕಾಗುತ್ತದೆ. ಯಾವುದನ್ನಾದರೂ ಸರಿ ಪಡೆದುಕೊಳ್ಳಲು ಮೊದಲು ಕಳೆದುಕೊಳ್ಳ ಬೇಕಾಗುತ್ತದೆ, ಬೆಳಕಿನ ಅನುಭವ ಆಗಬೇಕಾದರೆ ಕತ್ತಲೆಯ ಅನುಭವ ಬೇಕಾಗುತ್ತದೆಯೋ ಹಾಗೆ. ನಿನ್ನೊಳಗೇ ಇರುವ ಆನಂದವನ್ನು ಹೊರಗೆ ಹುಡುಕ ಹೊರಟರೆ ಗೊಂದಲವಾಗುತ್ತದೆ. ಒಳಗೆ ಹುಡುಕು ಗೊಂದಲವೇ ಇರುವುದಿಲ್ಲ' ಎನ್ನುತ್ತಾನೆ.

ಬದುಕೇ ಹಾಗೆ ಇದ್ದಾಗ ಯಾವುದರ ಬೆಲೆಯೂ ಗೊತ್ತಾಗುವುದಿಲ್ಲ ಕಳೆದುಕೊಂಡಾಗಲೇ ಅದರ ದುಪ್ಪಟ್ಟು ಬೆಲೆ ಗೊತ್ತಾಗುವುದು. ಆದ್ದರಿಂದ ಇದ್ದಾಗ ಅದನ್ನು ಅನುಭವಿಸುವುದನ್ನು ಸಾಧ್ಯ ಮಾಡಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಮಂಗಳವಾರ ಜುಲೈ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಏಕಾದಶಿ ಗಂ. 8-43 ನಕ್ಷತ್ರ: ಭರಣಿ ಗಂ. 05-27 ನಂತರ ಕೃತ್ತಿಕಾ ಗಂ. 28-40 ಯೋಗ: ಧೃತಿ ಗಂ. 11-17 ಕರಣ: ಬಾಲವ ಗಂ. 8-43, ಮಿಥುನ ಮಾಸದ 18 ನೇ ದಿನ, ಮಳೆನಕ್ಷತ್ರ: ಆರ್ದ್ರಾ 4.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-12 **ಸೂರ್ಯಾಸ್ತ:** 06-58
ಮುಸ್ಲಿಂ ದಿನಾಂಕ: 26 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 7, 12

ಮೇಷ: ನಿಂತು ಹೋಗಿರುವ ವ್ಯವಸಾಯದಲ್ಲಿಯೇ ಹೆಚ್ಚು ಆದಾಯ ಎಂಬುದನ್ನು ಕಂಡುಕೊಳ್ಳುವಿರಿ. ಧರ್ಮಾಚರಣೆಯಲ್ಲಿ ಕುಂದುಕೊರತೆಗಳನ್ನು ಮಾಡುವುದು ಶ್ರೇಯಸ್ಕರವಾಗಿರುವುದಿಲ್ಲ.

ವೃಷಭ: ಅನುಪಯುಕ್ತ ವಸ್ತುಗಳನ್ನು ಮನೆಯಿಂದ ಹೊರ ಹಾಕದ ಹೊರತು ಮನೆಯನ್ನು ಚೊಕ್ಕಗೊಳಿಸಲು ಸಾಧ್ಯವಾಗುವುದಿಲ್ಲ. ಸ್ನೇಹಿತರ ಒತ್ತಡದಿಂದಾಗಿ ಮಗಳಿಗೆ ವಿವಾಹ ಸಂಬಂಧ ಕೂಡಿ ಬರಲಿದೆ.

ಮಿಥುನ: ಅಪರೂಪದ ಅಳಿವಿನಂಚಿನಲ್ಲಿರುವ ವಿದ್ಯೆಯ ಬಗ್ಗೆ ಸಂದರ್ಶನ ಕೊಡುವಂತೆ ಪತ್ರಿಕೆ ಅಥವಾ ದೂರದರ್ಶನ ಮಾಧ್ಯಮದವರು ಬರುವರು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅಧ್ಯಯನ ಅಗತ್ಯ.

ಕರ್ಕಾಟಕ: ದಾಂಪತ್ಯ ಜೀವನದಲ್ಲಿ ಕೆಲವು ಮಾತುಗಳು ಕಿವಿಯ ಮೇಲೆ ಬಿದ್ದರೂ ನಿರ್ಲಕ್ಷಿಸುವುದು ಒಳ್ಳೆಯದು. ಜೀವನದಲ್ಲಿನ ಸಂತೋಷ ಪಡೆಯಲು ಸಾಕಷ್ಟು ಅವಕಾಶಗಳು ಲಭಿಸಲಿವೆ. ಎಲ್ಲಾ ವಿಚಾರದಲ್ಲೂ ಎಚ್ಚರದ ನಡೆ ಇರಲಿ.

ಸಿಂಹ: ಕೋಪದಿಂದ ಪರಿಹಾರವಾಗದ ಕೌಟುಂಬಿಕ ಸಮಸ್ಯೆಗಳು ಮೃದು ಮಾತಿನಿಂದ ಪರಿಹಾರವಾಗುತ್ತದೆ. ಮುಗಿದ ಸಮಾರಂಭದ ಉಳಿದ ಕೆಲಸಗಳು ಮಾಡಿದಷ್ಟೂ ಇದ್ದಂತೆ ಭಾಸವಾಗುತ್ತದೆ. ಪ್ರಯತ್ನವು ಮುಖ್ಯವಾಗಿರುತ್ತದೆ.

ಕನ್ಯಾ: ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ಮಾರಾಟದಿಂದ ಹೇರಳ ಲಾಭ. ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿಯನ್ನು ಕೊಡಲಿದ್ದಾರೆ. ವ್ಯಾಪಾರದಲ್ಲಿ ಮಿಶ್ರಫಲವಿರುವುದು.

ತುಲಾ: ಅಧಿಕಾರಿಗಳಿಗೆ ಆಹ್ವಾನವನ್ನು ಮಾಡುವ ದಿನಗಣನೆಯನ್ನು ಶುರುಮಾಡುವಿರಿ. ಸುಖ-ದುಃಖದ ಸಮ ಫಲವನ್ನು ಅನುಭವಿಸುವಂತಾಗುವುದು. ಗುರು ಹಿರಿಯರಲ್ಲಿ ಅಗೌರವ ತೋರದಿರಿ.

ವೃಶ್ಚಿಕ: ಎಂಜಿನಿಯರಿಂಗ್ ಕ್ಷೇತ್ರದಲ್ಲಿರುವವರಿಗೆ ಅವಕಾಶಗಳ ಜತೆಯಲ್ಲಿ ಬಯಸಿದ ಜಾಗ ಹಾಗೂ ಹೆಸರಾಂತ ಕಂಪನಿಯಲ್ಲಿ ಕೆಲಸ ಸಿಗುವ ಸಾಧ್ಯತೆಗಳು ಇವೆ. ವಾದ ವಿವಾದಗಳಿಂದ ದೂರ ಉಳಿಯುವ ಪ್ರಯತ್ನ ಮಾಡಿರಿ.

ಧನು: ಮಕ್ಕಳ ಪ್ರತಿ ಹೆಜ್ಜೆಯ ಮೇಲೂ ಎಚ್ಚರಿಕೆಯ ಕಣ್ಣನ್ನು ಇಟ್ಟಿರಲೇಬೇಕಾಗುತ್ತದೆ. ಬದಲಾದ ದಿನಚರಿಗೆ ಹೊಂದಿಕೊಳ್ಳುವುದು ಕಷ್ಟದ ಕೆಲಸವಾಗಿ ಪರಿಣಮಿಸಬಹುದು. ಹಣದ ಅಡಚಣೆ ಇರುವುದಿಲ್ಲ.

ಮಕರ: ಎಷ್ಟೇ ದೊಡ್ಡ ಸಮಾರಂಭದಲ್ಲಿ ಭಾಗವಹಿಸುವುದಾದರೂ ನೋಡುವವರ ಕಣ್ಣಿಗೆ ಹೆಚ್ಚೆಂದು ಕಾಣುವಂಥ ನಡವಳಿಕೆಗಿಂತ ಸರಳತೆಗೆ ಸ್ಥಾನಮಾನ ದೊರಕುತ್ತದೆ. ಲೇವಾದೇವಿ ವ್ಯವಹಾರ ಮುಂದುವರಿಯುವುದು.

ಕುಂಭ: ಯಾವುದೋ ಪುಸ್ತಕಗಳನ್ನು ಓದುವುದರಿಂದಾಗಿ ಮನಸ್ಸು ಶೂನ್ಯದ ಕಡೆಗೆ ವಾಲುತ್ತಿರುವಂತೆ ಭಾಸವಾಗುತ್ತದೆ. ವಿಷಜಂತುಗಳ ಕಡಿತಕ್ಕೆ ಒಳಗಾಗುವಂಥ ಸಾಧ್ಯತೆ ಇರುವುರಿಂದ ಎಚ್ಚರದಲ್ಲಿರಿ.

ಮೀನ: ಸಾಮ್ಯತೆಗಳನ್ನೇ ಹುಡುಕಿ ಗೆಳೆತನ ಮಾಡಿದರೂ ಗೆಳೆತನದಲ್ಲಿ ಭಿನ್ನಾಭಿಪ್ರಾಯಗಳೇ ಹೆಚ್ಚಾಗಿ ಕಾಣುವುದು. ತಂದೆ ತಾಯಿಯರನ್ನು ಸಂತೋಷ ಪಡಿಸುವಂಥ ಕ್ಷಣಗಳಿಗೆ ಹೆಮ್ಮೆಎಂದೆನಿಸುವುದು.

ಪದಬಂಧ 5729

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಶಿವನ ಬಳಿಯಿರಿಸಿದ ಮಣ್ಣಿನ ಬಾನಿ (3)
3.ಅತ್ಯಂತ ತಂಪು ಹವೆಯುಳ್ಳ ಭೂ ಭಾಗ (5)
5.ಸರಕ್ಕನೆ ತರಿಸಿದ ಸಾಮಾನು (3)
6.ಶಾಂತಿ ಸಂಕೇತವೆಂದು ಭಾವಿಸಲಾದ ಪಕ್ಷಿ (4)
7.ಬೆಂಕಿಯನ್ನು ಆರಿಸುವ ಸಿಬ್ಬಂದಿ (7)
10.ರುಚಿಕಟ್ಟಾದ ಆಡುಗೆಯಿದು (4)
11.ಶಿವನ ಧನುಸ್ಸು (3)
15.ನೀರಿನಲ್ಲಿದ್ದೂ ನೀರಿನ ಬಾಧೆ ತಟ್ಟದಂತೆ ತಡೆಯುವ ಮಂತ್ರವಿದ್ಯೆ (5)
16.ಮಾಂಸವನ್ನು ಮಾರಿ ಜೀವಿಸುವವನು (3)

ಮೇಲಿಂದ ಕೆಳಕ್ಕೆ
1.ಮೈಮೇಲೆ ಅಲಂಕಾರಿಕವಾಗಿ ಬರೆಸಿಕೊಳ್ಳುವ ಚಿತ್ರ (2)
2.ಚಾರ ತಿಳಿಸಿದ ಸಂಗತಿ (3)
3.ತಲೆ ಇಲ್ಲಿದೆ (2)
4.ನರಕಾಧಿಪನ ಹತ್ತಿರವಿರುವ ಜೋಡಿ (3)
5.ಮಡಿವಾಳ ಏಕೋ ತಿರುಗಿದ್ದಾನಲ್ಲಾ? (3)
6.ಪಾಕದ ನಂತರ ಕುಡಿದಿರುವ ಶರಬತ್ತು (3)
8.ಶಾಸನಗಳನ್ನು ರಚಿಸುವವನು (3)
9.ಕಳವಳದಿಂದ ತಿಂದ ತುತ್ತು ತಿರುವುಮುರುವಾಯಿತಲ್ಲಾ? (3)
10.ಭೀಷ್ಮನ ಮತ್ತೊಂದು ಹೆಸರು (3)
12.ನಾಕದೊಳಗಿರುವ ಮುಖಂಡ (3)
13.ಇಪ್ಪತ್ನಾಲ್ಕು ಗಂಟೆಗಳ ಅವಧಿ (2)
14.ಹಣ್ಣಾಗದಿರುವ ಫಲ (2)



5728ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಹಾರಾಜ 3.ಹಾಲಾಹಲ
5.ನವಿಲು 7.ಕರುಣೆ
9.ಆಸ್ಥಾನ 11.ಭವಿಷ್ಯ
12.ಅಂಕಣ 13.ಕಿಟಕಿ
15.ಕನಸು 17.ರತ್ನಾಕರ
18.ತಟವಟ

ಮೇಲಿಂದ ಕೆಳಕ್ಕೆ:
1.ಮಶಕ 2.ಜನ
3.ಹಾಲು 4.ಲಶುನ
6.ವಿವಾಹವಿಚ್ಛೇದನ
8.ರುದ್ರನಾಟಕ 10.ಸ್ಥಾನಪಲ್ಲಟ
12.ಅಂಬರ 14.ಕಿತ್ತಾಟ
15.ಕರ 16.ಸುತ

ಸುಡೊಕು 6114

8		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6113 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,010
ಇಂದಿನ ಅಂತ್ಯ	24,141
▲	131
ದಿನದ ಗರಿಷ್ಠ	24,164

ವಿನಿಮಯ ದರ

$	ಡಾಲರ್	83.44
£	ಪೌಂಡ್	105.73
€	ಯುರೊ	89.77
¥	ಯೆನ್ (100ಕ್ಕೆ)	52

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1530)
ಸೋಯಾ (ರಿಫೈನ್ಡ್)	₹965 (960)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹918 (908)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹302-490
ದ್ವಿತಳಿ (ಬಿ.ವಿ)	₹355-601

ಕಾಸಿಯಾ ಅಧ್ಯಕ್ಷರಾಗಿ ರಾಜಗೋಪಾಲ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) 2024–25ನೇ ಸಾಲಿನ ಅಧ್ಯಕ್ಷರಾಗಿ ಹಿರಿಯ ಉದ್ಯಮಿ ಎಂ.ಜಿ. ರಾಜಗೋಪಾಲ್ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ಉಪಾಧ್ಯಕ್ಷರಾಗಿ ಬಿ.ಆರ್. ಗಣೇಶ್ ರಾವ್, ಗೌರವ ಪ್ರಧಾನ ಕಾರ್ಯದರ್ಶಿ ಸುರೇಶ್ ಎನ್. ಸಾಗರ್, ಜಂಟಿ ಕಾರ್ಯದರ್ಶಿ (ನಗರ) ಬಾಬು ಜೆ.ಎಸ್., ಜಂಟಿ ಕಾರ್ಯದರ್ಶಿ (ಗ್ರಾಮೀಣ) ಸತೀಶ್ ಎನ್. ಮತ್ತು ಖಜಾಂಚಿಯಾಗಿ ಮಂಜುನಾಥ್ ಎಚ್. ನೇಮಕವಾಗಿದ್ದಾರೆ. ನೂತನ ಪದಾಧಿಕಾರಿಗಳು ಅಧಿಕಾರಾವಧಿ ಒಂದು ವರ್ಷ ಇರಲಿದೆ ಎಂದು ಕಾಸಿಯಾ ಪ್ರಕಟಣೆಯಲ್ಲಿ ತಿಳಿಸಿದೆ.

ವಿಜ್ಞಾನ ಮತ್ತು ಕಾನೂನು ಪದವಿಧರರಾದ ರಾಜಗೋಪಾಲ್, ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಸಂಸ್ಥೆಯಲ್ಲಿ 20 ವರ್ಷಗಳ ಕಾಲ ಅಕೌಂಟ್ಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ (ವಿಆರ್ಎಸ್) ತೆಗೆದುಕೊಂಡು ಕೈಗಾರಿಕೋದ್ಯಮಿಯಾಗಿದ್ದಾರೆ.

ರಾಜಗೋಪಾಲ್ ಅವರು ಕಾಸಿಯಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು, ಕಾಸಿಯಾದ ಜಂಟಿ ಕಾರ್ಯದರ್ಶಿ-ಗ್ರಾಮಾಂತರ ಮತ್ತು ಪ್ರಧಾನ ಕಾರ್ಯದರ್ಶಿ, ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ, ರಾಜಾಜಿನಗರ ಇಂಡಸ್ಟ್ರೀಸ್ ಅಸೋಸಿಯೇಷನ್ ಮತ್ತು ಎಫ್‌ಕೆಸಿಸಿಐನ ಸಕ್ರಿಯ ಸದಸ್ಯರಾಗಿದ್ದಾರೆ ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹5000-9500
ಕೆ.ಆರ್.ಪೇಟೆ	₹8700-9502
ಮಧುಗಿರಿ	₹8400-9000
ತಿಪಟೂರು	₹8800-9059

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹202
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹181

(ಪ್ರತಿ ಕೆ.ಜಿಗೆ)

ತಯಾರಿಕಾ ಚಟುವಟಿಕೆ ಏರಿಕೆ

ಹೆಚ್ಚಿದ ಬೇಡಿಕೆ, ರಫ್ತಿನಿಂದಾಗಿ ಸೂಚ್ಯಂಕ ಹೆಚ್ಚಳ: ಎಸ್ ಆ್ಯಂಡ್ ಪಿ ಗ್ಲೋಬಲ್

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆ ಜೂನ್ ತಿಂಗಳಲ್ಲಿ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಸೋಮವಾರ ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ಪ್ರಕಾರ ಮೇ ತಿಂಗಳಲ್ಲಿ 57.5ರಷ್ಟಿದ್ದ ಸೂಚ್ಯಂಕವು, ಜೂನ್‌ನಲ್ಲಿ 58.3ಕ್ಕೆ ಏರಿಕೆಯಾಗಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ದಾಖಲಾದರೆ ನಕಾರಾತ್ಮಕವೆಂದು ಪರಿಗಣಿಸಲಾಗುತ್ತದೆ.

ಬೇಡಿಕೆ, ರಫ್ತು ಪ್ರಮಾಣದ ಹೆಚ್ಚಳ ಮತ್ತು ಜಾಹೀರಾತುಗಳಿಂದಾಗಿ ಮಾರಾಟದಲ್ಲಿ ಏರಿಕೆಯಾಗಿದೆ. ಹೊಸ ಆರ್ಡರ್‌ಗಳ ಹೆಚ್ಚಳದಿಂದ, ಸಂಸ್ಥೆಗಳು ನೇಮಕಾತಿಯನ್ನು ಹೆಚ್ಚಿಸಿವೆ ಎಂದು ವರದಿ ಹೇಳಿದೆ.

ತಯಾರಿಕಾ ವಲಯದ ಸೂಚ್ಯಂಕ



ತಯಾರಿಕಾ ವಲಯದ ಚಟುವಟಿಕೆಗಳ ಏರಿಕೆಯ ಕಾರಣದಿಂದ ಈ ವಲಯದಲ್ಲಿ ನೇಮಕಾತಿಯೂ ಹೆಚ್ಚಾಗಿದೆ. ಹಿಂದಿನ 19 ವರ್ಷಗಳ ಹೋಲಿಕೆಯಲ್ಲಿ ಜೂನ್‌ನಲ್ಲೇ ಗರಿಷ್ಠ ಮಟ್ಟದ ನೇಮಕಾತಿ ನಡೆದಿದೆ. ಜತೆಗೆ ತಯಾರಿಕಾ ವಲಯದ ಕಚ್ಚಾವಸ್ತುಗಳ ಖರೀದಿ ಪ್ರಮಾಣವೂ ಏರಿಕೆಯಾಗಿದೆ ಎಂದು ಎಚ್‌ಎಸ್‌ಬಿಸಿಯ ಗ್ಲೋಬಲ್ ಅರ್ಥಶಾಸ್ತ್ರಜ್ಞ ಮೈತ್ರೇಯಿ ದಾಸ್ ಹೇಳಿದ್ದಾರೆ.

ಜೂನ್‌ನಲ್ಲಿ ಸಿಬ್ಬಂದಿ ವೆಚ್ಚವು ಏರಿಕೆಯಾಗಿದೆ. ಸರಕು ಮತ್ತು ಸಾರಿಗೆ ವೆಚ್ಚದ ಏರಿಕೆಯು ಕಾರ್ಯಾಚರಣೆಯ ವೆಚ್ಚದ ಒಟ್ಟಾರೆ ಹೆಚ್ಚಳಕ್ಕೆ ಕಾರಣವಾಯಿತು. ಉತ್ಪಾದನಾ ವೆಚ್ಚವು ಇಳಿಕೆಯಾಗಿಲ್ಲ. ಇದು ಗರಿಷ್ಠ ಮಟ್ಟದಲ್ಲಿದೆ. ಈ ಹೊರೆಯನ್ನು ತಯಾರಿಕಾ ವಲಯವು ಗ್ರಾಹಕರಿಗೆ ವರ್ಗಾಯಿಸುತ್ತಿದೆ ಎಂದು ವರದಿ ಹೇಳಿದೆ.

ಹೊಸ ರಫ್ತುಗಳು ಗಣನೀಯವಾಗಿ ಹೆಚ್ಚಿದ್ದು, ಏಷ್ಯಾ, ಆಸ್ಟ್ರೇಲಿಯಾ, ಬ್ರೆಜಿಲ್, ಕೆನಡಾ, ಯುರೋಪ್ ಮತ್ತು ಅಮೆರಿಕಾದಿಂದ ಉತ್ತಮ ಬೇಡಿಕೆಯಿಂದಾಗಿ ಒಳಹರಿವು ಹೆಚ್ಚಿದೆ ಎಂದು ಕಂಪನಿಗಳು ಹೇಳಿವೆ.

ಉತ್ಪಾದನಾ ವಲಯವು ಸಕಾರಾತ್ಮಕವಾಗಿಯೇ ಉಳಿದಿದೆ. ಮುಂದಿನ ವರ್ಷದಲ್ಲಿ ಬೇಡಿಕೆ ಮತ್ತು ಆರ್ಡರ್‌ಗಳಲ್ಲಿ ಮತ್ತಷ್ಟು ಸುಧಾರಣೆ ಕಾಣಲಿದೆ ಎಂದು ಹೇಳಿದೆ. ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 443 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಐ.ಟಿ ಷೇರುಗಳ ಖರೀದಿಯಿಂದ ಸೋಮವಾರ ಷೇರು ಸೂಚ್ಯಂಕಗಳು ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್ಇ) ಸೆನ್ಸೆಕ್ಸ್ ದಿನದ ವಹಿವಾಟಿನಲ್ಲಿ ಗರಿಷ್ಠ 79,561ಕ್ಕೆ ಏರಿಕೆಯಾಗಿತ್ತು. 79,476 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿ 443 ಅಂಶಗಳ ಏರಿಕೆ ದಾಖಲಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್ಎಸ್ಇ) ನಿಫ್ಟಿ 131 ಅಂಶ ಹೆಚ್ಚಳವಾಗಿ 24,141ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 24,164ಕ್ಕೆ ಮುಟ್ಟಿತ್ತು.

ಷೇರು ಸೂಚ್ಯಂಕಗಳ ಏರಿಕೆಯಿಂದ ಬಿಎಸ್ಇ ನೊಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ಸಾರ್ವಕಾಲಿಕ ಗರಿಷ್ಠ ₹443 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಟೆಕ್ ಮಹೀಂದ್ರಾ, ಅಲ್ಟ್ರಾ ಟೆಕ್ ಸಿಮೆಂಟ್, ಬಜಾಜ್ ಫೈನಾನ್ಸ್, ಹಿಂದುಸ್ತಾನ್ ಯೂನಿಲಿವರ್, ಟಿಸಿಎಸ್, ಜೆಎಸ್‌ಡಬ್ಲ್ಯು ಸ್ಟೀಲ್, ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಟಾಟಾ ಮೋಟರ್ಸ್ ಮತ್ತು ಐಸಿಐಸಿಐ ಬ್ಯಾಂಕ್ ಗಳಿಕೆ ಕಂಡಿವೆ.

ಎನ್‌ಟಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಲಾರ್ಸೆನ್ ಆ್ಯಂಡ್ ಟೊಬ್ರೊ, ಸನ್ ಫಾರ್ಮಾ, ಇಂಡಸ್‌ಇಂಡ್ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.51ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರಲ್ 85.43 ಡಾಲರ್‌ಗೆ ಮುಟ್ಟಿದೆ.

ಶೇ 97.87ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ಜೂನ್ ತಿಂಗಳ ಅಂತ್ಯಕ್ಕೆ ₹2 ಸಾವಿರ ಮುಖಬೆಲೆಯ ಶೇ 97.87ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಇನ್ನೂ ₹7,581 ಕೋಟಿ ಮೌಲ್ಯದ ನೋಟುಗಳು ನಾಗರಿಕರ ಬಳಿ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಸೋಮವಾರ ತಿಳಿಸಿದೆ.

ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ ಕಳೆದ ವರ್ಷದ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಂಚೆ ಮೂಲಕವೂ ಈ ಪ್ರಾದೇಶಿಕ ಕಚೇರಿಗಳಿಗೆ ನೋಟುಗಳನ್ನು ಕಳುಹಿಸಿ ಬದಲಾಯಿಸಿಕೊಳ್ಳಬಹುದಾಗಿದೆ.

ವಾಹನಗಳ ಸಗಟು ಮಾರಾಟ ಏರಿಕೆ

ಹೊಸ ಮಾದರಿಯ ಪ್ರಯಾಣಿಕ ವಾಹನಗಳ ಬಿಡುಗಡೆಯಿಂದ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಟೊಯೊಟ, ಮಾರುತಿ ಸುಜುಕಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಕಿಯಾ, ಬಜಾಜ್‌ನ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಜೂನ್ ತಿಂಗಳಲ್ಲಿ ಏರಿಕೆಯಾಗಿದೆ. ಇದೇ ವೇಳೆ ಎಂ.ಜಿ. ಮೋಟರ್ಸ್, ಟಾಟಾ, ಹುಂಡೈ, ಔಡಿ ವಾಹನಗಳ ಮಾರಾಟದಲ್ಲಿ ಇಳಿಕೆಯಾಗಿದೆ.

ಮಾರುಕಟ್ಟೆಗೆ ಹೊಸ ಮಾದರಿಯ ವಾಹನಗಳ ಬಿಡುಗಡೆಯಿಂದಾಗಿ ಮಾರಾಟದ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಕಂಪನಿಗಳು ಸೋಮವಾರ ತಿಳಿಸಿವೆ.

ಎಸ್‌ಯುವಿ ಮತ್ತು ಎಂಪಿವಿ ವಾಹನಗಳಿಗೆ ಗ್ರಾಹಕರಿಂದ ಬೇಡಿಕೆ ಹೆಚ್ಚಾಗಿದೆ. ಗ್ರಾಮೀಣ ಭಾಗದ ಕಡೆಗೂ ವಹಿವಾಟು ವಿಸ್ತರಿಸಿದ್ದರಿಂದ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ಟೊಯೊಟ ಕಿರ್ಲೋಸ್ಕರ್ ಮೋಟರ್ಸ್‌ನ ಶಬರಿ ಮನೋಹರ್ ತಿಳಿಸಿದ್ದಾರೆ.

ಟೊಯೊಟ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ 27,474 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 19,608 ವಾಹನಗಳು ಮಾರಾಟವಾಗಿದ್ದು, ಈ ಮಾರಾಟಕ್ಕೆ ಹೋಲಿಸಿದರೆ ಶೇ 40ರಷ್ಟು ಏರಿಕೆಯಾಗಿದೆ. ದೇಶೀಯವಾಗಿ 25,752 ವಾಹನ ಮಾರಾಟವಾಗಿದ್ದರೆ, 1,722 ವಾಹನಗಳು ರಫ್ತಾಗಿವೆ.

ಮಾರುತಿ ಸುಜುಕಿ: ಮಾರುತಿ ಸುಜುಕಿ ಇಂಡಿಯಾದ 1.79 ಲಕ್ಷ ವಾಹನಗಳು ಮಾರಾಟವಾಗಿದ್ದು, ಶೇ 12ರಷ್ಟು ಏರಿಕೆಯಾಗಿದೆ. ದೇಶೀಯವಾಗಿ ಒಟ್ಟು 1.37 ಲಕ್ಷ ಮಾರಾಟವಾಗಿದ್ದು, ವಾಹನಗಳ ರಫ್ತು 19,770 ರಿಂದ 31,033ಕ್ಕೆ ಏರಿಕೆಯಾಗಿದೆ.

ಮಹೀಂದ್ರ ಆ್ಯಂಡ್ ಮಹೀಂದ್ರ: ಮಹೀಂದ್ರ ಆ್ಯಂಡ್ ಮಹೀಂದ್ರ ವಾಹನಗಳ ಮಾರಾಟದಲ್ಲಿ ಶೇ 11ರಷ್ಟು ಏರಿಕೆಯಾಗಿದ್ದು, 69,397 ವಾಹನಗಳು ಮಾರಾಟವಾಗಿವೆ. ಹಿಂದಿನ ಜೂನ್‌ನಲ್ಲಿ 62,429 ಮಾರಾಟವಾಗಿದ್ದವು. ದೇಶೀಯ ವಾಹನಗಳ ಮಾರಾಟವು 32,588ರಿಂದ 40,022ಕ್ಕೆ ಏರಿಕೆಯಾಗಿದೆ. ರಫ್ತು ಪ್ರಮಾಣ ಶೇ 4ರಷ್ಟು ಏರಿಕೆಯಾಗಿದ್ದು, 2,597 ವಾಹನ ಮಾರಾಟವಾಗಿವೆ.

ಕಿಯಾ: ಕಿಯಾ ಇಂಡಿಯಾದ ವಾಹನಗಳ ಮಾರಾಟದಲ್ಲಿ ಶೇ 10ರಷ್ಟು ಏರಿಕೆಯಾಗಿದ್ದು, 21,300 ವಾಹನ ಮಾರಾಟವಾಗಿವೆ.

ಬಜಾಜ್: ಬಜಾಜ್ ಆಟೊದ 3.58 ಲಕ್ಷ ವಾಹನಗಳ ಮಾರಾಟವಾಗಿದ್ದು, ಶೇ 5ರಷ್ಟು ಹೆಚ್ಚಳವಾಗಿದೆ. ದೇಶೀಯ ಮಾರಾಟವು 1.99 ಲಕ್ಷದಿಂದ 2.16 ಲಕ್ಷಕ್ಕೆ ಏರಿಕೆಯಾಗಿದೆ.

ಎಂ.ಜಿ ಮೋಟರ್ ಮಾರಾಟ ಇಳಿಕೆ

ಜೆಎಸ್‌ಡಬ್ಲ್ಯು ಎಂ.ಜಿ ಮೋಟರ್ ಇಂಡಿಯಾ ವಾಹನಗಳ ಚಿಲ್ಲರೆ ಮಾರಾಟದಲ್ಲಿ ಶೇ 9ರಷ್ಟು ಇಳಿಕೆಯಾಗಿದ್ದು, 4,644 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 5,125 ವಾಹನಗಳು ಮಾರಾಟವಾಗಿದ್ದವು.

ಟಾಟಾ ಮೋಟರ್ಸ್: ಟಾಟಾ ಮೋಟರ್ಸ್‌ನ 74,147 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 80,383 ಮಾರಾಟವಾಗಿದ್ದವು. ಈ ಮಾರಾಟಕ್ಕೆ ಹೋಲಿಸಿದರೆ ಶೇ 8ರಷ್ಟು ಇಳಿಕೆಯಾಗಿದೆ. ವಿದ್ಯುತ್ ಚಾಲಿತ ವಾಹನಗಳು ಸೇರಿದಂತೆ ಪ್ರಯಾಣಿಕ ವಾಹನಗಳ ಮಾರಾಟವು ಶೇ 8ರಷ್ಟು ಇಳಿಕೆಯಾಗಿದ್ದು, 43,624 ವಾಹನ ಮಾರಾಟವಾಗಿದೆ. ವಾಣಿಜ್ಯ ವಾಹನಗಳ ಮಾರಾಟವು 33,148 ರಿಂದ 30,623ಕ್ಕೆ ಇಳಿದಿದೆ.

ಔಡಿ: ಔಡಿ ಇಂಡಿಯಾದ ವಾಹನಗಳ ಚಿಲ್ಲರೆ ಮಾರಾಟವು ಏಪ್ರಿಲ್–ಜೂನ್ ಅವಧಿಯಲ್ಲಿ ಶೇ 6ರಷ್ಟು ಇಳಿಕೆಯಾಗಿದ್ದು, 1,431 ವಾಹನ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 1,524 ವಾಹನ ಮಾರಾಟವಾಗಿದ್ದವು.

ಹುಂಡೈ: ಹುಂಡೈ ಮೋಟರ್ ಇಂಡಿಯಾದ 64,803 ವಾಹನ ಮಾರಾಟವಾಗಿದ್ದು, ಶೇ 1ರಷ್ಟು ಕಡಿಮೆಯಾಗಿದೆ. ವಾಹನಗಳ ರಫ್ತು 15,600 ರಿಂದ 14,700ಕ್ಕೆ ಇಳಿದಿದೆ.

ಉತ್ತರ ಕೊರಿಯಾ: ಎರಡು ಖಂಡಾಂತರ ಕ್ಷಿಪಣಿ ಪರೀಕ್ಷಾರ್ಥ ಉಡಾವಣೆ

ಸಿಯೋಲ್ (ಎಪಿ): ಉತ್ತರ ಕೊರಿಯಾವು ಸೋಮವಾರ ಎರಡು ಖಂಡಾಂತರ ಕ್ಷಿಪಣಿಗಳ ಪರೀಕ್ಷಾರ್ಥ ಉಡಾವಣೆ ನಡೆಸಿದೆ.

‘ಜಾಂಗ್ಯೋನ್‌ನ ನಗರದಿಂದ ಈಶಾನ್ಯ ದಿಕ್ಕಿಗೆ 2 ಕ್ಷಿಪಣಿಗಳನ್ನು ಹಾರಿಸಲಾಗಿದೆ. ಮೊದಲನೇ ಕ್ಷಿಪಣಿ 600 ಕಿ.ಮೀ ದೂರ ಚಲಿಸಿದ್ದು, ಎರಡನೇ ಕ್ಷಿಪಣಿ 120 ಕಿ.ಮೀ ದೂರ ಚಲಿಸಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ‘ಎರಡು ಕ್ಷಿಪಣಿಗಳು ಸಮುದ್ರಕ್ಕೆ ಬೀಳುವಂತೆ ಯೋಜನೆ ರೂಪಿಸಲಾಗಿತ್ತು, ಆದರೆ ಮೊದಲನೇ ಕ್ಷಿಪಣಿ ಮಾತ್ರ ಸಮುದ್ರಕ್ಕೆ ಬಿದ್ದಿದೆ’ ಎಂದು ದಕ್ಷಿಣ ಕೊರಿಯಾದ ಮಾಧ್ಯಮವೊಂದು ವರದಿ ಮಾಡಿದೆ. ಎರಡನೇ ಕ್ಷಿಪಣಿಯು ಉತ್ತರದ ಭೂಭಾಗಕ್ಕೆ ಅಪ್ಪಳಿಸಿದ್ದು, ಯಾವುದೇ ಹಾನಿ ಸಂಭವಿಸಿರುವ ಬಗ್ಗೆ ವರದಿಯಾಗಿಲ್ಲ ಎಂದು ಮಾಧ್ಯಮ ವರದಿ ಮಾಡಿದೆ.

ಜಿಎಸ್‌ಟಿ: ಸಂಗ್ರಹ ಶೇ 8 ಹೆಚ್ಚಳ

ನವದೆಹಲಿ (ಪಿಟಿಐ): ಜೂನ್ ತಿಂಗಳಲ್ಲಿ ಒಟ್ಟು ಜಿಎಸ್‌ಟಿ ಸಂಗ್ರಹ ಶೇ 8ರಷ್ಟು ಏರಿಕೆಯಾಗಿ ₹1.74 ಲಕ್ಷ ಕೋಟಿಗೆ ತಲುಪಿದೆ ಎಂದು ಮೂಲಗಳು ತಿಳಿಸಿವೆ.

ಆದಾಗ್ಯೂ, ಮಾಸಿಕ ಜಿಎಸ್‌ಟಿ ಸಂಗ್ರಹದ ದತ್ತಾಂಶವನ್ನು ಅಧಿಕೃತವಾಗಿ ಬಿಡುಗಡೆ ಮಾಡುವುದನ್ನು ಸರ್ಕಾರ ಸ್ಥಗಿತಗೊಳಿಸಿದೆ. ಮುಂದೆಯೂ ಇದು ಮುಂದುವರಿಯಲಿದೆ ಎಂದು ಮೂಲಗಳು ಹೇಳಿವೆ.

2023ರ ಜೂನ್‌ನಲ್ಲಿ ₹1.61 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು. ಪ್ರಸಕ್ತ ಹಣಕಾಸು ವರ್ಷದ ಈವರೆಗೆ (ಏಪ್ರಿಲ್–ಜೂನ್) ₹5.57 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ಮಾಹಿತಿ ನೀಡಿವೆ.

2024ರ ಮೇ ತಿಂಗಳಿನಲ್ಲಿ ₹1.73 ಲಕ್ಷ ಕೋಟಿ ಸಂಗ್ರಹವಾಗಿತ್ತು. ಇದೇ ವರ್ಷ ಏಪ್ರಿಲ್‌ನಲ್ಲಿ ಜಿಎಸ್‌ಟಿ ಸಂಗ್ರಹ ದಾಖಲೆಯ ₹2.10 ಲಕ್ಷ ಕೋಟಿ ಮುಟ್ಟಿತ್ತು.

‘ಜಿಎಸ್‌ಟಿ ಜಾರಿಯಿಂದ ಬೆಲೆ ಇಳಿಕೆ’

ನವದೆಹಲಿ (ಪಿಟಿಐ): 7 ವರ್ಷಗಳನ್ನು ಪೂರೈಸಿದ ಸರಕು ಮತ್ತು ಸೇವಾ ತೆರಿಗೆಯು (ಜಿಎಸ್‌ಟಿ) ಗೃಹೋಪಯೋಗಿ ವಸ್ತುಗಳು, ಮೊಬೈಲ್ ಫೋನ್ ಸೇರಿದಂತೆ ಇತರೆ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವ ಮೂಲಕ ಪ್ರತಿ ಮನೆಗೆ ಸಂತಸ ನೀಡಿದೆ ಎಂದು ಹಣಕಾಸು ಸಚಿವಾಲಯವು ‘ಎಕ್ಸ್’ನಲ್ಲಿ ಸೋಮವಾರ ತಿಳಿಸಿದೆ.

ಜಿಎಸ್‌ಟಿ ಅನುಷ್ಠಾನದ ನಂತರ ಆಹಾರ ಪದಾರ್ಥಗಳು ಮತ್ತು ವಸ್ತುಗಳ ಮೇಲಿನ ವೆಚ್ಚದ ಉಳಿತಾಯದಿಂದ ಜಿಎಸ್‌ಟಿ ಜನರ ಜೀವನವನ್ನು ಸುಲಭಗೊಳಿಸಿದೆ ಎಂದು ಹೇಳಿದೆ.

2023-24ರ ಆರ್ಥಿಕ ವರ್ಷದಲ್ಲಿ ₹2 ಕೋಟಿ ವರೆಗಿನ ಒಟ್ಟು ವಾರ್ಷಿಕ ವಹಿವಾಟು ಹೊಂದಿರುವ ತೆರಿಗೆದಾರರಿಗೆ ವಾರ್ಷಿಕ ರಿಟರ್ನ್ ಫೈಲಿಂಗ್ (ಸಲ್ಲಿಕೆ) ಅಗತ್ಯವನ್ನು ಮನ್ನಾ ಮಾಡಲು ಜಿಎಸ್‌ಟಿ ಕೌನ್ಸಿಲ್ ಶಿಫಾರಸು ಮಾಡಿದೆ ಎಂದು ಹೇಳಿದೆ.

ಮುಂಬೈ ಧಾರಣೆ (ಶೇಂಗಾ)

01-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1540)
ಒಂದು ವಾರದ ಡೆಲಿವರಿ	1535 (1535)
ಸೋಯಾ ಕಚ್ಚಾ	920 (915)
ಪಾಮ್ ವಾರದ ಡೆಲಿವರಿ	916 (906)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (905)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ	₹71,550 (71,375)
ಬೆಳ್ಳಿ ಕೆ.ಜಿ	₹87,850 (87,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15800
ಎಸಿ	₹9380
ಆರ್‌ಪಿ	₹17000
ಆರ್‌ಸಿ	₹9750

ಫಿಲಿಪ್ಪೀನ್ಸ್ ಕರಾವಳಿ ಬಳಿ ಚೀನಾ ಯುದ್ಧನೌಕೆ

ಬೀಜಿಂಗ್ (ಪಿಟಿಐ): ದಕ್ಷಿಣ ಚೀನಾ ಸಮುದ್ರ ಪ್ರದೇಶದಲ್ಲಿ ಉದ್ವಿಗ್ನ ಪರಿಸ್ಥಿತಿ ಮುಂದುವರಿದಿರುವ ನಡುವೆಯೇ ಫಿಲಿಪ್ಪೀನ್ಸ್ ಕರಾವಳಿ ಪ್ರದೇಶಕ್ಕೆ ಚೀನಾ ಮತ್ತೊಂದು ಯುದ್ಧನೌಕೆಯನ್ನು ಕಳುಹಿಸಿಕೊಟ್ಟಿದೆ.

ವಿವಾದಿತ ದಕ್ಷಿಣ ಚೀನಾ ಪ್ರದೇಶದಲ್ಲಿರುವ ಎರಡನೇ ಥಾಮಸ್ ಶೋಲ್ (ನೀರಿನಲ್ಲಿ ಮುಳುಗಿರುವ ಹವಳದ ದಿಬ್ಬ ಪ್ರದೇಶ) ಮೇಲೆ ಹಕ್ಕು ಸ್ಥಾಪಿಸಲು ಚೀನಾ ಮತ್ತು ಫಿಲಿಪ್ಪೀನ್ಸ್ ನಡುವೆ ಹಲವು ಸಮಯಗಳಿಂದ ಪೈಪೋಟಿ ಏರ್ಪಟ್ಟಿದೆ.

‘ಶಾನ್‌ಡಂಗ್’ ಯುದ್ಧನೌಕೆ ಫಿಲಿಪ್ಪೀನ್ಸ್ ಕರಾವಳಿ ಪ್ರದೇಶದಲ್ಲಿ ಗಸ್ತು ತಿರುಗುವುದು ಕಂಡುಬಂದಿದೆ’ ಎಂದು ಸರ್ಕಾರಿ ಸ್ವಾಮ್ಯದ ‘ಗ್ಲೋಬಲ್ ಟೈಮ್ಸ್’ ಸೋಮವಾರ ವರದಿ ಮಾಡಿದೆ.

ಯುದ್ಧವಿಮಾನಗಳನ್ನು ಹೊತ್ತೊಯ್ಯಬಲ್ಲ ಶಾನ್‌ಡಂಗ್ ನೌಕೆಯು ನಿಯಮಿತ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ ಎಂದು ಚೀನಾದ ಅಧಿಕಾರಿಗಳನ್ನು ಉಲ್ಲೇಖಿಸಿ ವರದಿ ತಿಳಿಸಿದೆ.

‘ಸಮುದ್ರದ ಗಡಿಯ ಸಾರ್ವಭೌಮತೆಯನ್ನು ಕಾಪಾಡಿಕೊಳ್ಳುವ ವಿಚಾರದಲ್ಲಿ ಚೀನಾ ತನ್ನ ಬದ್ಧತೆ’ಯನ್ನು ಅಮೆರಿಕ ಮತ್ತು ಫಿಲಿಪ್ಪೀನ್ಸ್‌ಗೆ ಸ್ಪಷ್ಟಪಡಿಸುವ ಉದ್ದೇಶ ಇದರ ಹಿಂದೆ ಇದೆ ಎಂದು ವಿಶ್ಲೇಷಿಸಲಾಗಿದೆ. ಕೆಲವಾರಗಳ ಹಿಂದೆ ದಕ್ಷಿಣ ಚೀನಾ ಪ್ರದೇಶದಲ್ಲಿ ತನ್ನ ನೌಕೆಯೊಂದು ಚೀನಾದ ನೌಕೆಗೆ ಡಿಕ್ಕಿಯಾಗಿತ್ತು ಎಂದು ಫಿಲಿಪ್ಪೀನ್ಸ್ ಹೇಳಿತ್ತು.

ಟ್ರಂಪ್ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆ ಮುಂದೂಡಿಕೆ

ವಾಷಿಂಗ್ಟನ್ (ಎಪಿ): ಅಮೆರಿಕದ 2020ರ ಅಧ್ಯಕ್ಷೀಯ ಚುನಾವಣೆ ಫಲಿತಾಂಶವನ್ನು ತಿರುಚುವ ಯತ್ನಕ್ಕೆ ಸಂಬಂಧಿಸಿದಂತೆ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿರುದ್ಧದ ಕ್ರಿಮಿನಲ್ ಪ್ರಕರಣದ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮತ್ತೆ ಮುಂದೂಡಿದೆ.

ಇದರಿಂದಾಗಿ ನವೆಂಬರ್‌ನಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಗೆ ಮುನ್ನ ಪ್ರಕರಣ ವಿಚಾರಣೆ ಪೂರ್ಣಗೊಳ್ಳುವ ಸಾಧ್ಯತೆ ಕ್ಷೀಣವಾಗಿದೆ. 6–3 ಮತಗಳಿಂದ ತೀರ್ಪು ನೀಡಿರುವ ನ್ಯಾಯಮೂರ್ತಿಗಳು, ಇದೇ ಮೊದಲ ಬಾರಿಗೆ, ಮಾಜಿ ಅಧ್ಯಕ್ಷರು ತಮ್ಮ ಅಧಿಕೃತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಶಿಕ್ಷೆಯಿಂದ ವಿನಾಯಿತಿ ಪಡೆಯಬಹುದು. ಆದರೆ, ಅನಧಿಕೃತ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಯಾವುದೇ ವಿನಾಯಿತಿ ಇರುವುದಿಲ್ಲ ಎಂದರು.

ಕೆಳಹಂತದ ನ್ಯಾಯಾಲಯಗಳು ಟ್ರಂಪ್ ಅವರ ಪ್ರಕರಣದಲ್ಲಿ ನಿರ್ಧಾರಗಳನ್ನು ಹೇಗೆ ಅನ್ವಯಿಸಬೇಕು ಎಂಬುದನ್ನು ತೀರ್ಮಾನಿಸಬೇಕು ಎಂದು ನ್ಯಾಯಮೂರ್ತಿಗಳು ಆದೇಶಿಸಿದರು.

ಇದರಿಂದಾಗಿ ವಿಶೇಷ ವಕೀಲ ಜಾಕ್ ಸ್ಮಿತ್ ವಾದ ಮಂಡಿಸುತ್ತಿರುವ ಪ್ರಕಣದಲ್ಲಿ ಟ್ರಂಪ್ ವಿಚಾರಣೆ ಎದುರಿಸುವುದು ವಿಳಂಬವಾಗಬಹುದು ಎನ್ನಲಾಗಿದೆ.

ಗಾಜಾ ಆಸ್ಪತ್ರೆಯ ನಿರ್ದೇಶಕನ ಬಿಡುಗಡೆ

ಖಾನ್ ಯೂನಿಸ್ (ಗಾಜಾ ಪಟ್ಟಿ) (ಎಪಿ): ಗಾಜಾದ ಪ್ರಮುಖ ಆಸ್ಪತ್ರೆಯಾದ ‘ಶಿಫಾ ಆಸ್ಪತ್ರೆ’ಯ ನಿರ್ದೇಶಕ ಮೊಹಮ್ಮದ್ ಅಬು ಸೆಲ್ಮಿಯಾ ಅವರನ್ನು ವಶಕ್ಕೆ ತೆಗೆದುಕೊಂಡ ಏಳು ತಿಂಗಳ ನಂತರ ಇಸ್ರೇಲ್ ಸೇನೆಯು ಸೋಮವಾರ ಬಿಡುಗಡೆ ಮಾಡಿದೆ.

ಶಿಫಾ ಆಸ್ಪತ್ರೆಯು ಹಮಾಸ್ ಬಂಡುಕೋರರ ಅಡಗುತಾಣವಾಗಿದೆ ಎಂಬ ಆರೋಪದ ಮೇರೆಗೆ ಇಸ್ರೇಲ್ ಸೇನೆಯು ಕಳೆದ ವರ್ಷ ನವೆಂಬರ್‌ನಲ್ಲಿ ದಾಳಿ ನಡೆಸಿ, ಸೆಲ್ಮಿಯಾ ಅವರನ್ನು ವಶಕ್ಕೆ ತೆಗೆದುಕೊಂಡಿತ್ತು. ಅವರನ್ನು ವಿಚಾರಣೆಗೆ ಒಳಪಡಿಸದೆ ಮತ್ತು ಅವರ ವಿರುದ್ಧ ಆರೋಪ ಹೊರಿಸದೆ ಬಿಡುಗಡೆಗೊಳಿಸಿರುವುದು ಸೇನೆಯು ಆಸ್ಪತ್ರೆಯ ಮೇಲೆ ಮಾಡಿದ್ದ ಆರೋಪದ ಕುರಿತು ಅನುಮಾನ ಮೂಡುವಂತೆ ಮಾಡಿದೆ.

ಸೇನೆಯ ವಶದಲ್ಲಿದ್ದ ವೇಳೆ ಅನುಭವಿಸಿದ್ದ ಸಂಕಷ್ಟಗಳ ಕುರಿತು ಮಾತನಾಡಿರುವ ಸೆಲ್ಮಿಯಾ, ‘ಸೆರೆಯಲ್ಲಿ ನಮಗೆ ಎಲ್ಲಾ ರೀತಿಯ ಚಿತ್ರಹಿಂಸೆ ನೀಡಲಾಯಿತು. ಬಂಧಿತರಿಗೆ ಮನಬಂದಂತೆ ಥಳಿಸಲಾಗುತ್ತಿತ್ತು. ಸೆರೆಮನೆಯ ಕಾವಲುಗಾರರು ನನ್ನ ಬೆರಳಿನ ಮೂಳೆ ಮುರಿದಿದ್ದರು ಮತ್ತು ತಲೆಗೆ ಬಲವಾಗಿ ಪೆಟ್ಟು ಮಾಡಿದ್ದರು. ಉತ್ತಮ ವೈದ್ಯಕೀಯ ನೆರವು ದೊರಕದೇ ಹಲವರ ಕೈ, ಕಾಲು ಊನಗೊಂಡಿವೆ’ ಎಂದರು.

ವಿರೋಧ: ಸೆಲ್ಮಿಯಾ ಬಿಡುಗಡೆಗೆ ಇಸ್ರೇಲ್‌ನಲ್ಲಿ ವಿರೋಧವೂ ವ್ಯಕ್ತವಾಗಿದೆ. ಈ ನಡೆಯನ್ನು ಖಂಡಿಸಿರುವ ಅಲ್ಲಿಯ ಸರ್ಕಾರ ಇಬ್ಬರು ಸಚಿವರು, ಯಾರ ಅಭಿಪ್ರಾಯವನ್ನೂ ಕೇಳದೇ ಈ ಕ್ರಮ ಕೈಗೊಳ್ಳಲಾಗಿದೆ ಎಂದು ದೂರಿದ್ದಾರೆ.

ಕೇಂದ್ರದ ಕಾನೂನಿಗೆ ರಾಜ್ಯದ ಸಡ್ಡು

ಒಂದನೇ ಪುಟದಿಂದ...

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಳೆದ ಆಗಸ್ಟ್‌ನಲ್ಲಿ ಪತ್ರ ಬರೆದು ಮೂರು ಕಾನೂನುಗಳ ಕುರಿತು ಅಭಿಪ್ರಾಯ ಕೇಳಿದ್ದರು. ಮುಖ್ಯಮಂತ್ರಿ ಸೂಚನೆ ಮೇರೆಗೆ ಕಾನೂನು ತಜ್ಞರ ಸಮಿತಿ ರಚಿಸಲಾಗಿತ್ತು. ಸಮಿತಿ ನೀಡಿದ್ದ ವರದಿಯನ್ನು ಕಾನೂನು ಇಲಾಖೆ ಪರಿಶೀಲನೆ ನಡೆಸಿದ ನಂತರ ಕೇಂದ್ರಕ್ಕೆ ಕಳುಹಿಸಲಾಗಿತ್ತು. ಆದರೆ, ರಾಜ್ಯದ ಅಭಿಪ್ರಾಯ, ಬದಲಾವಣೆಗಳ ಮನವಿಗೆ ಕೇಂದ್ರ ಕಿಂಚಿತ್ತೂ ಸ್ಪಂದಿಸಿಲ್ಲ. ಜನಾಭಿಪ್ರಾಯವನ್ನೂ ಕಡೆಗಣಿಸಿದೆ. ಕಾನೂನಿನ ಹಲವು ಅಂಶಗಳಲ್ಲಿ ಸ್ಪಷ್ಟ ವ್ಯಾಖ್ಯಾನವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾನೂನು ರೂಪಿಸಿದ ಸರ್ಕಾರಕ್ಕೆ ಆ ಅವಧಿಯಲ್ಲಿ ಜಾರಿ ಮಾಡಲು ನೈತಿಕ ಹಕ್ಕಿರುತ್ತದೆ. ಆದರೆ, ಸರ್ಕಾರದ ಅವಧಿ ಮುಗಿದ ಬಳಿಕ, ಕಾನೂನು ಜಾರಿ ಮಾಡಲು ದಿನ ನಿಗದಿ ಮಾಡುವುದು ಅನೈತಿಕ ಹಾಗೂ ರಾಜಕೀಯ ಅಸಂಬದ್ಧ ಕ್ರಮ. ಕಾನೂನು ಮಾಡಿದಾಗ ಇದ್ದ ಸರ್ಕಾರದ ಅವಧಿ ಲೋಕಸಭಾ ಚುನಾವಣೆ ಬಳಿಕ ಮುಗಿದು ಹೋಗಿದೆ. ಹೀಗಿರುವಾಗ, ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಜುಲೈ 1ರಂದು ಕಾಯ್ದೆ ಜಾರಿ ಮಾಡಬೇಕು ಎಂದು ಸೂಚಿಸಿದ್ದು ಸರಿಯಲ್ಲ ಎಂದರು.

ಜುಲೈ 4ರಂದು ನಡೆಯುವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಲಾಗುವುದು. ಮೂರು ಕಾನೂನುಗಳಲ್ಲಿನ 23 ಅಂಶಗಳಿಗೆ ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದರು.

ಹಿಂದೆ ದಾಖಲಾದ ಪ್ರಕರಣಗಳಿಗೆ ಅನ್ವಯವಿಲ್ಲ

ಮೂರು ಕ್ರಿಮಿನಲ್ ಅಪರಾಧ ಕಾನೂನುಗಳು ಜುಲೈ 1ರಿಂದ ಜಾರಿಯಾಗಿರುವುದರಿಂದ ಶತಮಾನದ ಹಿಂದೆ ರೂಪುಗೊಂಡಿದ್ದ ಕಾನೂನುಗಳು ಅಸ್ತಿತ್ವ ಕಳೆದುಕೊಂಡಿದೆ. 2024ರ ಜೂನ್ 30ರವರೆಗೆ ದಾಖಲಾದ ಎಲ್ಲ ಪ್ರಕರಣಗಳು ಇತ್ಯರ್ಥವಾಗುವರೆಗೂ ಹಿಂದಿನ ಕಾನೂನುಗಳ ಅನ್ವಯವೇ ವಿಚಾರಣೆಗಳು ನಡೆದು, ಶಿಕ್ಷೆ ನಿಗದಿ ಮಾಡಲಾಗುತ್ತದೆ. ರಾಜ್ಯ ಸರ್ಕಾರ ಈಗ ಜಾರಿಯಾದ ನಿಯಮಗಳಿಗೆ ತಿದ್ದುಪಡಿ ಪ್ರಕ್ರಿಯೆ ಆರಂಭಿಸಿ, ಎರಡೂ ಸದನಗಳಲ್ಲಿ ಒಪ್ಪಿಗೆ ದೊರೆತು ಅದಕ್ಕೆ ರಾಷ್ಟ್ರಪತಿ ಸಮ್ಮತಿ ದೊರಕುವವರೆಗೂ ಈಗ ಜಾರಿಯಾದ ಹೊಸ ಕಾನೂನು ಅಸ್ತಿತ್ವದಲ್ಲಿ ಇರುತ್ತದೆ.

ಯಾವುದೇ ರಾಜ್ಯಗಳಿಗೆ ಇಷ್ಟವಿರಲಿ ಬಿಡಲಿ, ಆ ರಾಜ್ಯಗಳು ಮಾಡಿದ ತಿದ್ದುಪಡಿ ಅಧಿಕೃತವಾಗಿ ಜಾರಿಯಾಗುವರೆಗೂ ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳನ್ನು ಅನುಸರಿಸಲೇಬೇಕು.

ವಿರೋಧಕ್ಕೇನು ಕಾರಣ: ರಾಜ್ಯದ ಪ್ರತಿಪಾದನೆ

- ಸ್ವಾತಂತ್ರ್ಯ ಹೋರಾಟದ ಮೌಲ್ಯಗಳಿಗೆ ತಿಲಾಂಜಲಿ
- ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹ ಮಾಡುವುದು ಅಪರಾಧ ಎಂದು ಹೊಸ ಕಾನೂನು ಹೇಳುತ್ತದೆ
- ಆತ್ಮಹತ್ಯೆ ಮಾಡಿಕೊಳ್ಳುವುದು ಅಪರಾಧವಲ್ಲ ಎಂಬುದು ಸರಿಯಲ್ಲ
- ರಾಷ್ಟ್ರಪಿತ, ರಾಷ್ಟ್ರೀಯ ಲಾಂಛನ, ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸಿದವರ ವಿರುದ್ಧ ಕ್ರಮಕ್ಕೆ ಅವಕಾಶವಿಲ್ಲ ಎಂಬುದು ಹೊಸ ಕಾನೂನಿನ ವಾದ
- ಸಂಘಟಿತ ಅಪರಾಧ ಎಂದು ಆರೋಪಿಸಿ, ವ್ಯಕ್ತಿಗಳ ಮೇಲೆ ಗುಂಪು ಮೊಕದ್ದಮೆ ದಾಖಲಿಸಲು ಪೊಲೀಸರಿಗೆ ವಿವೇಚನಾಧಿಕಾರ ನೀಡಲಾಗಿದೆ
- ಆರೋಪಿಯ ಆಸ್ತಿ ಜಪ್ತಿ ಮಾಡಲು ಪೊಲೀಸರಿಗೆ ಅಧಿಕಾರ (ಮೊದಲು ಆಸ್ತಿ ಜಪ್ತಿ ಮಾಡಲು ನ್ಯಾಯಾಲಯದ ಅನುಮತಿ ಪಡೆಯಬೇಕಿತ್ತು)
- ರಾಷ್ಟ್ರೀಯ ಭಾವೈಕ್ಯಕ್ಕೆ ಧಕ್ಕೆ ತರುವ ಅಪರಾಧಗಳಿಗೆ ಕೇವಲ ಗರಿಷ್ಠ 3 ವರ್ಷ ಶಿಕ್ಷೆ ಅಥವಾ ₹1 ಸಾವಿರ ದಂಡ ಎಂದು ಬದಲಾಯಿಸಲಾಗಿದೆ
- ಯಾವುದೇ ಆರೋಪಿಗಳಿಗೆ ಮೊದಲು 15 ದಿನ ಇದ್ದ ಪೊಲೀಸ್ ಕಸ್ಟಡಿ ಅವಧಿ 90 ದಿನವರೆಗೆ ವಿಸ್ತರಣೆ
- ಮೃತ ದೇಹದ ಮೇಲೆ ಅತ್ಯಾಚಾರ ಎಸಗುವುದು ಅಪರಾಧವಲ್ಲ ಎಂದೂ ಕಾನೂನು ಹೇಳುತ್ತದೆ

‘ಹೊಸ ಕಾನೂನಿಗೆ ಪೂರಕವಾಗಿ ತಂತ್ರಾಂಶ’

‘ಮೂರು ಅಪರಾಧ ಕಾನೂನುಗಳು ಸೋಮವಾರದಿಂದ ಜಾರಿಯಾಗಿವೆ. ಇದನ್ನು ಜಾರಿಗೊಳಿಸುವ ಸಂಬಂಧ ನಾವು ಒಂದು ತಂತ್ರಾಂಶ (ಆ್ಯಪ್) ಅಭಿವೃದ್ಧಿಪಡಿಸಿದ್ದೇವೆ. ಇನ್ನು ಮುಂದೆ ದಾಖಲಾಗುವ ಪ್ರಕರಣಗಳಿಗೆ ಈ ಕಾನೂನುಗಳು ಅನ್ವಯ ಆಗಲಿವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಈ ಕಾನೂನುಗಳ ಪರಿಣಾಮ ಏನು ಎಂದು ಈಗಲೇ ಹೇಳಲು ಆಗಲ್ಲ. ಸ್ವಲ್ಪ ದಿನಗಳ ನಂತರ ಇದರ ಯಶಸ್ಸಿನ ಬಗ್ಗೆ ಗೊತ್ತಾಗಲಿದೆ’ ಎಂದರು.

‘ಸೋಮವಾರದಿಂದ ದಾಖಲಾಗುವ ಎಲ್ಲ ಪ್ರಕರಣಗಳು ಹೊಸ ಕಾನೂನುಗಳಡಿ ಬರುತ್ತವೆ. ಹೊಸ ಕಾನೂನುಗಳ ಜಾರಿ ಬಗ್ಗೆ ಕಾನ್‌ಸ್ಟೆಬಲ್‌ಗಳಿಂದ ಅಧಿಕಾರಿಗಳವರೆಗೂ ತರಬೇತಿ ನೀಡಲಾಗಿದೆ. ಇದಕ್ಕಾಗಿ ಪೊಲೀಸರಿಗೆ ಆ್ಯಪ್ ಸಿದ್ಧಪಡಿಸಲಾಗಿದೆ’ ಎಂದು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9663563555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/– ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526.

ಪ್ರವಾಸ

Travel

27.06.2024ರಿಂದ 4ದಿನಗಳು, ಧರ್ಮಸ್ಥಳ,ಹೊರನಾಡು,ಶೃಂಗೇರಿ, ಕೊಲ್ಲೂರು,ಮುಕಾಂಬಿಕೆ, ಮುರಡೇಶ್ವರ,ಮಲ್ಪೆಬೀಚ್.14.07.2024 ರಿಂದ8 ದಿನಗಳು,ಉಜ್ಜಯಿನಿ, ಓಂಕಾರೇಶ್ವರ,ಶಿರಡಿ,ಭೀಮಾಶಂಕರ , ತ್ರೈಂಬುಕೇಶ್ವರ, ತುಳಜಾಪುರ,ಎಲ್ಲೋರ, ಪಂಡರಾಪುರ. 14.07.2024 ರಿಂದ4 ದಿನಗಳು,ರಾಮೇಶ್ವರ,ಕನ್ಯಾ ಕುಮಾರಿ, ಮಧುರೈ,ಶ್ರೀರಂಗ. 25.7.2024 ರಿಂದ 5ದಿನಗಳು ಕಾಶಿ,ಅಯೋಧ್ಯ,ಗಯಾ, 17.09.2024ರಿಂದ13 ದಿನಗಳು, ಚಾರದಾಮಪ್ರವಾಸ,ಕೇದಾರನಾಥ , ಬದರಿನಾಥ, ಗಂಗೋತ್ರಿ, ಯಮನೋತ್ರಿ,ದೆಹಲಿ,ಹರಿದ್ವಾರ್ ಶ್ರೀಗುರುರಾಜ ಟ್ರಾವೆಲ್ಸ್,,ಕೋಲಾರ. 9611082432, 9449652555, 8123099913

ಸುವರ್ಣ ಯಾತ್ರ ಕಾಶಿ ಪ್ರವಾಸ ಎರಡು ಜ್ಯೋತಿರ್ಲಿಂಗ ಸೇರಿ 23/7/24. ನೇಪಾಳ ಮುಕ್ತಿನಾಥ, ಪಶುಪತಿನಾಥ, ಅಯೋಧ್ಯ ಪ್ರವಾಸ 27/7/24. :8660233673

14.07.2024, 4ದಿನಗಳು ಬಾದಾಮಿ,ಕೂಡಲಸಂಗಮ, ಸವದತ್ತಿ,ಆಲಮಟ್ಟಿ,ಬಿಜಾಪುರ ಇತ್ಯಾದಿ. 20.07.2024, 2ದಿನಗಳು ಕೆಮ್ಮಣ್ಣುಗುಂಡಿ, ಮುಳ್ಳಯ್ಯನಗಿರಿ, ಬಾಬಾಬುಡನಗಿರಿ,ಹೆಬ್ಬೆಫಾಲ್ಸ್ ಇತ್ಯಾದಿ. 23.07.2024, 4ದಿನಗಳು ಮಂತ್ರಾಲಯ, ಶ್ರೀಶೈಲ, ಮಹಾನಂದಿ,ಅಹೋಬಲ, ಯಾಗಂಟಿ ಇತ್ಯಾದಿ.10.08.2024, 2ದಿನಗಳು ಯಾಣ,ಸಿರಸಿಮಾರಿಕಾಂಬ, ಬನವಾಸಿ, ಸಹಸ್ರಲಿಂಗ,ಸೋಂದಾ. ಇತ್ಯಾದಿ 9481433157

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
*Conditions apply
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036
9731810277
9901641752
9845114560
080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

‘ನೀಟ್: ವೃತ್ತಿಪರ ಪರೀಕ್ಷೆಯಲ್ಲ, ವ್ಯಾಪಾರ’

ಶ್ರೀಮಂತರ ಮಕ್ಕಳಿಗಾಗಿ ರೂಪಿಸಿದ ಪರೀಕ್ಷೆ • ಸರ್ಕಾರಕ್ಕೆ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಆಸಕ್ತಿ ಇಲ್ಲ– ರಾಹುಲ್ ಟೀಕೆ

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ‘ನೀಟ್‌-ಯುಜಿ’ ವೃತ್ತಿಪರ ಪರೀಕ್ಷೆಯಲ್ಲ, ಬದಲಿಗೆ ಅದು ಶ್ರೀಮಂತರಿಗಾಗಿ ವಿನ್ಯಾಸಗೊಳಿಸಿರುವ ‘ವ್ಯಾಪಾರ’ ಪರೀಕ್ಷೆಯಾಗಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ರಾಹುಲ್ ಗಾಂಧಿ

ಲೋಕಸಭೆಯಲ್ಲಿ ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯ ವೇಳೆ ಅವರು ನೀಟ್ ಅಕ್ರಮಗಳ ಕುರಿತು ಪ್ರಸ್ತಾಪಿಸಿದರು.

‘ನೀಟ್ ಅನ್ನು ಶ್ರೀಮಂತ ವಿದ್ಯಾರ್ಥಿಗಳಿಗೆ ಸರಿಹೊಂದುವಂತೆ ವಿನ್ಯಾಸಗೊಳಿಸಲಾಗಿದೆಯೇ ಹೊರತು ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಅಲ್ಲ ಎಂಬ ಭಾವನೆ ವಿದ್ಯಾರ್ಥಿಗಳಲ್ಲಿದೆ. ಹೀಗಾಗಿ ಅವರಿಗೆ ನೀಟ್ ಬಗ್ಗೆ ನಂಬಿಕೆಯೇ ಇಲ್ಲದಂತಾಗಿದೆ’ ಎಂದರು.

ಈ ವರ್ಷದ ನೀಟ್ ಅಕ್ರಮಗಳ ಕುರಿತು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಏಳು ವರ್ಷಗಳಲ್ಲಿ 70 ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ನಡೆದಿವೆ. ಆದರೆ, ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಆಸಕ್ತಿಯೇ ಇಲ್ಲದ ಸರ್ಕಾರ, ಈ ಬಗ್ಗೆ ಚರ್ಚೆಗೆ ಅವಕಾಶ ನೀಡುತ್ತಿಲ್ಲ ಎಂದು ಕಿಡಿಕಾರಿದರು.

‘ನೀಟ್ ವಿದ್ಯಾರ್ಥಿಗಳು ಪರೀಕ್ಷೆಗಾಗಿ ವರ್ಷಗಟ್ಟಲೆ ತಯಾರಿ ನಡೆಸಿರುತ್ತಾರೆ. ಅವರ ಕುಟುಂಬದವರು ಆರ್ಥಿಕ ಮತ್ತು ಭಾವನಾತ್ಮಕ ಬೆಂಬಲ ನೀಡಿರುತ್ತಾರೆ. ಆದರೆ ನಿಜವೇನೆಂದರೆ, ನೀಟ್ ಬರೆಯುವ ಬಹುತೇಕ ವಿದ್ಯಾರ್ಥಿಗಳು ಈ ಪರೀಕ್ಷೆಯು ಶ್ರೀಮಂತರಿಗಾಗಿ ವಿನ್ಯಾಸಗೊಳಿಸಲಾಗಿದೆ ಎಂದು ನಂಬುತ್ತಾರೆ. ನಾನು ಭೇಟಿ ಮಾಡಿದ ಬಹುತೇಕ ವಿದ್ಯಾರ್ಥಿಗಳದ್ದು ಇದೇ ಅಭಿಪ್ರಾಯವಾಗಿದೆ’ ಎಂದು ರಾಹುಲ್ ತಿಳಿಸಿದರು.

ನೀಟ್‌ನಲ್ಲಿ ವಿದ್ಯಾರ್ಥಿ ಹೆಚ್ಚು ಅಂಕಗಳನ್ನು ಪಡೆದು ಉನ್ನತ ಸ್ಥಾನ ಪಡೆಯಬಹುದು. ಆದರೆ, ಹಣವಿಲ್ಲದಿದ್ದರೆ ಅವರು ವೈದ್ಯಕೀಯ ಕಾಲೇಜಿಗೆ ಹೋಗಲು ಸಾಧ್ಯವಿಲ್ಲ. ಇಡೀ ಪರೀಕ್ಷೆಯನ್ನು ಶ್ರೀಮಂತ ವಿದ್ಯಾರ್ಥಿಗಳಿಗೆ ‘ಕಸ್ಟಮೈಸ್’ ಆಗಿ ರೂಪಿಸಲಾಗಿದೆ. ಸಂಪೂರ್ಣ ಪರೀಕ್ಷೆಯನ್ನು ಕೇಂದ್ರೀಕರಿಸಲಾಗಿದೆ. ಇದರಲ್ಲಿ ಸಹಸ್ರಾರು ಕೋಟಿ ರೂಪಾಯಿಗಳು ಹರಿದಾಡುತ್ತಿವೆ, ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗುತ್ತಿವೆ, ಅಕ್ರಮಗಳು ನಡೆಯುತ್ತಿವೆ ಎಂದು ಅವರು ಹರಿಹಾಯ್ದರು.

ಚರ್ಚೆಗೆ ಆಗ್ರಹ, ಸಭಾತ್ಯಾಗ: ಲೋಕಸಭೆಯಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ‘ನೀಟ್’ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರವಾಗಿ ಪ್ರತ್ಯೇಕವಾಗಿ ಒಂದು ದಿನದ ಚರ್ಚೆಗೆ ಆಗ್ರಹಿಸಿದ ವಿರೋಧ ಪಕ್ಷಗಳ ಸದಸ್ಯರು ಈ ಕುರಿತು ಸರ್ಕಾರದಿಂದ ಸ್ಪಷ್ಟ ಭರವಸೆಗೆ ಒತ್ತಾಯಿಸಿ ಸಭಾತ್ಯಾಗ ಮಾಡಿದರು.

ಕಲಾಪದ ಆರಂಭದಲ್ಲಿ ರಾಹುಲ್ ಗಾಂಧಿ ಅವರು ನೀಟ್ ಅಕ್ರಮಗಳ ಕುರಿತ ವಿಷಯ ಪ್ರಸ್ತಾಪಿಸಿದರು. ‘ನಾವು ನೀಟ್ ಕುರಿತು ಒಂದು ದಿನದ ಚರ್ಚೆ ಬಯಸಿದ್ದೇವೆ. ಇದು ಅತ್ಯಂತ ಪ್ರಮುಖ ವಿಷಯ. ಎರಡು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದಾರೆ. ನಾವು ಸಂಸತ್ತಿನಿಂದ ವಿದ್ಯಾರ್ಥಿಗಳಿಗೆ ಸಂದೇಶ ರವಾನಿಸಬಹುದಾಗಿದೆ’ ಎಂದರು.

ರಕ್ಷಣಾ ಸಚಿವ ರಾಜನಾಥ ಸಿಂಗ್ ಮಾತನಾಡಿ, ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ ಮುಗಿಯುವವರೆಗೆ ಸದನದಲ್ಲಿ ಪ್ರತ್ಯೇಕ ವಿಷಯದ ಮೇಲೆ ಚರ್ಚೆ ನಡೆಸಲು ಆಗುವುದಿಲ್ಲ ಎಂದರು. ವಂದನಾ ನಿರ್ಣಯ ಅಂಗೀಕಾರವಾದ ಬಳಿಕ ಇತರ ವಿಷಯಗಳನ್ನು ಪ್ರಸ್ತಾಪಿಸಬಹುದು ಎಂದು ಸಿಂಗ್ ಹೇಳಿದರು.

‘ವಂದನಾ ನಿರ್ಣಯದ ಮೇಲಿನ ಚರ್ಚೆ ವೇಳೆ ಬೇರೆ ವಿಷಯಗಳನ್ನು ಚರ್ಚಿಸುವ ಸಂಪ್ರದಾಯವಿಲ್ಲ’ ಎಂದ ಸ್ಪೀಕರ್ ಓಂ ಬಿರ್ಲಾ ಅವರು, ನೀಟ್ ಮೇಲಿನ ಚರ್ಚೆಗೆ ಸದಸ್ಯರು ಪ್ರತ್ಯೇಕ ನೋಟಿಸ್ ನೀಡಬಹುದು ಎಂದರು.

ಈ ಕುರಿತು ಸರ್ಕಾರದಿಂದ ಸ್ಪಷ್ಟ ಭರವಸೆ ಅಗತ್ಯವಿದೆ ಎಂದು ಪಟ್ಟು ಹಿಡಿದ ಪ್ರತಿಪಕ್ಷದ ಸದಸ್ಯರು, ಬಳಿಕ ಸಭಾತ್ಯಾಗ ಮಾಡಿದರು.

ಒಎಂಆರ್ ಶೀಟ್ ದುರ್ಬಳಕೆ: ವಿಚಾರಣೆ ಮುಂದೂಡಿಕೆ

ನವದೆಹಲಿ (ಪಿಟಿಐ): ‘ನೀಟ್– ಯುಜಿ’ ಪರೀಕ್ಷೆಯಲ್ಲಿ ಒಎಂಆರ್ ಶೀಟ್ ದುರ್ಬಳಕೆಯಾಗಿದೆ ಎಂದು ಆರೋಪಿಸಿ ಅಭ್ಯರ್ಥಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಎರಡು ವಾರಗಳ ನಂತರ ತೆಗೆದುಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ನ್ಯಾಯಮೂರ್ತಿಗಳಾದ ಸಿ.ಟಿ.ರವಿಕುಮಾರ್ ಮತ್ತು ಮನೋಜ್ ಮಿಶ್ರಾ ಅವರು ಇದ್ದ ರಜಾಕಾಲದ ಪೀಠದ ಮುಂದೆ ಅರ್ಜಿ ವಿಚಾರಣೆಗೆ ಬಂದಿತ್ತು.

ತಮ್ಮ ಅರ್ಜಿದಾರ ಒಎಂಆರ್ ಶೀಟ್ ಅನ್ನು ಬದಲಿಸಲಾಗಿದೆ ಎಂದು ವಕೀಲರು ಆರೋಪಿಸಿದರು. ಅರ್ಜಿ ಪರಿಶೀಲಿಸಿದ ಪೀಠವು, ಅರ್ಜಿದಾರರು ಜೂನ್ 23ರ ಮರು ಪರೀಕ್ಷೆಗೆ ಹಾಜರಾಗಲು ಅನುಮತಿ ಕೋರಿದ್ದಾರೆ. ಆದರೆ ಮರು ಪರೀಕ್ಷೆ ಮುಗಿದು ಹೋಗಿದೆಯಲ್ಲ ಎಂದು ಹೇಳಿತು. ನೀಟ್ ಪರೀಕ್ಷಾ ಅಕ್ರಮಗಳಿಗೆ ಸಂಬಂಧಿಸಿದ ಇತರ ಅರ್ಜಿಗಳು ಹಾಗೂ ಮೇ 5ರಂದು ನಡೆದಿದ್ದ ನೀಟ್ ಪರೀಕ್ಷೆಯ ರದ್ದತಿಗೆ ಕೋರಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇವೆ ಎಂದು ವಕೀಲರು ಪೀಠಕ್ಕೆ ತಿಳಿಸಿದರು.

ಅರ್ಜಿಯನ್ನು ಮುಂದಿನ ವಾರ ವಿಚಾರಣೆಗೆ ಪಟ್ಟಿ ಮಾಡುವುದಾಗಿ ಪೀಠ ಆರಂಭದಲ್ಲಿ ಹೇಳಿತ್ತು. ಆದರೆ, ಎನ್‌ಟಿಎ ಪರ ಹಾಜರಾದ ವಕೀಲರು ಎರಡು ವಾರಗಳ ಬಳಿಕ ವಿಚಾರಣೆಗೆ ಪಟ್ಟಿ ಮಾಡುವಂತೆ ಮನವಿ ಮಾಡಿದರು. ಅದನ್ನು ಪೀಠ ಮಾನ್ಯ ಮಾಡಿತು.

ಜೂನ್ 27ರಂದು ನಡೆದ ಪ್ರತ್ಯೇಕ ಅರ್ಜಿಯ ವಿಚಾರಣೆ ವೇಳೆ, ಸುಪ್ರೀಂ ಕೋರ್ಟ್ ಒಎಂಆರ್ ಶೀಟ್‌ಗಳ ಕುರಿತು ಕುಂದುಕೊರತೆಗಳನ್ನು ಸಲ್ಲಿಸಲು ಅಭ್ಯರ್ಥಿಗಳಿಗೆ ಸಮಯದ ಮಿತಿ ನಿಗದಿಪಡಿಸಲಾಗಿತ್ತೇ ಎಂದು ಎನ್‌ಟಿಎ ಅನ್ನು ಕೇಳಿತ್ತು. ಪರೀಕ್ಷೆಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಇತರ ಅರ್ಜಿಗಳು ಇದೇ 8ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿವೆ.

ಸಂಸತ್ತಿನೆಡೆಗೆ ವಿದ್ಯಾರ್ಥಿಗಳ ನಡಿಗೆ

‘ನೀಟ್‌-ಯುಜಿ’, ‘ಯುಜಿಸಿ–ನೆಟ್’ ಪರೀಕ್ಷಾ ಅಕ್ರಮಗಳನ್ನು ವಿರೋಧಿಸಿ ಇಲ್ಲಿನ ಜಂತರ್ ಮಂತರ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ನಡೆಸುತ್ತಿರುವ ವಿದ್ಯಾರ್ಥಿಗಳು, ತಮ್ಮ ಬೇಡಿಕೆಗಳಿಗೆ ಆಗ್ರಹಿಸಿ ಮಂಗಳವಾರ ಸಂಸತ್ತಿನತ್ತ ಪ್ರತಿಭಟನಾ ಮೆರವಣಿಗೆ ನಡೆಸಲು ಕರೆ ನೀಡಿದ್ದಾರೆ.

‘ಎನ್‌ಟಿಎ ವಿರುದ್ಧ ಭಾರತ’ ಎಂಬ ಬ್ಯಾನರ್ ಅಡಿ ವಿದ್ಯಾರ್ಥಿಗಳು ಕಳೆದ ಬುಧವಾರದಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಎನ್‌ಟಿಎ ನಿಷೇಧ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿದ್ದ ವಿದ್ಯಾರ್ಥಿಗಳು, ನೀಟ್ ಮರು ಪರೀಕ್ಷೆಗೆ ಒತ್ತಾಯಿಸಿದ್ದಾರೆ.

ವಿದ್ಯಾರ್ಥಿ ಸಂಘಟನೆಗಳಾದ ಎಐಎಸ್‌ಎ, ದೆಹಲಿ ವಿಶ್ವವಿದ್ಯಾಲಯದ ಕೆವೈಎಸ್ ಸಂಘಟನೆಯ ಸದಸ್ಯರು ಸೇರಿದಂತೆ ವಿವಿಧ ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಪ್ರತಿಭಟನೆಯಲ್ಲಿ ಕೈಜೋಡಿಸಿದ್ದಾರೆ.

ತನಿಖಾ ಸಂಸ್ಥೆಗಳ ದುರ್ಬಳಕೆ ನಿಲ್ಲಿಸಿ: ‘ಇಂಡಿಯಾ’ ಆಗ್ರಹ

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ‘ಇಂಡಿಯಾ’ ಮೈತ್ರಿಕೂಟದ ಹಲವು ಸಂಸದರು ಸಂಸತ್ತಿನ ಆವರಣದಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ‘ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿ ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ’ ಎಂದು ಆರೋಪಿಸಿ ‘ಇಂಡಿಯಾ’ ಮೈತ್ರಿಕೂಟದ ಸಂಸದರು ಸಂಸತ್ತಿನ ಆವರಣದಲ್ಲಿರುವ ಮಕರ ದ್ವಾರದ ಮೆಟ್ಟಿಲುಗಳ ಮೇಲೆ ಸೋಮವಾರ ಪ್ರತಿಭಟನೆ ನಡೆಸಿದರು.

‘ವಿರೋಧ ಪಕ್ಷದ ನಾಯಕರನ್ನು ಸುಮ್ಮನಿರಿಸಲು ತನಿಖಾ ಸಂಸ್ಥೆಗಳ ದುರುಪಯೋಗ ಮಾಡಿಕೊಳ್ಳುವುದನ್ನು ನಿಲ್ಲಿಸಿ’, ‘ಬಿಜೆಪಿಯನ್ನು ಸೇರಿಕೊಳ್ಳಿ, ಭ್ರಷ್ಟಾಚಾರ ಎಸಗಲು ಪರವಾನಗಿ ಪಡೆಯಿರಿ’ ಎಂಬ ಬರಹಗಳಿರುವ ಫಲಕಗಳನ್ನು ನಾಯಕರು ಹಿಡಿದುಕೊಂಡಿದ್ದರು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸರಳುಗಳ ಹಿಂದಿರುವ ಪೋಸ್ಟರ್ ಅನ್ನು ಎಎಪಿ ಸಂಸದ ರಾಘವ್ ಚಡ್ಡಾ ಹಿಡಿದುಕೊಂಡಿದ್ದರು.

ಬಂಧನದಲ್ಲಿರುವ ಪಶ್ಚಿಮ ಬಂಗಾಳದ ಮೂವರು ಸಚಿವರನ್ನು ಬಿಡುಗಡೆಗೊಳಿಸಿ, ‘ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹಾಗೂ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ ಸೊರೇನ್ ಅವರ ವಿರುದ್ಧ ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ನಿಲ್ಲಿಸಿ’ ಎಂದು ನಾಯಕರು ಘೋಷಣೆಗಳನ್ನು ಕೂಗಿದರು. ಕೇಜ್ರಿವಾಲ್ ಅವರ ನ್ಯಾಯಾಂಗ ಬಂಧನದ ಅವಧಿಯನ್ನು ಕೆಲವು ದಿನಗಳ ಹಿಂದೆ ಜುಲೈ 12ರವರೆಗೆ ವಿಸ್ತರಿಸಲಾಗಿತ್ತು.

ರಾಹುಲ್ ಅಬ್ಬರ: ಸದನದಲ್ಲಿ ಸಮರ

ಒಂದನೇ ಪುಟದಿಂದ...

ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮತ್ತು ಬಿಜೆಪಿ ಮುಖಂಡ ಸುಧಾಂಶು ತ್ರಿವೇದಿ ಜಂಟಿ ಪತ್ರಿಕಾಗೋಷ್ಠಿ ನಡೆಸಿ ರಾಹುಲ್ ಹೇಳಿಕೆಯನ್ನು ಖಂಡಿಸಿದರು.

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ರಾಹುಲ್ ಸುಮಾರು 100 ನಿಮಿಷಗಳ ಮಾತನಾಡಿದರು. ರಾಹುಲ್ ಭಾಷಣವನ್ನು ತಾಯಿ ಸೋನಿಯಾ ಗಾಂಧಿ ಹಾಗೂ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಸಂದರ್ಶಕರ ಗ್ಯಾಲರಿಯಲ್ಲಿ ಕುಳಿತು ವೀಕ್ಷಿಸಿದರು.

ವಿಪಕ್ಷ ನಾಯಕ ಭಾಷಣ ಆರಂಭಿಸುತ್ತಿದ್ದಂತೆ ಬಿಜೆಪಿ ಸದಸ್ಯರು ‘ಭಾರತ್ ಮಾತಾಕಿ ಜೈ’, ‘ಮೋದಿ ಮೋದಿ’ ಎಂಬ ಘೋಷಣೆಗಳನ್ನು ಕೂಗಿದರು. ಬಳಿಕ ‘ಜೈ ಸಂವಿಧಾನ’ ಎಂದೂ ಸೇರಿಸಿದರು. ಸಂವಿಧಾನ ಪ್ರತಿ ಪ್ರದರ್ಶಿಸಿದ ರಾಹುಲ್, ಬಿಜೆಪಿ ಮುಖಂಡರ ಬಾಯಲ್ಲಿ ‘ಜೈ ಸಂವಿಧಾನ’ ಎಂಬ ಹೇಳಿಕೆ ಬರುವಂತೆ ಮಾಡಿದ್ದೇವೆ. ಇದು ನಮ್ಮ ಸಾಧನೆ’ ಎಂದು ಪ್ರತಿಪಾದಿಸಿದರು.

ಶಿವನ ಚಿತ್ರ ಪ್ರದರ್ಶಿಸಿ ಅವರು ಮಾತು ಮುಂದುವರಿಸಿದರು. ಆಗ ಲೋಕಸಭಾಧ್ಯಕ್ಷ ಓಂ ಬಿರ್ಲಾ, ‘ನಿಯಮಗಳ ಪ್ರಕಾರ ಸದನದಲ್ಲಿ ಚಿತ್ರಗಳನ್ನು ಪ್ರದರ್ಶಿಸುವಂತಿಲ್ಲ’ ಎಂದು ಸೂಚಿಸಿದರು. ‘ಶಿವನ ಈ ಚಿತ್ರವು ಅಹಿಂಸೆಯ ಸಂದೇಶ ನೀಡುತ್ತದೆ. ಶಿವ ಇಡೀ ದೇಶದ ಜನರ ಹೃದಯದಲ್ಲಿದ್ದಾನೆ’ ಎಂದು ರಾಹುಲ್ ವ್ಯಾಖ್ಯಾನಿಸಿದರು. ಭಗವಾನ್ ಶಿವನ ಗುಣಲಕ್ಷಣಗಳನ್ನು, ಗುರುನಾನಕ್, ಬುದ್ಧ ಮತ್ತು ಮಹಾವೀರರ ಬೋಧನೆಗಳನ್ನು ಉಲ್ಲೇಖಿಸಿದ ಅವರು, ‘ದೇಶದ ಎಲ್ಲ ಧರ್ಮಗಳು ಮತ್ತು ಮಹಾನ್ ವ್ಯಕ್ತಿಗಳು ಹೆದರಬೇಡಿ, ಇತರರನ್ನು ಹೆದರಿಸಬೇಡಿ’ ಎಂದು ಹೇಳಿದ್ದಾರೆ’ ಎಂದು ನೆನಪಿಸಿದರು.

ಅಗ್ನಿಪಥ ಜಟಾಪಟಿ

ಒಂದನೇ ಪುಟದಿಂದ...

ರಕ್ಷಣಾ ಸಚಿವ ರಾಜನಾಥ ಸಿಂಗ್ ಮಧ್ಯಪ್ರವೇಶಿಸಿ ರಾಹುಲ್ ಆರೋಪವನ್ನು ತಳ್ಳಿ ಹಾಕಿದರು. ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಮೃತಪಟ್ಟ ಅಗ್ನಿವೀರರಿಗೆ ಸರ್ಕಾರ ₹1 ಕೋಟಿ ಪರಿಹಾರ ನೀಡುತ್ತದೆ ಎಂದು ಸಮಜಾಯಿಷಿ ನೀಡಿದರು. ‘ಈ ಸದನವಿರುವುದು ಸುಳ್ಳುಗಳನ್ನು ಹರಡಲು ಅಲ್ಲ. ರಾಹುಲ್ ಅವರು ದೇಶದ ಹಾಗೂ ಅಗ್ನಿವೀರರ ಕ್ಷಮೆಯಾಚಿಸಬೇಕು’ ಎಂದು ಆಗ್ರಹಿಸಿದರು.

ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಮೇಲೆ ಕಾನೂನು ಖಾತರಿ ನೀಡಲು ಬಿಜೆಪಿ ಸರ್ಕಾರ ಬಯಸುವುದಿಲ್ಲ ಎಂದು ವಿಪಕ್ಷ ನಾಯಕ ಟೀಕಿಸಿದರು. ಈ ಹೇಳಿಕೆಯನ್ನು ವಿರೋಧಿಸಿದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ‘ಸದನವನ್ನು ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ’ ಎಂದರು.

> **ವಿರೋಧ ಪಕ್ಷದಲ್ಲಿರುವುದಕ್ಕೆ ನನಗೆ ಸಂತೋಷ ಮತ್ತು ಹೆಮ್ಮೆ ಇದೆ. ಅಧಿಕಾರಕ್ಕಿಂತ ಮಿಗಿಲಾದದ್ದು ಇದೆ, ಅದುವೇ ಸತ್ಯ. ಬಿಜೆಪಿಗೆ ಬೇಕಾಗಿರುವುದು ಅಧಿಕಾರವೊಂದೇ**
> **ರಾಹುಲ್ ಗಾಂಧಿ,** ವಿಪಕ್ಷ ನಾಯಕ

‘10 ವರ್ಷಗಳಿಂದ ಭಾರತದ ಪರಿಕಲ್ಪನೆ ಹಾಗೂ ಸಂವಿಧಾನದ ಮೇಲೆ ಬಿಜೆಪಿ ನಿರಂತರ ದಾಳಿ ನಡೆಸಿದೆ. ಬಿಜೆಪಿಯ ಸಿದ್ಧಾಂತವನ್ನು ಲಕ್ಷಾಂತರ ಮಂದಿ ವಿರೋಧಿಸಿದ್ದಾರೆ. ವಿರೋಧ ಪಕ್ಷಗಳ ಹಲವು ನಾಯಕರು ಜೈಲಿನಲ್ಲಿದ್ದಾರೆ. ಇನ್ನು ಕೆಲವರು ಈಚೆಗೆ ಬಂದಿದ್ದಾರೆ. ಸಂವಿಧಾನದ ಉಳಿವಿಗಾಗಿ ನಮ್ಮ ಹೋರಾಟ ನಿರಂತರ’ ಎಂದು ಹೇಳಿದರು.

‘ಇದು ಅಹಿಂಸೆಯ ದೇಶ. ಭಯದ ದೇಶವಲ್ಲ. ಎಲ್ಲ ಧರ್ಮಗಳು ಮತ್ತು ನಮ್ಮ ಎಲ್ಲ ಮಹಾಪುರುಷರು ಅಹಿಂಸೆ ಮತ್ತು ನಿರ್ಭೀತಿ ಬಗ್ಗೆ ಮಾತನಾಡಿದ್ದಾರೆ. ಆದರೆ, ತಮ್ಮನ್ನು ತಾವು ಹಿಂದೂಗಳು ಎಂದು ಕರೆದುಕೊಳ್ಳುವವರು ಹಿಂಸೆ, ದ್ವೇಷ ಮತ್ತು ಸುಳ್ಳಿನ ಬಗ್ಗೆ ಮಾತ್ರ ಮಾತನಾಡುತ್ತಾರೆ’ ಎಂದ ಅವರು, ‘ಆಪ್ ಹಿಂದೂ ಹೋ ಹಿ ನಹೀ (ನೀವು ಹಿಂದೂಗಳಲ್ಲ)’ ಎಂದು ಬಿಜೆಪಿ ಸದಸ್ಯರಿಗೆ ಛೇಡಿಸಿದರು.

ಈ ಮಾತಿಗೆ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಸದನದಲ್ಲಿ ಕೋಲಾಹಲ ಸೃಷ್ಟಿಯಾಯಿತು. ರಾಹುಲ್ ಹೇಳಿಕೆಯನ್ನು ಪ್ರಧಾನಿ ಖಂಡಿಸಿದರು. ಕೋಟ್ಯಂತರ ಹಿಂದೂಗಳನ್ನು ಅವಮಾನಿಸಿದ್ದಕ್ಕಾಗಿ ರಾಹುಲ್ ಅವರು ಸದನ ಹಾಗೂ ದೇಶದ ಕ್ಷಮೆಯಾಚಿಸಬೇಕು ಎಂದು ಗೃಹ ಸಚಿವ ಅಮಿತ್ ಶಾ ಆಗ್ರಹಿಸಿದರು.

ತುರ್ತು ಪರಿಸ್ಥಿತಿ ಹಾಗೂ 1984ರ ಸಿಖ್ ವಿರೋಧಿ ದಂಗೆ ಬಗ್ಗೆ ಪ್ರಸ್ತಾಪಿಸಿದ ಶಾ, ‘ದೇಶದಲ್ಲಿ ಭಯೋತ್ಪಾದನೆ ಹರಡಿದ್ದು ಕಾಂಗ್ರೆಸ್. ಅಹಿಂಸೆ ಬಗ್ಗೆ ಮಾತನಾಡಲು ರಾಹುಲ್‌ಗೆ ಯಾವುದೇ ಹಕ್ಕಿಲ್ಲ’ ಎಂದರು. ಸಚಿವರಾದ ಕಿರಣ್ ರಿಜಿಜು ಮತ್ತು ಭೂಪೇಂದರ್ ಯಾದವ್ ಅವರು ರಾಹುಲ್ ಭಾಷಣದ ವಿವಿಧ ಹಂತಗಳಲ್ಲಿ ಮಧ್ಯಪ್ರವೇಶಿಸಿ ತಗಾದೆ ಎತ್ತಿದರು.

ಬಿಜೆಪಿ ಸದಸ್ಯರು ಗದ್ದಲ ತೀವ್ರಗೊಳಿಸಿದಾಗ ರಾಹುಲ್ ಅವರು ಕೈಯಲ್ಲಿ ‘ಅಭಯ ಮುದ್ರೆ’ ಸಂಜ್ಞೆ ಮಾಡಿ ತೋರಿಸಿದರು. ಅಯೋಧ್ಯೆ ಬಗ್ಗೆ ಉಲ್ಲೇಖಿಸುವಾಗ ಫೈಜಾಬಾದ್ ಸಂಸದ ಅವಧೇಶ್ ಪ್ರಸಾದ್ ಅವರ ಕೈಕುಲುಕಿ ಅಭಿನಂದಿಸಿದರು.

‘ವೈವಿಧ್ಯದ ಮಧ್ಯೆಯೂ ದೇಶ ಒಗ್ಗೂಡಿ ನಿಂತಿದೆ’

ಗಾಜೀಪುರ (ಪಿಟಿಐ): ‘ಇಷ್ಟೊಂದು ವೈವಿಧ್ಯದ ಮಧ್ಯೆಯೂ ದೇಶವು ಸಾವಿರಾರು ವರ್ಷಗಳಿಂದ ಒಂದು ದೇಶವಾಗಿಯೇ ನಿಂತಿದೆ. ಪಾಕಿಸ್ತಾನ ಇರಬಹುದು ಚೀನಾ ಇರಬಹುದು, ಯಾರೇ ನಡೆಸಿದ ದಾಳಿಯನ್ನು ದೇಶವು ಒಂದುಗೂಡಿ ಎದುರಿಸಿದೆ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಸೋಮವಾರ ಅಭಿಪ್ರಾಯಪಟ್ಟರು.

ಇಂಡಿಯಾ ಮತ್ತು ಪಾಕಿಸ್ತಾನದ ನಡುವೆ 1965ರಲ್ಲಿ ನಡೆದ ಯುದ್ಧದಲ್ಲಿ ಹುತಾತ್ಮರಾದ ಗಾಜೀಪುರದ ಅಬ್ದುಲ್ ಹಮೀದ್ ಅವರ ಕುರಿತ ‘ಮೇರೆ ಪಾಪಾ ಪರಂವೀರ್’ (ಪರಮ ವೀರನಾಗಿರುವ ನನ್ನ ತಂದೆ) ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವತ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದರು. ಹಮೀದ್ ಅವರ ಶೌರ್ಯಕ್ಕೆ ಅವರಿಗೆ ಮರಣೋತ್ತರ ‘ಪರಮವೀರ ಚಕ್ರ’ವನ್ನು ನೀಡಿ ಗೌರವಿಸಲಾಗಿದೆ.

ಈ ಬಾರಿ ಶೇ 106ರಷ್ಟು ಮಳೆ ಬೀಳುವುದಾಗಿ ಅಂದಾಜು: ಹವಾಮಾನ ಇಲಾಖೆ

ಜುಲೈ: ವಾಡಿಕೆಗಿಂತ ಅಧಿಕ ಮಳೆ ಸಾಧ್ಯತೆ

ನವದೆಹಲಿ (ಪಿಟಿಐ): ಈಶಾನ್ಯ ಭಾರತದ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ದೇಶದಲ್ಲಿ ಜುಲೈ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ನಿರೀಕ್ಷಿಸಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಸೋಮವಾರ ತಿಳಿಸಿದೆ.

ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಎಂಡಿ ಮುಖ್ಯಸ್ಥ ಮೃತ್ಯುಂಜಯ್ ಮಹಾಪಾತ್ರ, ‘ಜುಲೈನಲ್ಲಿ ಮಳೆಯ ದೀರ್ಘಾವಧಿ ಸರಾಸರಿ 28.04 ಸೆಂ.ಮೀ. ಇದೆ. ಈ ಬಾರಿ ಶೇ 106ರಷ್ಟು ಮಳೆ ಬೀಳುವುದಾಗಿ ಅಂದಾಜಿಸಲಾಗಿದೆ’ ಎಂದು ಹೇಳಿದರು.

‘ಈಶಾನ್ಯ ಭಾರತ, ವಾಯವ್ಯ ಭಾಗದ ಕೆಲವು ಪ್ರದೇಶಗಳು, ಪೂರ್ವ ಮತ್ತು ಆಗ್ನೇಯ ಭಾಗದ ಕೆಲವು ಪ್ರದೇಶಗಳು ಹೊರತುಪಡಿಸಿ ದೇಶದಾದ್ಯಂತ ವಾಡಿಕೆಯಷ್ಟು ಹಾಗೂ ವಾಡಿಕೆಗಿಂತ ಅಧಿಕ ಮಳೆ ಬೀಳಲಿದೆ’ ಎಂದು ಮಾಹಿತಿ ನೀಡಿದರು.

ಅಸ್ಸಾಂನ ಮೊರಿಗಾಂವ್ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ಜನರು ತಮ್ಮ ಅಗತ್ಯ ವಸ್ತುಗಳೊಂದಿಗೆ ದೋಣಿಯಲ್ಲಿ ಸುರಕ್ಷಿತ ಪ್ರದೇಶಕ್ಕೆ ತೆರಳಿದರು –ಪಿಟಿಐ ಚಿತ್ರ

ಜುಲೈ ತಿಂಗಳಲ್ಲಿ ಪಶ್ಚಿಮ ಕರಾವಳಿ ಹೊರತುಪಡಿಸಿ ವಾಯವ್ಯ ಭಾರತ ಮತ್ತು ದಕ್ಷಿಣ ಭಾರತದ ಬಹುತೇಕ ಭಾಗಗಳಲ್ಲಿ ಗರಿಷ್ಠ ತಾಪಮಾನವು ವಾಡಿಕೆಯಷ್ಟು ಹಾಗೂ ವಾಡಿಕೆಗಿಂತ ತುಸು ಕಡಿಮೆ ಇರಲಿದೆ. ಕೇಂದ್ರ ಭಾರತ, ಪೂರ್ವ ಮತ್ತು ಈಶಾನ್ಯ ಭಾರತ ಹಾಗೂ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಗರಿಷ್ಠ ತಾಪಮಾನ ವಾಡಿಕೆಗಿಂತ ಹೆಚ್ಚು ಇರಲಿದೆ ಎಂದು ಐಎಂಡಿ ಅಂದಾಜಿಸಿದೆ.

ವಾಯವ್ಯ ಭಾರತ, ಕೇಂದ್ರ ಭಾರತಕ್ಕೆ ಹೊಂದಿಕೊಂಡಿರುವ ಭಾಗಗಳು ಮತ್ತು ದಕ್ಷಿಣ ಭಾರತದ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ದೇಶದ ಇತರೆಡೆ ಕನಿಷ್ಠ ತಾಪಮಾನ ವಾಡಿಕೆಗಿಂತ ಹೆಚ್ಚು ಇರಲಿದೆ.

ವಾಯವ್ಯ ಭಾರತವು 1901ರ ಬಳಿಕದ ಅತ್ಯಂತ ‘ತಾಪಮಾನ’ದ ಜೂನ್ ತಿಂಗಳನ್ನು ಈ ಬಾರಿ ಕಂಡಿದೆ. ಕಳೆದ ತಿಂಗಳು ಸರಾಸರಿ ತಾಪಮಾನ 31.73 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಈ ಭಾಗದಲ್ಲಿ ಸರಾಸರಿ ಗರಿಷ್ಠ ತಾಪಮಾನ 38.02 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ವಾಡಿಕೆಗಿಂತ 1.96 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕ ಎನಿಸಿದೆ.

ಜೂನ್‌ನಲ್ಲಿ ಶೇ 11ರಷ್ಟು ಮಳೆ ಕೊರತೆ

ದೇಶದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದೆ. ಮಳೆ ಕೊರತೆಯು ಶೇ 11ರಷ್ಟಿದ್ದು, ಐದು ವರ್ಷಗಳಲ್ಲೇ ಇದು ಅಧಿಕ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಜೂನ್ ತಿಂಗಳ ವಾಡಿಕೆ ಮಳೆ 165.3 ಮಿ.ಮೀ. ಆಗಿದ್ದು, ಈ ಬಾರಿ ಸರಾಸರಿ 147.2 ಮಿ.ಮೀ. ಮಳೆಯಾಗಿದೆ. ವಾಯವ್ಯ ಭಾರತದಲ್ಲಿ ಶೇ 33, ಕೇಂದ್ರ ಭಾರತದಲ್ಲಿ ಶೇ 14 ಹಾಗೂ ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ ಶೇ 13ರಷ್ಟು ಮಳೆ ಕೊರತೆ ಉಂಟಾಗಿದೆ. ದಕ್ಷಿಣ ಭಾರತದಲ್ಲಿ ಮಾತ್ರ ವಾಡಿಕೆಗಿಂತ ಶೇ 14ರಷ್ಟು ಅಧಿಕ ಮಳೆ ಬಿದ್ದಿದೆ.

ಆರ್‌ಎಸ್‌ಎಸ್ ವಿರುದ್ಧ ಖರ್ಗೆ ಟೀಕೆ

ಒಂದನೇ ಪುಟದಿಂದ...

ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಖರ್ಗೆ ಸುಮಾರು 90 ನಿಮಿಷ ಮಾತನಾಡಿದರು. ಚುನಾವಣಾ ರ‍್ಯಾಲಿಗಳಲ್ಲಿನ ಮೋದಿ ಭಾಷಣಗಳನ್ನು ಅವರು ಉಲ್ಲೇಖಿಸಿದರು. ಪ್ರಧಾನಿಯವರು ಅಲ್ಪಸಂಖ್ಯಾತರು, ಪಾಕಿಸ್ತಾನವನ್ನು ಎಷ್ಟು ಬಾರಿ ಉಲ್ಲೇಖಿಸಿದ್ದಾರೆ ಎಂಬುದನ್ನು ತೋರಿಸುವ ಅಂಕಿಅಂಶಗಳನ್ನು ಪ್ರಸ್ತುತಪಡಿಸಿದರು. ಅವರ ಹೇಳಿಕೆಗಳನ್ನು ದೃಢೀಕರಿಸಲು ದಾಖಲೆಗಳನ್ನು ನೀಡಿ ಎಂದು ಸಭಾಪತಿ ಕೋರಿದರು. ಪತ್ರಿಕಾ ತುಣುಕುಗಳನ್ನು ಖರ್ಗೆ ಉಲ್ಲೇಖಿಸಿದರು. ಅದನ್ನು ಧನಕರ್ ಒಪ್ಪಲಿಲ್ಲ.

ಆಗ ಖರ್ಗೆ ಅವರ ಬೆಂಬಲಕ್ಕೆ ಪಿ.ಚಿದಂಬರಂ ಬಂದರು. ‘ಪ್ರಧಾನಿ ಏನು ಹೇಳಿದ್ದಾರೆ ಎಂಬುದಕ್ಕೆ ವಿಪಕ್ಷ ನಾಯಕರು ಮಾಧ್ಯಮ ವರದಿಗಳನ್ನು ಉಲ್ಲೇಖಿಸಿದ್ದಾರೆ. ಅದನ್ನು ಬಿಟ್ಟು ಬೇರೆ ಯಾವ ರೀತಿಯಲ್ಲಿ ದೃಢೀಕರಿಸಲು ಸಾಧ್ಯ’ ಎಂದು ಪ್ರಶ್ನಿಸಿದರು. ಆದರೆ, ವಾದವನ್ನು ಒಪ್ಪದ ಸಭಾಪತಿಯವರು ಖರ್ಗೆಯವರ ಹೇಳಿಕೆಯನ್ನು ದಾಖಲೆಗಳಿಂದ ತೆಗೆಸಿದರು.

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ 10 ವರ್ಷಗಳ ಆಡಳಿತವು ಕೇವಲ ಟ್ರೈಲರ್ ಮತ್ತು ‘ಪಿಕ್ಚರ್ ಅಭಿ ಬಾಕಿ ಹೈ’ ಎಂಬ ಮೋದಿ ಅವರ ಹೇಳಿಕೆಯನ್ನು ಉಲ್ಲೇಖಿಸಿ ಖರ್ಗೆ ಟೀಕಿಸಿದರು.

‘ಮೋದಿ 3.0 ಸರ್ಕಾರದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ, ಹಲವು ಪರೀಕ್ಷೆಗಳ ರದ್ದು, ರೈಲು ಅಪಘಾತ, ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ದಾಳಿ, ರಾಮಮಂದಿರದಲ್ಲಿ ಸೋರಿಕೆ, ಮೂರು ವಿಮಾನ ನಿಲ್ದಾಣಗಳ ಚಾವಣಿ ಕುಸಿತ, ಟೋಲ್ ಶುಲ್ಕ ಹೆಚ್ಚಳ ಹಾಗೂ ರೂಪಾಯಿ ಕುಸಿತ ಆಗಿರುವುದನ್ನು ನೋಡಿದ್ದೇವೆ’ ಎಂದರು. ವಿವಾದಾತ್ಮಕ ಅಗ್ನಿಪಥ್ ಸೇನಾ ನೇಮಕಾತಿ ಯೋಜನೆ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನೀಟ್ ಮತ್ತಿತರ ವಿಷಯಗಳ ಬಗ್ಗೆಯೂ ಅವರು ಮಾತನಾಡಿದರು.

ಆದಾಗ್ಯೂ, ಆರೆಸ್ಸೆಸ್ ಕುರಿತು ಖರ್ಗೆಯವರ ಉಲ್ಲೇಖಗಳು ಆಡಳಿತ ಪಕ್ಷದ ಸದಸ್ಯರಿಂದ ಗದ್ದಲದ ಪ್ರತಿಭಟನೆಗೆ ಕಾರಣವಾಯಿತು. ಈ ಹೇಳಿಕೆಗಳನ್ನು ಕಡತದಿಂದ ಹೊರಹಾಕುವಂತೆ ಸಭಾನಾಯಕ ಜೆ.ಪಿ. ನಡ್ಡಾ ಕೋರಿದರು. ಸಂಸದೀಯ ದಾಖಲೆಗಳಿಂದ ಈ ಟೀಕೆಗಳನ್ನು ತೆಗೆದುಹಾಕಲು ಆದೇಶಿಸಿದ ಧನಕರ್, ‘ ಸಂಘಟನೆ (ಆರ್‌ಎಸ್‌ಎಸ್) ಸದಸ್ಯರಾಗಿರುವುದು ಅಪರಾಧವೇ? ಯಾರಾದರೂ ಆರ್‌ಎಸ್‌ಎಸ್ ಸದಸ್ಯರಾಗಿದ್ದರೆ ತಪ್ಪೇನು? ಇದು ದೇಶಕ್ಕಾಗಿ ಕೆಲಸ ಮಾಡುವ ಪ್ರಸಿದ್ಧ ಸಂಸ್ಥೆ. ಅಲ್ಲಿ ಸಾಕಷ್ಟು ಬುದ್ಧಿವಂತರು ಇದ್ದಾರೆ. ರಾಷ್ಟ್ರಕ್ಕಾಗಿ ದಣಿವರಿಯಿಲ್ಲದೆ ದುಡಿಯುತ್ತಿರುವ ಸಂಸ್ಥೆಯನ್ನು ನೀವು ದೂಷಿಸುತ್ತಿದ್ದೀರಿ’ ಎಂದರು.

ಮಣಿಪುರದ ಕುರಿತ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿಕೆಯನ್ನು ಖರ್ಗೆ ಉಲ್ಲೇಖಿಸಿದರು. ಆದರೆ, ಅದನ್ನೂ ಧನಕರ್ ಸದನದ ದಾಖಲೆಗಳಿಂದ ತೆಗೆಸಿದರು.

ಇತ್ತೀಚಿನ ಪ್ರಶ್ನೆ ಸೋರಿಕೆಯಿಂದ 30 ಲಕ್ಷ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗಿದೆ ಎಂದು ಒತ್ತಿ ಹೇಳಿದ ಖರ್ಗೆ, ‘ಇದೇ ರೀತಿ ಮುಂದುವರಿದರೆ ವಿದ್ಯಾರ್ಥಿಗಳು ಓದುವುದನ್ನು ನಿಲ್ಲಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ 70 ಬಾರಿ ಪ್ರಶ್ನೆ ಸೋರಿಕೆಯಾಗಿದೆ. ಇದು ಎರಡು ಕೋಟಿ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪರಿಣಾಮ ಬೀರಿದೆ’ ಎಂದು ಕಿಡಿಕಾರಿದರು.

ಮೇಧಾಗೆ 5 ತಿಂಗಳು ಜೈಲು

ನವದೆಹಲಿ (ಪಿಟಿಐ): 23 ವರ್ಷ ಹಳೆಯದಾದ ಮಾನಹಾನಿ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರಿಗೆ ಇಲ್ಲಿನ ನ್ಯಾಯಾಲಯ ಐದು ತಿಂಗಳ ಜೈಲು ಶಿಕ್ಷೆ ವಿಧಿಸಿ ಸೋಮವಾರ ತೀರ್ಪು ಪ್ರಕಟಿಸಿದೆ.

ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಮೇಧಾ ಪಾಟ್ಕರ್ ವಿರುದ್ಧ 2001ರಲ್ಲಿ ಮಾನನಷ್ಟ ಪ್ರಕರಣ ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ ಅವರು, ₹10 ಲಕ್ಷ ದಂಡವನ್ನೂ ವಿಧಿಸಿದ್ದಾರೆ.

ಕೋರ್ಟ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಪಾಟ್ಕರ್ ಅವರಿಗೆ ಅವಕಾಶ ನೀಡಿದ್ದು, ಶಿಕ್ಷೆಯನ್ನು ಒಂದು ತಿಂಗಳು ಅಮಾನತಿನಲ್ಲಿಡಲಾಗಿದೆ.

ಸನ್ನಡತೆಯ ಆಧಾರದಲ್ಲಿ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಕೋರಿದ ಪಾಟ್ಕರ್ ಅವರ ಮನವಿಯನ್ನು ತಿರಸ್ಕರಿಸಿದ ನ್ಯಾಯಾಧೀಶರು, ‘ಸತ್ಯಾಂಶಗಳು, ಆರೋಗ್ಯ, ವಯಸ್ಸನ್ನು ಗಮನದಲ್ಲಿಟ್ಟುಕೊಂಡು ಇದಕ್ಕಿಂತ ಹೆಚ್ಚಿನ ಶಿಕ್ಷೆ ವಿಧಿಸಲು ಸಾಧ್ಯವಿಲ್ಲ’ ಎಂದು ಹೇಳಿದರು.

ಈ ಅಪರಾಧಕ್ಕೆ ಗರಿಷ್ಠ ಎರಡು ವರ್ಷಗಳ ಸಾದಾ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಇದೆ. ಪಾಟ್ಕರ್ ತಮ್ಮ ವಿರುದ್ಧ ಹೊರಡಿಸಿದ ಪತ್ರಿಕಾ ಹೇಳಿಕೆಯೊಂದು ಮಾನಹಾನಿಕರವಾಗಿದೆ ಎಂದು ದೂರಿ ಸಕ್ಸೇನಾ ಅವರು 2001ರಲ್ಲಿ ದೂರು ದಾಖಲಿಸಿದ್ದರು. ಆಗ ಸಕ್ಸೇನಾ ಅವರು ನ್ಯಾಷನಲ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟೀಸ್‌ನ ಅಧ್ಯಕ್ಷರಾಗಿದ್ದರು.

ಸಕ್ಸೇನಾ ಅವರನ್ನು ಮೇಧಾ ಅವರು ‘ಹೇಡಿ, ದೇಶಭಕ್ತ ಅಲ್ಲ’ ಎಂದು ಕರೆದಿದ್ದು ಹಾಗೂ ಅವರು ಹವಾಲಾ ವಹಿವಾಟಿನಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದ್ದು ಮಾನಹಾನಿಕರವಾಗಿತ್ತು. ಸಕ್ಸೇನಾ ಕುರಿತು ನಕಾರಾತ್ಮಕ ಚಿತ್ರಣ ಮೂಡಿಸುವಂತೆಯೂ ಇದ್ದವು ಎಂದು ಕೋರ್ಟ್ ಮೇ 24ರಂದು ಹೇಳಿತ್ತು.

ಹೊಸ ಕಾನೂನು: ಗರಿಷ್ಠ ಮೂರು ವರ್ಷಗಳಲ್ಲಿ ನ್ಯಾಯ– ಅಮಿತ್ ಶಾ

‘ಅಪರಾಧ ಪ್ರಮಾಣ ಇಳಿಕೆ ವಿಶ್ವಾಸ’

ನವದೆಹಲಿ (ಪಿಟಿಐ): ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳ ಅಡಿಯಲ್ಲಿ ಎಫ್‌ಐಆರ್ ದಾಖಲಾದ ಎಲ್ಲ ಪ್ರಕರಣಗಳಲ್ಲಿ ಮೂರು ವರ್ಷಗಳ ಒಳಗಾಗಿ ನ್ಯಾಯ ದೊರೆಯಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ಹೇಳಿದರು.

ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿ ವ್ಯಾಪಕ ಬದಲಾವಣೆ ತರುವ ನಿಟ್ಟಿನಲ್ಲಿ ಭಾರತೀಯ ನ್ಯಾಯ ಸಂಹಿತೆ 2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 2023 ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ 2023 ಕಾಯ್ದೆಗಳು ಜುಲೈ 1ರಿಂದ ಜಾರಿಗೆ ಬಂದಿವೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾ, ಹೊಸ ಕಾನೂನುಗಳ ಅಡಿಯಲ್ಲಿ ಶೇ90 ರಷ್ಟು ಪ್ರಕರಣಗಳಲ್ಲೂ ಅಪರಾಧಿಗಳು ಶಿಕ್ಷೆಗೊಳಗಾಗುವ ಸಾಧ್ಯತೆಯಿದೆ. ಆದ್ದರಿಂದ ಭವಿಷ್ಯದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಬಹುದು ಎಂದು ಭರವಸೆ ವ್ಯಕ್ತಪಡಿಸಿದರು.

‘ಸುಪ್ರೀಂ ಕೋರ್ಟ್‌ವರೆಗೆ ಹೋದ ಪ್ರಕರಣಗಳಲ್ಲೂ ಎಫ್‌ಐಆರ್ ದಾಖಲಾದ ಮೂರು ವರ್ಷಗಳ ಒಳಗಾಗಿ ನ್ಯಾಯ ಲಭಿಸಲಿದೆ’ ಎಂದು ತಿಳಿಸಿದರು.

> **ಹೊಸ ಕಾನೂನುಗಳ ಅನುಷ್ಠಾನದೊಂದಿಗೆ ಭಾರತವು ವಿಶ್ವದಲ್ಲೇ ಅತ್ಯಂತ ಆಧುನಿಕ ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನು ಹೊಂದಿದ ದೇಶ ಎನಿಸಿಕೊಂಡಿದೆ**
> **ಅಮಿತ್ ಶಾ,** ಗೃಹ ಸಚಿವ

ಚರ್ಚೆಗೆ ಸಿದ್ಧ: ‘ಹೊಸ ಮೂರು ಕ್ರಿಮಿನಲ್ ಅಪರಾಧ ಕಾನೂನುಗಳಿಗೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ಸಂಸದರಿಗೆ ಯಾವುದೇ ದೂರುಗಳಿದ್ದರೆ ನನ್ನನ್ನು ಭೇಟಿಯಾಗಿ ಚರ್ಚಿಸಬಹುದು. ಅವರ ಸಲಹೆಗಳನ್ನು ಆಲಿಸಲು ಸಿದ್ಧನಿದ್ದೇನೆ’ ಎಂದು ಹೇಳಿದರು.

‘ಈ ಸಂಬಂಧ ನನ್ನನ್ನು ಯಾರು ಬೇಕಾದರೂ ಭೇಟಿಯಾಗಬಹುದು. ಜತೆಗೆ ಕುಳಿತು ಚರ್ಚಿಸೋಣ. ಆದರೆ ದಯವಿಟ್ಟು ಈ ವಿಷಯವನ್ನು ರಾಜಕೀಯಗೊಳಿಸಬೇಡಿ’ ಎಂದು ಮನವಿ ಮಾಡಿದರು.

ಹೊಸ ಮೂರು ಕಾನೂನುಗಳು ಬ್ರಿಟಿಷ್ ಕಾಲದಲ್ಲಿ ರೂಪುಗೊಂಡ ಭಾರತೀಯ ದಂಡ ಸಂಹಿತೆ, ಅಪರಾಧ ದಂಡಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯ ಬದಲಿಗೆ ಜಾರಿಗೆ ಬಂದಿವೆ.

‘ನ್ಯಾಯವನ್ನು ಬುಲ್ಡೋಜ್ ಮಾಡಲು ಬಿಡೆವು’

ಮೂರು ಹೊಸ ಕಾನೂನುಗಳನ್ನು ಸಂಸತ್ತಿನಲ್ಲಿ ‘ಬಲವಂತವಾಗಿ’ ಅಂಗೀಕರಿಸಲಾಗಿದೆ ಎಂದು ಆರೋಪಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ಸಂಸದೀಯ ವ್ಯವಸ್ಥೆಯಲ್ಲಿ ನ್ಯಾಯವನ್ನು ‘ಬುಲ್ಡೋಜ್’ ಮಾಡಲು ಇಂಡಿಯಾ ಮೈತ್ರಿಕೂಟ ಅವಕಾಶ ನೀಡದು’ ಎಂದಿದ್ದಾರೆ.

‘ಚುನಾವಣೆಯಲ್ಲಿ ಹಿನ್ನಡೆ ಎದುರಾದ ಬಳಿಕ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯವರು ಸಂವಿಧಾನವನ್ನು ಗೌರವಿಸುವಂತೆ ನಟಿಸುತ್ತಿದ್ದಾರೆ. ಆದರೆ, ಈಗ ಜಾರಿಯಾಗಿರುವ ಮೂರು ಹೊಸ ಕಾನೂನುಗಳನ್ನು 146 ಸಂಸದರನ್ನು ಅಮಾನತುಗೊಳಿಸಿದ ಸಮಯದಲ್ಲಿ ಬಲವಂತವಾಗಿ ಅಂಗೀಕರಿಸಲಾಗಿದೆ ಎಂಬ ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಗ್ವಾಲಿಯರ್‌ನಲ್ಲಿ ಮೊದಲ ಪ್ರಕರಣ

ಹೊಸ ಕ್ರಿಮಿನಲ್ ಅಪರಾಧ ಕಾನೂನಿನಡಿ ಮೊದಲ ಪ್ರಕರಣವನ್ನು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ದಾಖಲಿಸಲಾಗಿದೆ ಎಂದು ಗೃಹ ಸಚಿವರು ಮಾಹಿತಿ ನೀಡಿದರು.

‘ದ್ವಿಚಕ್ರವಾಹನ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಮಧ್ಯರಾತ್ರಿ 12.10ಕ್ಕೆ ಮೊದಲ ಪ್ರಕರಣ ದಾಖಲಿಸಲಾಗಿದೆ’ ಎಂದು ತಿಳಿಸಿದರು.

‘ದೆಹಲಿಯ ಕಮಲಾ ಮಾರುಕಟ್ಟೆಯಲ್ಲಿ ಬೀದಿ ಬದಿ ವ್ಯಾಪಾರಿಯೊಬ್ಬರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದರೂ, ಆ ಬಳಿಕ ಅದನ್ನು ಕೈಬಿಟ್ಟಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

ಸಂಕ್ಷಿಪ್ತ ಸುದ್ದಿ

ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರ ಲೋಕ ಸೇವಾ ಆಯೋಗವು(ಯುಪಿಎಸ್‌ಸಿ) ಜೂನ್ 16ರಂದು ನಡೆಸಿದ್ದ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯ ಫಲಿತಾಂಶವು ಸೋಮವಾರ ಪ್ರಕಟವಾಗಿದೆ.

ನಾಗರೀಕ ಸೇವಾ ಪರೀಕ್ಷೆ ಮತ್ತು ಭಾರತೀಯ ಅರಣ್ಯ ಸೇವೆಗಳ ಪರೀಕ್ಷೆಯ ಸಂಪೂರ್ಣ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಪೂರ್ವಭಾವಿ ಪರೀಕ್ಷೆಯ ಅಂಕ, ಕಟ್‌ಆಫ್ ಅಂಕ ಮತ್ತು ಉತ್ತರಗಳನ್ನು ಯುಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕವಿತಾ ಜಾಮೀನು ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ನ್ಯಾಯಾಂಗ ಬಂಧನದಲ್ಲಿರುವ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರು ಸಲ್ಲಿಸಿದ್ದ ಎರಡೂ ಜಾಮೀನು ಅರ್ಜಿಗಳನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಮೇ 28ರಂದು ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಮೂರ್ತಿ ಸ್ವರ್ಣ ಕಾಂತ ಶರ್ಮ ಅವರು ತೀರ್ಪನ್ನು ಕಾಯ್ದಿರಿಸಿದ್ದರು.

ಕೇಜ್ರಿವಾಲ್ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ನಡೆಸಲಿದೆ.

ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ಈ ಅರ್ಜಿಯ ವಿಚಾರಣೆ ನಡೆಸಲಿದ್ದಾರೆ.

ಸಿಬಿಐ ತಮ್ಮನ್ನು ಬಂಧಿಸಿರುವುದು ಹಾಗೂ ವಿಚಾರಣಾ ನ್ಯಾಯಾಲಯವು ತಮ್ಮನ್ನು 3 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಿ ಜೂ.26ರಂದು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕೇಜ್ರಿವಾಲ್ ಅವರು ಸೋಮವಾರ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಬಂಗಾಳದಲ್ಲಿ ಗುಂಪು ಹಲ್ಲೆ: ವ್ಯಕ್ತಿ ಸಾವು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯಲ್ಲಿ ಸೋಮವಾರ ನಡೆದ ಗುಂಪು ಹಲ್ಲೆಯಲ್ಲಿ ವ್ಯಕ್ತಿಯೊಬ್ಬರು ಸಾವಿಗೀಡಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಒಂದು ವಾರದೊಳಗೆ ರಾಜ್ಯದಲ್ಲಿ ನಡೆದ ನಾಲ್ಕನೇ ಗುಂಪು ಹಲ್ಲೆಯ ಘಟನೆ ಇದಾಗಿದೆ.

ಈ ಘಟನೆಯಲ್ಲಿ ಮೃತಪಟ್ಟ ವ್ಯಕ್ತಿಯನ್ನು ಬಿಸ್ವಜಿತ್ ಮನ್ನಾ ಎಂದು ಗುರುತಿಸಲಾಗಿದ್ದು, ಈ ಸಂಬಂಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು, ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಆರೋಪಿಯಿಂದ ಮನ್ನಾ ₹50 ಸಾವಿರ ಸಾಲ ಪಡೆದಿದ್ದರು. ಅದನ್ನು ಮರುಪಾವತಿ ಮಾಡಿರಲಿಲ್ಲ. ಹೀಗಾಗಿ ಆರೋಪಿಯು ಭಾನುವಾರ ತಮ್ಮ ಬಳಿ ಕರೆಸಿಕೊಂಡಿದ್ದ. ಬಳಿಕ ತನ್ನ ಸ್ನೇಹಿತರ ಜತೆಗೂಡಿ ಆತನ ಮೇಲೆ ನಿರಂತರವಾಗಿ ಹಲ್ಲೆ ನಡೆಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಕುಲಪತಿ ಇನ್ನು ಮುಂದೆ ಕುಲಗುರು

ಭೋಪಾಲ್(ಪಿಟಿಐ): ವಿಶ್ವವಿದ್ಯಾಲಯಗಳ ‘ಕುಲಪತಿ’ ಹುದ್ದೆಯನ್ನು ‘ಕುಲಗುರು’ ಎಂದು ಮರುನಾಮಕರಣ ಮಾಡಲು ಮಧ್ಯ ಪ್ರದೇಶ ಸಚಿವ ಸಂಪುಟ ಸೋಮವಾರ ಒಪ್ಪಿಗೆ ಸೂಚಿಸಿದೆ.

ಇದೇ ತಿಂಗಳಲ್ಲಿ ನಾವು ಗುರು ಪೂರ್ಣಿಮೆಯನ್ನು ಆಚರಿಸುವ ಹಿನ್ನೆಲೆಯಲ್ಲಿ, ನಮ್ಮ ಮೂಲ ಸಂಸ್ಕೃತಿಗೆ ಅನುಗುಣವಾಗಿ ಕುಲಪತಿಗಳನ್ನು ‘ಕುಲಗುರು’ ಎಂದು ಸಂಬೋಧಿಸುವ ಸರ್ಕಾರದ ಈ ನಿರ್ಧಾರ ಹೆಚ್ಚಿನ ಮಹತ್ವ ಪಡೆದುಕೊಂಡಿದೆ ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ಹೇಳಿದ್ದಾರೆ.

₹50 ಲಕ್ಷ ಮಾನನಷ್ಟ ನೀಡಲು ಸಾಕೇತ್‌ಗೆ ನಿರ್ದೇಶನ

ನವದೆಹಲಿ (ಪಿಟಿಐ): ಮಾನಹಾನಿ ಟ್ವೀಟ್‌ಗೆ ಸಂಬಂಧಿಸಿದಂತೆ ಮಾಜಿ ರಾಜತಾಂತ್ರಿಕ ಅಧಿಕಾರಿ ಲಕ್ಷ್ಮೀ ಮುರ್ಡೇಶ್ವರ್ ಪುರಿ ಅವರ ಬಳಿ ಕ್ಷಮೆಯಾಚನೆ ಮಾಡಿ, ₹50 ಲಕ್ಷ ಪರಿಹಾರ ನೀಡಬೇಕು ಎಂದು ದೆಹಲಿ ಹೈಕೋರ್ಟ್ ಸೋಮವಾರ ಟಿಎಂಸಿ ನಾಯಕ ಸಾಕೇತ್ ಗೋಖಲೆ ಅವರಿಗೆ ಆದೇಶಿಸಿದೆ.

ಮಾನನಷ್ಟ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಮೂರ್ತಿ ಅನೂಪ್ ಜೈರಾಮ್ ಭಂಭಾನಿ ಅವರು, ಈ ಸಂಬಂಧ ಗೋಖಲೆ ಅವರು ಯಾವುದೇ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳದಂತೆ ನಿರ್ಬಂಧ ಹೇರಿದ್ದಾರೆ.

ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಅವರ ಪತ್ನಿಯೂ ಆದ ಲಕ್ಷ್ಮೀ ಅವರು ಸ್ವಿಟ್ಜರ್ಲೆಂಡ್‌ನಲ್ಲಿ ಆಸ್ತಿ ಖರೀದಿಸಿರುವುದನ್ನು ಉಲ್ಲೇಖಿಸಿ ಸಾಕೇತ್ ಗೋಖಲೆ ಟ್ವೀಟ್ ಮಾಡಿದ್ದರು. ಇದಕ್ಕಾಗಿ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿತ್ತು.

ಆತಿಥೇಯ ಬೌಲರ್‌ಗಳ ದಾಳಿಗೆ ಕುಸಿದ ದಕ್ಷಿಣ ಆಫ್ರಿಕಾ ತಂಡ

ಚೆನ್ನೈ ಟೆಸ್ಟ್ ಗೆದ್ದ ಭಾರತ ವನಿತೆಯರು

ಚೆನ್ನೈ (ಪಿಟಿಐ): ಬೌಲರ್‌ಗಳ ಸಂಘಟಿತ ದಾಳಿಯ ಬಲದಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ದಕ್ಷಿಣ ಆಫ್ರಿಕಾ ಎದುರು ಇಲ್ಲಿ ನಡೆದ ಏಕೈಕ ಟೆಸ್ಟ್‌ನಲ್ಲಿ 10 ವಿಕೆಟ್‌ಗಳ ಜಯ ದಾಖಲಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡಕ್ಕೆ ಸೋಮವಾರ 37 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಇದನ್ನು ಆತಿಥೇಯ ಬಳಗವು 9.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ ನಿರಾಯಾಸವಾಗಿ ಮುಟ್ಟಿತು. ಶುಭಾ ಸತೀಶ್ (ಔಟಾಗದೆ 13) ಮತ್ತು ಶಫಾಲಿ ವರ್ಮಾ (ಔಟಾಗದೆ 24) ಅವರು ತಂಡವನ್ನು ಗೆಲುವಿನ ದಡ ಸೇರಿಸಿದರು.

ಭಾರತವು ಟೆಸ್ಟ್ ಕ್ರಿಕೆಟ್‌ನಲ್ಲಿ ಎರಡನೇ ಸಲ ಹತ್ತು ವಿಕೆಟ್‌ಗಳ ಅಂತರದ ಜಯ ಸಾಧಿಸಿದೆ. 2002ರಲ್ಲಿ ಪಾರ್ಲ್‌ನಲ್ಲಿ ನಡೆದಿದ್ದ ಟೆಸ್ಟ್‌ನಲ್ಲಿಯೂ ದಕ್ಷಿಣ ಆಫ್ರಿಕಾ ವಿರುದ್ಧ ಹತ್ತು ವಿಕೆಟ್‌ಗಳಿಂದ ಜಯಿಸಿತ್ತು.

ಚೆನ್ನೈನಲ್ಲಿ ದಕ್ಷಿಣ ಆಫ್ರಿಕಾ ಮಹಿಳಾ ತಂಡದ ಎದುರು ನಡೆದ ಏಕೈಕ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಜಯಿಸಿದ ಭಾರತ ಮಹಿಳಾ ತಂಡವು ಟ್ರೋಫಿಯೊಂದಿಗೆ ಸಂಭ್ರಮಿಸಿತು – ಪಿಟಿಐ ಚಿತ್ರ

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 603 ರನ್ ಗಳಿಸಿತ್ತು. ಇದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾ ತಂಡವು 266 ರನ್‌ಗಳಿಗೆ ಆಲೌಟ್ ಆಯಿತು. ಭಾರತದ ಸ್ನೇಹಾ ರಾಣಾ ಅವರು ಎಂಟು ವಿಕೆಟ್ ಗಳಿಸಿ ಪ್ರವಾಸಿ ತಂಡದ ಕುಸಿತಕ್ಕೆ ಕಾರಣರಾದರು.

ದಕ್ಷಿಣ ಅಫ್ರಿಕಾದ ಮೇಲೆ ಫಾಲೋ ಆನ್ ಹೇರಲಾಯಿತು. ಎರಡನೇ ಇನಿಂಗ್ಸ್‌ನಲ್ಲಿ ಪುಟಿದೆದ್ದ ದಕ್ಷಿಣ ಆಫ್ರಿಕಾ ದಿಟ್ಟ ಹೋರಾಟ ನಡೆಸಿತು. ನಾಯಕಿ ಲೌರಾ ವೊಲ್ವಾರ್ಟ್ (122; 314ಎ, 4X16) ಮತ್ತು ಸುನೆ ಲುಸ್ (109 ರನ್) ಅವರಿಬ್ಬರೂ ಶತಕ ಬಾರಿಸಿದರು. ಇದರಿಂದಾಗಿ ತಂಡವು ಮುನ್ನಡೆ ಸಾಧಿಸಿತು. ಆದರೆ ದೊಡ್ಡ ಗುರಿ ನೀಡುವ ದಕ್ಷಿಣ ಆಫ್ರಿಕಾ ತಂಡದ ಗುರಿಗೆ ಆತಿಥೇಯ ಬೌಲಿಂಗ್ ಪಡೆ ಅಡ್ಡಿಯಾಯಿತು.

ಈ ಇನಿಂಗ್ಸ್‌ನಲ್ಲಿಯೂ ಎರಡು ವಿಕೆಟ್ ಕಬಳಿಸಿದ ಆಫ್‌ಸ್ಪಿನ್ನರ್ ಸ್ನೇಹಾ ಮಿಂಚಿದರು. ದೀಪ್ತಿ ಶರ್ಮಾ ಹಾಗೂ ರಾಜೇಶ್ವರಿ ಗಾಯಕವಾಡ ಅವರೂ ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 115.1 ಓವರ್‌ಗಳಲ್ಲಿ 6ಕ್ಕೆ603 ಡಿಕ್ಲೇರ್ಡ್. ದಕ್ಷಿಣ ಆಫ್ರಿಕಾ: 84.3 ಓವರ್‌ಗಳಲ್ಲಿ 266. ಎರಡನೇ ಇನಿಂಗ್ಸ್: ದಕ್ಷಿಣ ಆಫ್ರಿಕಾ (ಫಾಲೋ ಆನ್): 154.4 ಓವರ್‌ಗಳಲ್ಲಿ 373 (ಲೌರಾ ವೊಲ್ವಾರ್ಟ್ 122, ನದೈನ್ ಡಿ ಕ್ಲರ್ಕ್ 61, ಸಿನಾಲೊ ಜಫ್ತಾ 15, ಸ್ನೇಹಾ ರಾಣಾ 111ಕ್ಕೆ2, ದೀಪ್ತಿ ಶರ್ಮಾ 95ಕ್ಕೆ2, ರಾಜೇಶ್ವರಿ ಗಾಯಕವಾಡ 55ಕ್ಕೆ2) ಭಾರತ: 9.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 37(ಶುಭಾ ಸತೀಶ್ ಔಟಾಗದೆ 13, ಶಫಾಲಿ ವರ್ಮಾ ಔಟಾಗದೆ 24) ಫಲಿತಾಂಶ: ಭಾರತ ತಂಡಕ್ಕೆ 10 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಸ್ನೇಹಾ ರಾಣಾ

ಪ್ರಯಾಣಕ್ಕೆ ಚಂಡಮಾರುತ ಅಡ್ಡಿ

ಬಾರ್ಬಡೋಸ್‌ನಲ್ಲಿಯೇ ಬೀಡುಬಿಟ್ಟ ಭಾರತ ತಂಡ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಟಿ20 ವಿಶ್ವಕಪ್ ವಿಜೇತ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ತವರು ದೇಶಕ್ಕೆ ಬಂದು ವಿಜಯೋತ್ಸವ ಆಚರಿಸಲು ಇನ್ನೂ ಸ್ವಲ್ಪ ಸಮಯ ಕಾಯಬೇಕಿದೆ.

ಕೆರೀಬಿಯನ್ ದ್ವೀಪಗಳಲ್ಲಿ ಸೋಮವಾರ ಬೆಳಗಿನ ಜಾವದಲ್ಲಿ ಕೆಟಗರಿ 4 ಚಂಡಮಾರುತವು ಬೀಸುತ್ತಿರುವುದರಿಂದ ವಿಮಾನಯಾನವೂ ಸೇರಿದಂತೆ ಎಲ್ಲ ನಾಗರಿಕ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಮುಖ್ಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಕೂಡ ಮುಚ್ಚಲಾಗಿದೆ.

ಬಾರ್ಬಡೋಸ್ ಮತ್ತು ಸುತ್ತಮುತ್ತಲಿನ ದ್ವೀಪಗಳಲ್ಲಿ ಬಿರುಗಾಳಿಯ ತೀವ್ರತೆಯು ಅಪಾಯಕಾರಿ ಮಟ್ಟದಲ್ಲಿದೆ. 3 ಲಕ್ಷ ಜನಸಂಖ್ಯೆ ಇರುವ ಈ ದ್ವೀಪ ದೇಶದಲ್ಲಿ ಭಾನುವಾರ ಸಂಜೆಯಿಂದಲೇ ಲಾಕ್‌ಡೌನ್ ವಿಧಿಸಲಾಗಿದೆ.

ಶನಿವಾರ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತ ತಂಡವು ದಕ್ಷಿಣ ಆಫ್ರಿಕಾ ವಿರುದ್ಧ ಜಯಿಸಿ ಟ್ರೋಫಿ ಗೆದ್ದಿತ್ತು.

‘ನಿಮ್ಮಂತೆಯೇ ನಾವು ಇಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಮೊದಲಿಗೆ ಆಟಗಾರರು ಮತ್ತಿತರರನ್ನು ಸುರಕ್ಷಿತವಾಗಿ ಇರುವಂತೆ ನೋಡಿಕೊಳ್ಳುವುದು ಆದ್ಯತೆಯಾಗಿದೆ. ಸ್ವದೇಶಕ್ಕೆ ಹೋದ ನಂತರ ಸನ್ಮಾನದ ಬಗ್ಗೆ ಯೋಚಿಸಬಹುದು’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

ಜಯ್ ಶಾ ಮತ್ತು ರೋಹಿತ್ ಶರ್ಮಾ

ಬಿಸಿಸಿಐ ಉನ್ನತ ಪದಾಧಿಕಾರಿಗಳು ಮತ್ತು ಭಾರತ ತಂಡದ ಆಟಗಾರರು ಸೋಮವಾರ ಭಾರತಕ್ಕೆ ಪ್ರಯಾಣಿಸಬೇಕಿತ್ತು. ಅದಕ್ಕಾಗಿ ಖಾಸಗಿ ವಿಮಾನ ವ್ಯವಸ್ಥೆಯನ್ನೂ ಮಂಡಳಿಯು ಯೋಜಿಸಿದೆ. ಆದರೆ ವಿಮಾನ ನಿಲ್ದಾಣವನ್ನೇ ಮುಚ್ಚಿರುವುದರಿಂದ ಪ್ರಯಾಣ ಅಸಾಧ್ಯವಾಗಿದೆ.

ಭಾರತದಿಂದ ತೆರಳಿರುವ ಮಾಧ್ಯಮ ಪ್ರತಿನಿಧಿಗಳನ್ನೂ ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲು ಬಿಸಿಸಿಐ ಪ್ರಯತ್ನಿಸುತ್ತಿದೆ.

‘ಚಾರ್ಟರ್ ವಿಮಾನವನ್ನು ಸಿದ್ಧಗೊಳಿಸಲು ಯೋಜಿಸಿದ್ದೆವು. ಆದರೆ ವಿಮಾನ ನಿಲ್ದಾಣ ಮುಚ್ಚಲಾಗಿದೆ. ಖಾಸಗಿ ವಿಮಾನ ಸೇವೆ ಒದಗಿಸುವ ಬೇರೆ ಬೇರೆ ಕಂಪೆನಿಗಳೊಂದಿಗೆ ನಾವು ಸಂಪರ್ಕದಲ್ಲಿದ್ದೇವೆ. ಆದರೆ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದ ನಂತರವಷ್ಟೇ ಎಲ್ಲವೂ ಸ್ಪಷ್ಟವಾಗಲಿದೆ. ನೇರವಾಗಿ ಭಾರತಕ್ಕೆ ಪ್ರಯಾಣಿಸುವುದು ನಮ್ಮ ಉದ್ದೇಶ. ಇಂಧನ ಭರ್ತಿಗಾಗಿ ಅಮೆರಿಕ ಅಥವಾ ಯುರೋಪ್‌ನಲ್ಲಿ ವಿಮಾನ ಇಳಿಯಬಹುದಷ್ಟೇ. ಆದರೆ ಮಂಗಳವಾರದವರೆಗೂ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡುವುದಿಲ್ಲ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡದ ಆಟಗಾರರು ಪಂಚತಾರಾ ಹೋಟೆಲ್ ನಲ್ಲಿ ಸುರಕ್ಷಿತವಾಗಿದ್ದಾರೆಂದೂ ಮೂಲಗಳು ತಿಳಿಸಿವೆ.’

ನಾಡಾ ವಿರುದ್ಧ ಬಜರಂಗ್ ಕಿಡಿ

ನವದೆಹಲಿ (ಪಿಟಿಐ): ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ಎತ್ತಿ ತೋರಿಸಿದ್ದಕ್ಕಾಗಿ ನಾಡಾ (ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ)ದ ಕೆಂಗಣ್ಣಿಗೆ ತಾವು ಗುರಿಯಾಗಿರುವುದಾಗಿ ಕುಸ್ತಿಪಟು ಬಜರಂಗ್ ಪೂನಿಯಾ ಸೋಮವಾರ ಆರೋಪಿಸಿದ್ದಾರೆ.

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕದ ದುರಹಂಕಾರವನ್ನು ಪ್ರಶ್ನಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಸೋನೆಪತ್‌ನಲ್ಲಿ ಮಾರ್ಚ್ 10 ರಂದು ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ನಿಷೇಧಿತ ಉದ್ದೀಪನ ಮದ್ದು ಪರೀಕ್ಷೆಗಾಗಿ ಮೂತ್ರದ ಮಾದರಿ ನೀಡಲು ನಿರಾಕರಿಸಿದ್ದಕ್ಕಾಗಿ ಪೂನಿಯಾ ಅವರನ್ನು ಏಪ್ರಿಲ್ 23ರಂದು ನಾಡಾ ತಾತ್ಕಾಲಿಕವಾಗಿ ಅಮಾನತುಗೊಳಿಸಿತ್ತು.

ಅದನ್ನು ಸಂಯುಕ್ತ ವಿಶ್ವ ಕುಸ್ತಿ (ಯುಡಬ್ಲ್ಯುಡಬ್ಲ್ಯು) ಸಂಸ್ಥೆಯೂ ಅಂಗೀಕರಿಸಿತ್ತು. ಜೂನ್ 24ರಂದು ನಾಡಾ ಮತ್ತೊಮ್ಮೆ ಅಮಾನತುಗೊಳಿಸಿತ್ತು.

‘ನಾಡಾ ಹೇಗೆ ಗುರಿಯಾಗಿಸಿದೆ ಎಂಬುದನ್ನು ಇದು ತೋರಿಸುತ್ತದೆ. ನಾನು ಯಾವುದೇ ಕಾರಣಕ್ಕೂ ಕುಸ್ತಿಯನ್ನು ಮುಂದುವರಿಸಲು ಅವರು ಬಯಸುವುದಿಲ್ಲ’ ಎಂದು ಬಜರಂಗ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಉತ್ತರ ಕನ್ನಡದ ಥ್ರೋಡೌನ್ ಸ್ಪೆಷಲಿಸ್ಟ್

ಟಿ20 ವಿಶ್ವಕಪ್ ವಿಜೇತ ಭಾರತ ತಂಡದಲ್ಲಿ ಕುಮಟಾ ಯುವಕ

ಪ್ರಜಾವಾಣಿ ವಾರ್ತೆ

ಕಾರವಾರ: ಟಿ20 ವಿಶ್ವಕಪ್‌ನಲ್ಲಿ ಗೆಲುವು ಸಾಧಿಸಿದ ಭಾರತ ತಂಡದ ಭಾಗವಾಗಿರುವ ಉತ್ತರ ಕನ್ನಡ ಜಿಲ್ಲೆ ಕುಮಟಾದ ರಾಘವೇಂದ್ರ ದಿವಗಿ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚು ಚರ್ಚೆಯಲ್ಲಿದ್ದಾರೆ.

ವಿಶ್ವಕಪ್ ಗೆಲುವಿನ ಜೊತೆಗೆ ಭಾರತ ತಂಡದ ‘ಥ್ರೋಡೌನ್ ಪರಿಣತ’ ರಾಘವೇಂದ್ರ ಅವರ ಯಶೋಗಾಥೆ ಬಗ್ಗೆಯು ಹೆಚ್ಚು ಚರ್ಚೆಯಾಗುತ್ತಿದೆ. ಕುಮಟಾದಲ್ಲಿ ಇರುವ ನಿವೃತ್ತ ಶಿಕ್ಷಕ ಮೋಹನ ದಿವಗಿ ಮತ್ತು ಚಂದ್ರಕಲಾ ದಂಪತಿಯ ಪುತ್ರ ರಾಘವೇಂದ್ರ ಅವರು ವಿಶ್ವವೇ ಗುರುತಿಸುವಂತ ವ್ಯಕ್ತಿಯಾಗಿ ರೂಪುಗೊಂಡಿದ್ದಾರೆ ಎಂಬ ಶ್ಲಾಘನೆ ವ್ಯಕ್ತವಾಗಿದೆ.

‘ಕ್ರಿಕೆಟ್ ಮೇಲೆ ಹೆಚ್ಚು ಆಸಕ್ತಿ ಹೊಂದಿದ್ದ ರಾಘವೇಂದ್ರ ಮನೆ ಬಿಟ್ಟು ಹುಬ್ಬಳ್ಳಿ ಸೇರಿದರು. ಅಲ್ಲಿ ಸ್ಮಶಾನ, ದೇವಾಲಯದ ಆವರಣದಲ್ಲಿ ಉಳಿಯುತ್ತಿರುವುದು ಪರಿಚಯದವರಿಂದ ತಿಳಿಯಿತು. ಬಳಿಕ ದ್ವಿತೀಯ ಪಿಯುಸಿವರೆಗೆ ಓದಿ, ತನ್ನ ಪರಿಚಯದವರ ಮೂಲಕ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಸೇರಿ, ಕಾಲಕ್ರಮೇಣ ಭಾರತ ತಂಡದ ಭಾಗವಾದರು. ಸ್ವಂತ ಶ್ರಮದಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದರ ಬಗ್ಗೆ ಹೆಮ್ಮೆಯಾಗುತ್ತಿದೆ’ ಎಂದು ಮೋಹನ ದಿವಗಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಉತ್ತರ ಕನ್ನಡ ಜಿಲ್ಲೆಯ ಕುಮಟಾದ ರಾಘವೇಂದ್ರ ದಿವಗಿ

‘ರಾಘವೇಂದ್ರ ಅವರಿಗೆ ಬಾಲ್ಯದಿಂದಲೂ ಧಾರ್ಮಿಕ ಭಾವನೆ ಹೆಚ್ಚು. ಬಿಡುವಿದ್ದಾಗಲೆಲ್ಲ ದೇವಾಲಯಗಳಿಗೆ ಭೇಟಿ ನೀಡುವುದು ವಾಡಿಕೆ. ಮೃದು ಸ್ವಭಾವದ ಅವರು ಮಿತಭಾಷಿಯೂ ಹೌದು. ಬೇರೆ ಬೇರೆ ದೇಶಗಳ ತಂಡಗಳಿಂದ ಅವಕಾಶಗಳು ಬಂದರೂ ಭಾರತ ತಂಡವನ್ನು ಬಿಡಲು ಒಪ್ಪಲಿಲ್ಲ’ ಎಂದು ಹೇಳಿದರು.

‘ಸಾಮಾಜಿಕ ಜಾಲತಾಣಗಳಲ್ಲಿ ರಾಘವೇಂದ್ರ ಕುರಿತು ಕೆಲ ತಪ್ಪು ಮಾಹಿತಿ ಹರಿದಾಡುತ್ತಿದೆ. ಅವರು ಹುಬ್ಬಳ್ಳಿಯಲ್ಲಿ ಸ್ಮಶಾನದಲ್ಲಿ ಮಲಗಿರಲಿಲ್ಲ. ಬಿವಿಬಿ ಕಾಲೇಜು ಮೈದಾನದಲ್ಲಿನ ಬದಿಯಲ್ಲಿರುವ ಕೋಣೆಯಲ್ಲಿ ಉಳಿದಿದ್ದರು. ಅವರ ಪ್ರತಿಭೆ ಗಮನಿಸಿ ಪ್ರಭಾಕರ ಕೋರೆ ಹಾಸ್ಟೆಲ್‌ನಲ್ಲಿ ವಸತಿಗೆ ವ್ಯವಸ್ಥೆ ಕಲ್ಪಿಸಿದ್ದರು. ಆರಂಭಿಕ ಹಂತದಿಂದಲೂ ಆತನನ್ನು ಗಮನಿಸಿದ್ದೆ. ಕಠಿಣ ಶ್ರಮ, ಪ್ರತಿಭೆಯಿಂದಲೇ ಆತ ಈ ಮಟ್ಟಕ್ಕೆ ತಲುಪಿದ್ದಾನೆ’ ಎನ್ನುತ್ತಾರೆ ಹುಬ್ಬಳ್ಳಿಯ ಹಿರಿಯ ಕ್ರಿಕೆಟ್ ತರಬೇತುದಾರ ಶಿವಾನಂದ ಗುಂಜಾಳ.

ಜಿಂಬಾಬ್ವೆಗೆ ತೆರಳಿರುವ ವಿವಿಎಸ್ ಲಕ್ಷ್ಮಣ್: ಜಯ್ ಶಾ

ಶ್ರೀಲಂಕಾ ಸರಣಿಯಿಂದ ನೂತನ ಕೋಚ್

ಬ್ರಿಜ್‌ಟೌನ್ (ಪಿಟಿಐ): ಈ ತಿಂಗಳ ಕೊನೆಯಲ್ಲಿ ಶ್ರೀಲಂಕಾದಲ್ಲಿ ಪ್ರಾರಂಭವಾಗುವ ಸೀಮಿತ ಓವರ್‌ಗಳ ಸರಣಿಯಿಂದ ಭಾರತ ಕ್ರಿಕೆಟ್ ತಂಡಕ್ಕೆ ನೂತನ ಮುಖ್ಯ ಕೋಚ್ ಇರಲಿದ್ದಾರೆ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಸೋಮವಾರ ಹೇಳಿದ್ದಾರೆ.

ಮಾಜಿ ಆರಂಭಿಕ ಆಟಗಾರ ಗೌತಮ್ ಗಂಭೀರ್ ಅವರು ದ್ರಾವಿಡ್ ಅವರ ನಂತರ ಮುಖ್ಯ ಕೋಚ್ ಆಗುವ ನಿರೀಕ್ಷೆಯಿದೆ. ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ)ಯು ಗಂಭೀರ್ ಮತ್ತು ಭಾರತದ ಮಹಿಳಾ ತಂಡದ ಮಾಜಿ ಕೋಚ್ ಡಬ್ಲ್ಯು.ವಿ.ರಾಮನ್ ಅವರ ಸಂದರ್ಶನವನ್ನೂ ನಡೆಸಿದೆ.

‘ಕೋಚ್ ಮತ್ತು ಆಯ್ಕೆದಾರ ಇಬ್ಬರನ್ನೂ ಶೀಘ್ರದಲ್ಲೇ ನೇಮಕ ಮಾಡಲಾಗುವುದು. ಸಿಎಸಿ ಇಬ್ಬರನ್ನು ಸಂದರ್ಶಿಸಿದೆ. ಮುಂಬೈ ತಲುಪಿದ ನಂತರ ಅವರು ಏನು ನಿರ್ಧರಿಸುತ್ತಾರೋ ಅದನ್ನು ಪಾಲಿಸುತ್ತೇವೆ. ವಿವಿಎಸ್ ಲಕ್ಷ್ಮಣ್ ಜಿಂಬಾಬ್ವೆಗೆ ತೆರಳುತ್ತಿದ್ದಾರೆ.

ವಿವಿಎಸ್ ಲಕ್ಷ್ಮಣ್

ಆದರೆ, ಹೊಸ ಕೋಚ್ ಶ್ರೀಲಂಕಾ ಸರಣಿಯಿಂದ ಸೇರಲಿದ್ದಾರೆ’ ಎಂದು ಜುಲೈ 6 ರಿಂದ ಪ್ರಾರಂಭವಾಗುವ ಜಿಂಬಾಬ್ವೆ ಪ್ರವಾಸ ಉಲ್ಲೇಖಿಸಿ ಶಾ ಮಾಧ್ಯಮಗಳಿಗೆ ತಿಳಿಸಿದರು.

ಜುಲೈ 27ರಿಂದ ಆರಂಭವಾಗಲಿರುವ ಶ್ರೀಲಂಕಾ ಪ್ರವಾಸದಲ್ಲಿ ಭಾರತ ತಂಡ ಮೂರು ಟಿ20 ಹಾಗೂ ಮೂರು ಏಕದಿನ ಪಂದ್ಯಗಳನ್ನಾಡಲಿದೆ.

ಟಿ20 ವಿಶ್ವಕಪ್ ಪ್ರಶಸ್ತಿ ಗೆದ್ದ ಭಾರತ ತಂಡದೊಂದಿಗೆ ಕೆರೀಬಿಯನ್‌ನಲ್ಲಿರುವ ಶಾ, ಫೈನಲ್‌ನಲ್ಲಿ ಉತ್ತಮ ಆಟವಾಡಿದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ಪ್ರಯತ್ನಗಳನ್ನು ಶ್ಲಾಘಿಸಿದರು. ‘ಹೋದ ವರ್ಷ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಉತ್ತಮವಾಗಿ ಆಡಿದ್ದರಿಂದ ಪ್ರಶಸ್ತಿ ಗೆದ್ದಿತು. ನಾವು ಫೈನಲ್ ಹೊರತುಪಡಿಸಿ ಎಲ್ಲಾ ಪಂದ್ಯಗಳನ್ನು ಗೆದ್ದಿದ್ದೇವೆ. ಈ ಬಾರಿ ನಾವು ಪ್ರಶಸ್ತಿ ಗೆಲ್ಲಲು ಉತ್ತಮವಾಗಿ ಆಡಿದ್ದೇವೆ’ ಎಂದರು.

ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿರುವ ಭಾರತ 'ಎ': ಐದು ಟೆಸ್ಟ್ ಪಂದ್ಯಗಳಿಗೆ ಮುಂಚಿತವಾಗಿ ಭಾರತ ‘ಎ’ ತಂಡವು ವರ್ಷದ ಕೊನೆಯಲ್ಲಿ ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ ಎಂದು ಶಾ ದೃಢಪಡಿಸಿದರು.

ಭಾರತ ತಂಡಕ್ಕೆ ಸಂಸತ್ ಶ್ಲಾಘನೆ

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡವನ್ನು ಸಂಸತ್ತಿನ ಉಭಯ ಸದನಗಳು ಸೋಮವಾರ ಅಭಿನಂದಿಸಿವೆ.

ದೇಶದ ಯುವಜನತೆ ಮತ್ತು ಕ್ರೀಡಾಪಟುಗಳು ಈ ಗೆಲುವಿನಿಂದ ಸ್ಫೂರ್ತಿ ಪಡೆಯುತ್ತಾರೆ ಎಂದು ಲೋಕಸಭೆಯಲ್ಲಿ ಸ್ಪೀಕರ್ ಓಂ ಬಿರ್ಲಾ ಹೇಳಿದರು. ಈ ಸಾಧನೆಗಾಗಿ ರೋಹಿತ್ ಶರ್ಮಾ ನೇತೃತ್ವದ ತಂಡವನ್ನು ಅವರು ಅಭಿನಂದಿಸಿದರು. ಐತಿಹಾಸಿಕ ಗೆಲುವಿಗಾಗಿ ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಸಹ ತಂಡವನ್ನು ಶ್ಲಾಘಿಸಿದ್ದಾರೆ.

‘ಈ ರೀತಿಯ ಐತಿಹಾಸಿಕ ಸಾಧನೆಗಳು ಪ್ರತಿಯೊಬ್ಬ ನಾಗರಿಕರಿಗೆ ದೊಡ್ಡ ಕನಸು ಕಾಣಲು, ಕಷ್ಟಪಟ್ಟು ಕೆಲಸ ಮಾಡಲು ಮತ್ತು ಶ್ರೇಷ್ಠತೆಯನ್ನು ಸಾಧಿಸಲು ಸ್ಫೂರ್ತಿ ನೀಡುತ್ತವೆ’ ಎಂದು ಧನಕರ್ ಹೇಳಿದರು.

ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್‌ಗೆ ಯೋಗೇಂದ್ರ ಆಯ್ಕೆ

ಮೈಸೂರು: ಅಂತರರಾಷ್ಟ್ರೀಯ ಅಥ್ಲೀಟ್, ಇಲ್ಲಿನ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಎಂ. ಯೋಗೇಂದ್ರ ಆಗಸ್ಟ್ 13ರಿಂದ 25ರವರೆಗೆ ಸ್ವೀಡನ್‌ನ ಗೋತನ್‌ಬರ್ಗ್‌ನಲ್ಲಿ ನಡೆಯಲಿರುವ 25ನೇ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಯೋಗೇಂದ್ರ

ಅವರು ಚಾಂಪಿಯನ್‌ಷಿಪ್‌ನಲ್ಲಿ ಪುರುಷರ 60 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ 2 ಕಿ.ಮೀ. ಸ್ಟೀಪಲ್ ಚೇಸ್‌ನಲ್ಲಿ ಸ್ಪರ್ಧಿಸಲಿದ್ದಾರೆ. ಇದೇ ವರ್ಷ ಫೆಬ್ರುವರಿಯಲ್ಲಿ ಪುಣೆಯಲ್ಲಿ ನಡೆದ 44ನೇ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ 2 ಕಿ.ಮೀ. ಸ್ಟೀಪಲ್ ಚೇಸ್‌ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಅವರು ವಿಶ್ವಮಟ್ಟದ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅವಕಾಶ ಪಡೆದಿದ್ದಾರೆ.

ಯೋಗೇಂದ್ರ ಈವರೆಗೆ 9 ಬಾರಿ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

ಐಸಿಸಿ ತಂಡದಲ್ಲಿ ಇಲ್ಲ ಕೊಹ್ಲಿ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಸೋಮವಾರ ಪ್ರಕಟಿಸಿರುವ ಟಿ20 ವಿಶ್ವಕಪ್ ಐಸಿಸಿ ತಂಡದಲ್ಲಿ ಭಾರತದ ಆರು ಆಟಗಾರರು ಸ್ಥಾನ ಪಡೆದಿದ್ದಾರೆ. ಆದರೆ, ವಿರಾಟ್ ಕೊಹ್ಲಿ ಅವರನ್ನು ಕೈಬಿಡಲಾಗಿದೆ.

ಈಚೆಗಷ್ಟೇ ಮುಕ್ತಾಯವಾದ ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಭಾರತ ತಂಡದ ಗೆಲುವಿನ ರೂವಾರಿ ವಿರಾಟ್ ಕೊಹ್ಲಿ ಅವರೇ ಆಗಿದ್ದರು.

ಆ ಪಂದ್ಯದಲ್ಲಿ ಅವರು ಗಳಿಸಿದ್ದ ಅರ್ಧಶತಕದಿಂದಾಗಿ ಭಾರತ ತಂಡವು ಸ್ಪರ್ಧಾತ್ಮಕ ಗುರಿಯೊಡ್ಡಲು ಸಾಧ್ಯವಾಗಿತ್ತು.

ಈ ಟೂರ್ನಿಯುದ್ದಕ್ಕೂ ಅವರು ಆರಂಭಿಕ ಬ್ಯಾಟರ್ ಆಗಿ ಆಡಿದ್ದರು. ಗುಂಪು ಮತ್ತು ಸೂಪರ್ 8ರ ಪಂದ್ಯಗಳಲ್ಲಿ ಅವರು ಹೆಚ್ಚು ರನ್ ಗಳಿಸಿರಲಿಲ್ಲ. ಆದರೆ ಫೈನಲ್‌ನಲ್ಲಿ ಪಂದ್ಯಶ್ರೇಷ್ಠರಾಗಿದ್ದರು.

ಭಾರತ ತಂಡದ ನಾಯಕರಾಗಿದ್ದ ರೋಹಿತ್ ಶರ್ಮಾ, ವೇಗಿ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಸೂರ್ಯಕುಮಾರ್ ಯಾದವ್, ಅರ್ಷದೀಪ್ ಸಿಂಗ್ ಹಾಗೂ ಸ್ಪಿನ್, ಆಲ್‌ರೌಂಡರ್ ಅಕ್ಷರ್ ಪಟೇಲ್ ಸ್ಥಾನ ಗಳಿಸಿದ್ದಾರೆ. ಅಫ್ಗಾನಿಸ್ತಾನ ತಂಡದ ಮೂವರು, ಆಸ್ಟ್ರೇಲಿಯಾ, ವೆಸ್ಟ್ ಇಂಡೀಸ್ ಹಾಗೂ ದಕ್ಷಿಣ ಆಫ್ರಿಕಾ ತಂಡದ ತಲಾ ಒಬ್ಬರಿಗೆ ಸ್ಥಾನ ಲಭಿಸಿದೆ.

ಅಕ್ಷರ್ ಪಟೇಲ್ ಮತ್ತು ವಿರಾಟ್ ಕೊಹ್ಲಿ

ತಂಡ: ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್ (ಎಲ್ಲರೂ ಭಾರತದವರು), ರೆಹಮಾನುಲ್ಲಾ ಗುರ್ಬಾಜ್, ರಶೀದ್ ಖಾನ್, ಫಜಲ್‌ಹಕ್ ಫರೂಕಿ (ಅಫ್ಗಾನಿಸ್ತಾನ), ಮಾರ್ಕಸ್ ಸ್ಟೊಯಿನಿಸ್ (ಆಸ್ಟ್ರೇಲಿಯಾ), ನಿಕೊಲಸ್ ಪೂರನ್ (ವೆಸ್ಟ್ ಇಂಡೀಸ್), 12ನೇ ಆಟಗಾರ: ಎನ್ರಿಚ್ ನಾಕಿಯಾ (ದಕ್ಷಿಣ ಆಫ್ರಿಕಾ).

‘ಏಷ್ಯನ್ ಗೇಮ್ಸ್‌ಗೆ ಯೋಗ’

ನವದೆಹಲಿ (ಪಿಟಿಐ): ‘ಏಷ್ಯನ್ ಗೇಮ್ಸ್‌ನಲ್ಲಿ ಯೋಗ ಸೇರ್ಪಡೆಗೆ ಏಷ್ಯಾ ಒಲಿಂಪಿಕ್ ಕೌನ್ಸಿಲ್ ಕಾರ್ಯಕಾರಿ ಮಂಡಳಿ (ಒಸಿಎ) ಒಪ್ಪಿಗೆ ಸೂಚಿಸಿದೆ. ಇದು ಯೋಗದ ಸೇರ್ಪಡೆಗೆ ದಾರಿಯಾಗಲಿದೆ’ ಎಂದು ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ತಿಳಿಸಿದ್ದಾರೆ.

ಕಾರ್ಯಕಾರಿ ಮಂಡಳಿಯ ನಿರ್ಧಾರದ ಕುರಿತು ಒಸಿಎ ಕಾರ್ಯಾಧ್ಯಕ್ಷ ರಣಧೀರ್ ಸಿಂಗ್ ಮಾಹಿತಿ ನೀಡಿದ್ದಾರೆಂದು ಪಿ.ಟಿ. ಉಷಾ ತಿಳಿಸಿದ್ದಾರೆ.

‘ಏಷ್ಯನ್ ಗೇಮ್ಸ್‌ನ ಸ್ಪರ್ಧಾತ್ಮಕ ಕ್ರೀಡೆಗಳಲ್ಲಿ ಯೋಗದ ಸೇರ್ಪಡೆಗೆ ಅವರ ನಿರಂತರ ಬೆಂಬಲಕ್ಕೆ ಧನ್ಯವಾದ’ ಎಂದೂ ಅವರು ಹೇಳಿದ್ದಾರೆ. ಯೋಗಕ್ಕೆ ಅರ್ಹವಾದ ಮಾನ್ಯತೆ ನೀಡುವಂತೆ ಕೋರಿದ್ದ ಭಾರತ ಮನವಿಗೆ ಒಸಿಎ ಕಾರ್ಯಕಾರಿ ಮಂಡಳಿ ಸ್ಪಂದಿಸಿದ್ದಕ್ಕೆ ನನಗೆ ಸಂತೋಷವಾಗಿದೆ. ಪ್ರಸ್ತಾವನೆಯು ದೃಢೀಕರಣಕ್ಕಾಗಿ ಕ್ರೀಡಾ ಸಮಿತಿ ಮೂಲಕ ಸಾಮಾನ್ಯ ಸಭೆಗೆ ಹೋಗಲಿದೆ ಎಂದು ಅವರು ಹೇಳಿದ್ದಾರೆ.

ಪಿ.ಟಿ.ಉಷಾ

ಯೋಗವು ಪ್ರದರ್ಶನ ಕ್ರೀಡೆ ಅಥವಾ ಪದಕ ವಿಭಾಗದ ಕ್ರೀಡೆಯಾಗಿರಲಿದೆಯೋ ಎಂಬುದು ಒಸಿಎ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಿದೆ. ಇದು ಮೊದಲ ಹೆಜ್ಜೆಯಾಗಿದೆ. ವಿಶ್ವದಾದ್ಯಂತ ಪ್ರಚಲಿತದಲ್ಲಿರುವ ಯೋಗ ಪದಕ ಕ್ರೀಡೆಯಾಗಲಿಯೆಂದು ಐಒಎ ಬಯಸುತ್ತದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಮ್ಮ ಸಾಮೂಹಿಕ ಪ್ರಯತ್ನದಿಂದ ಸಾಧಿಸಿದ್ದೇವೆ. ದೊಡ್ಡಮಟ್ಟದ ಕ್ರೀಡಾಕೂಟಗಳಲ್ಲಿ ಯೋಗವನ್ನು ಸೇರಿಸುವ ಭಾರತದ ಪ್ರಯತ್ನ ಸಫಲವಾಗುತ್ತಿರುವುದು ನನಗೆ ಸಂತೋಷ ತಂದಿದೆ ಎಂದು ಉಷಾ ಹೇಳಿದ್ದಾರೆ.

ಸಿಂಗಪುರಕ್ಕೆ ವಿಶ್ವ ಚೆಸ್ ಆತಿಥ್ಯ

ನವದೆಹಲಿ (ಪಿಟಿಐ): ವಿಶ್ವ ಚೆಸ್ ಚಾಂಪಿಯನ್‌ಷಿಪ್ ಆಯೋಜನೆ ಆತಿಥ್ಯದ ಅವಕಾಶವನ್ನು ಸಿಂಗಪುರ ಗಿಟ್ಟಿಸಿಕೊಂಡಿತು.

ಭಾರತದ ಡಿ. ಗುಕೇಶ್ ಮತ್ತು ಚೀನಾದ ಆಟಗಾರ ಹಾಗೂ ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಅವರ ನಡುವೆ ಈ ವಿಶ್ವ ಚೆಸ್ ಚಾಂಪಿಯನ್‌ಷಿಪ್ ನಡೆಯಲಿದೆ. ಅದಕ್ಕಾಗಿಯೇ ದೆಹಲಿ ಅಥವಾ ಚೆನ್ನೈನಲ್ಲಿ ಪಂದ್ಯ ಆಯೋಜಿಸಲು ಭಾರತವು ಬಿಡ್ ಸಲ್ಲಿಸಿತ್ತು. ಆದರೆ ಪ್ರಯತ್ನಗಳು ಕೈಗೂಡಲಿಲ್ಲ.

ತಮಿಳುನಾಡು ಚೆಸ್ ಸಂಸ್ಥೆ ಮತ್ತು ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್) ಫಿಡೆಗೆ ಪ್ರತ್ಯೇಕ ಬಿಡ್ ಸಲ್ಲಿಸಿದ್ದವು.



ಡಿ. ಗುಕೇಶ್

‘ಎಲ್ಲ ಬಿಡ್‌ಗಳನ್ನೂ ಅವಲೋಕಿಸಿ ಮತ್ತು ಸಮಗ್ರವಾಗಿ ಪರೀಕ್ಷಿಸಲಾಯಿತು. ಆ ಸ್ಥಳಗಳ ಮೂಲಭೂತ ಸೌಲಭ್ಯಗಳು, ಕಾರ್ಯಕ್ರಮಗಳು ಮತ್ತು ಅವಕಾಶಗಳನ್ನು ಅನುಲಕ್ಷಿಸಿ ಸಿಂಗಪುರಕ್ಕೆ ಆತಿಥ್ಯದ ಅವಕಾಶ ನೀಡಲಾಗಿದೆ’ ಎಂದು ಫಿಡೆ ಪ್ರಕಟಣೆಯಲ್ಲಿ ತಿಳಿಸಿದೆ. 17 ವರ್ಷದ ಗುಕೇಶ್ ಅವರು ಕಳೆದ ಏಪ್ರಿಲ್‌ನಲ್ಲಿ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಜಯಿಸಿ ಇತಿಹಾಸ ಬರೆದಿದ್ದರು.

ಜಿಂಬಾಬ್ವೆ ತಂಡಕ್ಕೆ ಸಿಕಂದರ್ ನಾಯಕ

ಹರಾರೆ (ಪಿಟಿಐ): ಟಿ20 ಕ್ರಿಕೆಟ್ ವಿಶ್ವ ಚಾಂಪಿಯನ್ ಭಾರತ ತಂಡದ ವಿರುದ್ಧ ಜುಲೈ 6ರಿಂದ ಆರಂಭವಾಗುವ ಐದು ಚುಟುಕು ಪಂದ್ಯಗಳ ಸರಣಿಗೆ ಅನುಭವಿ ಬ್ಯಾಟರ್ ಸಿಕಂದರ್ ರಝಾ ಅವರನ್ನು ಜಿಂಬಾಬ್ವೆ ತಂಡದ ನಾಯಕರಾಗಿ ಸೋಮವಾರ ನೇಮಕ ಮಾಡಲಾಗಿದೆ. ಜಿಂಬಾಬ್ವೆ ತಂಡದಲ್ಲಿ ಬೆಲ್ಜಿಯಂ ಮೂಲದ ಅಂಟಮ್ ನಖ್ವಿ ಸ್ಥಾನ ಪಡೆದಿದ್ದಾರೆ. ಆದರೆ ಪೌರತ್ವ ಸ್ಥಾನಮಾನದ ದೃಢೀಕರಣವು ಇನ್ನೂ ಆಗಬೇಕಿದ್ದು, ಅದರ ನಂತರವಷ್ಟೇ ಅವರು ಕಣಕ್ಕಿಳಿಯುವುದು ನಿರ್ಧಾರವಾಗಲಿದೆ ಎಂದು ಜಿಂಬಾಬ್ವೆ ಕ್ರಿಕೆಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಭೂಪಿಂದರ್ ನಿಧನ

ಸೂರತ್ (ಪಿಟಿಐ):ಭಾರತದ ಮಾಜಿ ಫುಟ್‌ಬಾಲ್ ಆಟಗಾರ ಭೂಪಿಂದರ್ ಸಿಂಗ್ ರಾವತ್ (85) ಅವರು ಅನಾರೋಗ್ಯದಿಂದ ನಿಧನರಾಗಿದ್ದಾರೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತಿಳಿಸಿದೆ.

ಮಲೇಷ್ಯಾದಲ್ಲಿ 1969ರಲ್ಲಿ ನಡೆದಿದ್ದ ಮೆರ್ಡೆಕಾ ಕಪ್ ಟೂರ್ನಿಯಲ್ಲಿ ಅವರು ಆಡಿದ್ದರು. ಅವರಿಗೆ ಪತ್ನಿ, ಒಬ್ಬ ಮಗ ಮತ್ತು ಮಗಳು ಇದ್ದಾರೆ.

ತಮ್ಮ ವೇಗದ ಆಟದ ಕೌಶಲಕ್ಕೆ ಜನಪ್ರಿಯರಾಗಿದ್ದರು. ಅವರನ್ನು ಅಭಿಮಾನಿಗಳು ಪ್ರೀತಿಯಿಂದ ‘ಸ್ಕೂಟರ್’ ಎಂದೇ ಕರೆಯುತ್ತಿದ್ದರು.

‘ಭೂಪಿಂದರ್ ಸಿಂಗ್ ಅವರು ಉತ್ತಮ ಮಿಡ್ ಫಿಲ್ಡರ್ ಹಾಗೂ ಗೋಲು ಗಳಿಸುವ ಆಟಗಾರರಾಗಿದ್ದರು’ ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ ಚೌಬೆ ಸ್ಮರಿಸಿದ್ದಾರೆ.

1960–70ರಲ್ಲಿ ಭಾರತ ತಂಡ ಪ್ರತಿನಿಧಿಸಿದ್ದ ರಾವತ್, ಮೆರ್ಡೆಕಾ ಕಪ್ ಟೂರ್ನಿಯಲ್ಲಿ ಪಶ್ಚಿಮ ಆಸ್ಟ್ರೇಲಿಯಾ ವಿರುದ್ಧ ಗೆಲುವು ಸಾಧಿಸುವ ಮೂಲಕ 7ನೇ ಸ್ಥಾನ ಪಡೆದ ಭಾರತ ತಂಡದ ಭಾಗವಾಗಿದ್ದರು. ದೆಹಲಿ ಪೊಲೀಸ್, ಗೂರ್ಖಾ ಬ್ರಿಗೇಡ್ ಹಾಗೂ ಮುಫಾಲ್ಲಾಲ್ ತಂಡಗಳ ಪರವಾಗಿ ಆಡಿದ್ದರು.

ಬೆಲ್ಜಿಯಂ ಡಿಫೆಂಡರ್ ವೂಟ್ ಫೇಸ್ ಅವರು ಚೆಂಡು ಅನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಎಎಫ್‌ಪಿ ಚಿತ್ರ

ಕ್ವಾರ್ಟರ್‌ಗೆ ಫ್ರಾನ್ಸ್, ಸ್ಪೇನ್

ಡೆಸೆಲ್ ಡಾರ್ಫ್ ಜರ್ಮನಿ (ಎಎಫ್‌ಪಿ): ಫ್ರಾನ್ಸ್ ತಂಡವು ಸೋಮವಾರ ಯುರೋ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 1–0 ಯಿಂದ ಬೆಲ್ಜಿಯಂ ತಂಡವನ್ನು ಸೋಲಿಸಿ, ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದೆ.

ಯುರೋ ಕಪ್ 2024 ಜರ್ಮನಿ

ರೋಚಕ ಹಣಾಹಣಿಯಲ್ಲಿ ಪಂದ್ಯ ಮುಗಿಯುವ ಕೊನೆಯ ಕ್ಷಣದಲ್ಲಿ ಬೆಲ್ಜಿಯಂ ಪರ ಡಿಫೆಂಡರ್ ಜಾನ್ ವೆರ್ಟೊಂಗೆನ್ (85ನೇ ನಿಮಿಷ) ಅವರು ಫ್ರಾನ್ಸ್‌ಗೆ ಗೋಲು ‘ಉಡುಗೊರೆ’ ನೀಡಿದರು. ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಫ್ರಾನ್ಸ್ ಅಭಿ ಮಾನಿಗಳು ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು. ಸ್ಕೋರ್ ಸಮಬಲ ಸಾಧಿಸಲು ಬೆಲ್ಜಿಯಂ ಆಟಗಾರರು ಕೊನೆಯವರೆಗೂ ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಫ್ರಾನ್ಸ್ ಮುಂದಿನ ಪಂದ್ಯದಲ್ಲಿ ಪೋರ್ಚುಗಲ್ ಅಥವಾ ಸ್ಲೊವೇನಿಯಾ ವಿರುದ್ಧ ಸೆಣಸಲಿದೆ.

ಸ್ಪೇನ್‌ಗೆ ಜಯ: ಮತ್ತೊಂದು ಪಂದ್ಯದಲ್ಲಿ ಸ್ಪೇನ್ ತಂಡ 4–1 ರಿಂದ ಜಾರ್ಜಿಯಾ ತಂಡವನ್ನು ಮಣಿಸಿ, ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಜಾರ್ಜಿಯ ಪರ ರಾಬಿನ್ ಲೆ ನಾರ್ಮಂಡ್ (18ನೇ ನಿಮಿಷ) ಗೋಲು ಗಳಿಸಿ ತಂಡಕ್ಕೆ ಮುನ್ನಡೆ ಒದಗಿಸಿದರು.

ಬಳಿಕ ಚೇತರಿಸಿಕೊಂಡ ಸ್ಪೇನ್, ನಾಲ್ಕು ಗೋಲು ಗಳಿಸಿತು.

ಆರ್‌ಸಿಬಿಗೆ ದಿನೇಶ್ ಕಾರ್ತಿಕ್ ಮೆಂಟರ್

ಬೆಂಗಳೂರು: ಭಾರತ ತಂಡದ ಮಾಜಿ ವಿಕೆಟ್‌ಕೀಪರ್– ಬ್ಯಾಟರ್ ದಿನೇಶ್ ಕಾರ್ತಿಕ್ ಅವರನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟಿಂಗ್ ಕೋಚ್ ಮತ್ತು ಮೆಂಟರ್ ಆಗಿ ನೇಮಕ ಮಾಡಲಾಗಿದೆ.

ದಿನೇಶ್

‘ನಮ್ಮ ಕೀಪರ್‌ಗೆ ಸ್ವಾಗತ. ದಿನೇಶ್ ಕಾರ್ತಿಕ್ ಅವರು ಆರ್‌ಸಿಬಿಗೆ ಹೊಸ ಅವತಾರದಲ್ಲಿ ಮರಳಿದ್ದಾರೆ. ಡಿ.ಕೆ ಅವರು ಬ್ಯಾಟಿಂಗ್ ಕೋಚ್ ಮತ್ತು ಮೆಂಟರ್ ಆಗಿ ಆರ್‌ಸಿಬಿ ಪುರುಷರ ತಂಡ ದಲ್ಲಿರಲಿದ್ದಾರೆ’ ಎಂದು ಆರ್‌ಸಿಬಿಯು ಎಕ್ಸ್‌ನಲ್ಲಿ ಸಂದೇಶ ಹಾಕಿದೆ.

‘ಈ ವ್ಯಕ್ತಿಯನ್ನು ಕ್ರಿಕೆಟ್‌ನಿಂದ ಹೊರಹಾಕಬಹುದು. ಆದರೆ ಈ ವ್ಯಕ್ತಿಯೊಳಗಿರುವ ಕ್ರಿಕೆಟ್ ಅನ್ನು ಕಿತ್ತುಹಾಕಲು ಸಾಧ್ಯವಿಲ್ಲ. ಅವರ ಮೇಲೆ ಅಪಾರ ಪ್ರೀತಿಯ ಮಳೆಗರೆಯುತ್ತದೆ 12ನೇ ಆಟಗಾರನ ಆರ್ಮಿ’ ಎಂದೂ ಪೋಸ್ಟ್‌ನಲ್ಲಿ ಬರೆದಿದೆ.

‘ವೃತ್ತಿಪರ ಹಂತದಲ್ಲಿ ಕೋಚಿಂಗ್ ಕಾರ್ಯನಿರ್ವಹಿಸುವುದು ನಿಜಕ್ಕೂ ಉತ್ತಮ ಅನುಭವ. ನನ್ನ ಜೀವನದ ಈ ಹೊಸ ಅಧ್ಯಾಯವನ್ನು ಆರಂಭಿಸಲು ಉತ್ಸುಕನಾಗಿರುವೆ. ಆಟಗಾರನಾಗಿ ನನ್ನ ಅನುಭವವನ್ನು ತಂಡಕ್ಕೆ ಧಾರೆಯೆರೆಯುವೆ’ ಎಂದು ದಿನೇಶ್ ಪ್ರತಿಕ್ರಿಯಿಸಿದ್ದಾರೆ.

ಕಳೆದ ಐಪಿಎಲ್‌ನಲ್ಲಿ ಅವರು 187.36ರ ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟಿಂಗ್ ಮಾಡಿದ್ದರು. ಒಟ್ಟು 326 ರನ್‌ಗಳನ್ನು ಕಲೆಹಾಕಿದ್ದರು. ಐಪಿಎಲ್‌ನಲ್ಲಿ ಅವರು ಒಟ್ಟು 257 ಪಂದ್ಯಗಳನ್ನು ಆಡಿದ್ದಾರೆ.

ವಿಂಬಲ್ಡನ್ ಟೆನಿಸ್ : ಮಹಿಳೆಯರ ಸಿಂಗಲ್ಸ್‌ನಲ್ಲಿ ಚೀನಾದ ಝು ಲಿನ್‌ಗೆ ಜಯ

ಕಾರ್ಲೋಸ್ ಅಲ್ಕರಾಜ್ ಶುಭಾರಂಭ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಸೋಮವಾರ ಆರಂಭವಾದ ವಿಂಬಲ್ಡನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಜಯಿಸಿದರು.

ಅವರು ಎಸ್ಟೋನಿಯಾದ ಮಾರ್ಕ್ ಲಾಜಲ್ ವಿರುದ್ಧ 7-6 (7/3), 7-5, 6-2ರಿಂದ ಗೆಲುವು ಸಾಧಿಸಿದ್ದಾರೆ. ಪಂದ್ಯದ ಮೊದಲ ಸೆಟ್‌ನಲ್ಲಿ ಉಭಯ ಆಟಗಾರರು ಕಠಿಣ ಪೈಪೋಟಿ ನಡೆಸಿದರು. ಇದರಿಂದಾಗಿ ಟೈ ಬ್ರೇಕರ್‌ನಲ್ಲಿ ಫಲಿತಾಂಶ ನಿರ್ಧಾರವಾಯಿತು. ಮೂರನೇ ಶ್ರೇಯಾಂಕದ ಅಲ್ಕರಾಜ್ ಛಲದ ಆಟವಾಡಿ ಈ ಸೆಟ್ ತಮ್ಮದಾಗಿಸಿಕೊಂಡರು.

21 ವರ್ಷ ವಯಸ್ಸಿನ ಅಲ್ಕರಾಜ್, ತಮ್ಮ ನಾಲ್ಕನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ರಾಡ್ ಲೇವರ್, ಬಯೊನ್ ಬಾರ್ಗ್, ರೋಜರ್ ಫೆಡರರ್, ರಫೆಲ್ ನಡಾಲ್ ಮತ್ತು ನೊವಾಕ್ ಜೊಕೊವಿಚ್ ನಂತರ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಪ್ರಶಸ್ತಿಯನ್ನು ಸತತವಾಗಿ ಜಯಸಿದ ಆರನೇ ಆಟಗಾರನಾಗುವ ಭರವಸೆಯನ್ನು ಸ್ಪೇನ್ ದೇಶದ ಅಲ್ಕರಾಜ್ ಮೂಡಿಸಿದ್ದಾರೆ.

ರಷ್ಯಾದ ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ ಟೂರ್ನಿಯಲ್ಲಿ ಎರಡನೇ ಸುತ್ತು ತಲುಪಿದ್ದಾರೆ. ಅವರು 6-3, 6-4, 6-2 ರಿಂದ ಅಮೆರಿಕದ ಅಲೆಕ್ಸಾಂಡರ್ ಕೊವಾಸೆವಿಚ್ ವಿರುದ್ಧ ಗೆದ್ದರು. ಮೆಡ್ವೆಡೆವ್ ಮುಂದಿನ ಸುತ್ತಿನಲ್ಲಿ ಅಲೆಕ್ಸಾಂಡ್ರೆ ಮುಲ್ಲರ್ ಅಥವಾ ಹ್ಯೂಗೋ ಗ್ಯಾಸ್ಟನ್ ಅವರನ್ನು ಎದುರಿಸುತ್ತಾರೆ. ಮೆಡ್ವೆಡೆವ್ ಅವರು ಹೋದ ವರ್ಷ ಸೆಮಿಫೈನಲ್ ತಲುಪಿದ್ದರು.

ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್. ಎಎಫ್‌ಪಿ ಚಿತ್ರ

ಟೂರ್ನಿಯ ಮೊದಲ ದಿನ ಕೆನಡಾದ ಡೆನಿಸ್ ಶಪೋವಾಲೋವ್ ಶುಭಾರಂಭ ಮಾಡಿದ್ದು, ಚಿಲಿಯ ನಿಕೋಲಸ್ ಜೆರ್ರಿ ವಿರುದ್ಧ 6–1, 7–5, 6–4ರಿಂದ ಗೆಲುವು ಸಾಧಿಸಿದರು.

ದಿನದ ಇತರ ಪಂದ್ಯಗಳಲ್ಲಿ ಬಲ್ಗೇರಿಯಾದ ಗ್ರಿಗರ್ ಡಿಮಿಟ್ರೋವ್ ಅವರು 6-3, 6-4, 7-5ರಿಂದ ಸೈಬಿರಿಯಾದ ದುಸಾನ್ ಲಾಜೊವಿಕ್ ವಿರುದ್ಧ; ಚೀನಾದ ಶಾಂಗ್ ಜುಂಚೆಂಗ್, ಚಿಲಿಯ ಕ್ರಿಶ್ಚಿಯನ್ ಗ್ಯಾರಿನ್ ವಿರುದ್ಧ 7-5, 6-4, 6-4ರಿಂದ; ಜರ್ಮನಿಯ ಜಾನ್-ಲೆನ್ನಾರ್ಡ್ ಸ್ಟ್ರಫ್, ಹಂಗೇರಿಯ ಫ್ಯಾಬಿಯನ್ ಮರೋಜ್‌ಸಾನ್ ವಿರುದ್ಧ 6-4, 6-7 (4/7), 6-2, 6-3ರಿಂದ; ಕ್ರೊವೇಷಿಯಾದ ಬೊರ್ನಾ ಕೊರಿಚ್, ಫಿಲಿಪ್ ಮೆಲಿಜಿನಿ ಅಲ್ವೆಸ್ ವಿರುದ್ಧ 6-3, 7-6 (7/2), 6-3ರಿಂದ; ಇಟಲಿಯ ಫ್ಯಾಬಿಯೊ ಫಾಗ್ನಿನಿ, ಲುಕಾ ವ್ಯಾನ್ ಅಸ್ಚೆ ವಿರುದ್ಧ 6-1, 6-3, 7-5ರಿಂದ; ನಾರ್ವೆಯ ಕ್ಯಾಸ್ಪರ್ ರೂಡ್, ಆಸ್ಟ್ರೇಲಿಯಾ ಅಲೆಕ್ಸ್ ಬೋಲ್ಟ್ ವಿರುದ್ಧ 7-6 (7/2), 6-4, 6-4ರಿಂದಲೂ ಜಯಿಸಿದರು.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚೀನಾದ ಝು ಲಿನ್ 6-0, 6-4 ರಿಂದ ಇರಾನ್‌ನ ಕ್ಯಾಮೆಲಿಯಾ ಬೇಗು ವಿರುದ್ಧ ಗೆದ್ದು ಮುಂದಿನ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಉಳಿದಂತೆ ರಷ್ಯಾದ ಅನಾಸ್ತೆಸಿಯಾ ಪಾವ್ಲ್ಯುಚೆಂಕೋವಾ 7-6 (7/4), 6-1ರಿಂದ ಟೇಲರ್ ಟೌನ್ಸೆಂಡ್ ವಿರುದ್ಧ ಗೆದ್ದರು. ಗ್ರೀಸ್‌ನ ಮರಿಯಾ ಸಕ್ಕಾರಿ, ಅಮೆರಿಕ ಮೆಕ್ ಕರ್ಟ್ನಿ ಕೆಸ್ಲರ್ 6-3, 6-1ರಿಂದ ಜಯ ಸಾಧಿಸಿದರು.

ಉಕ್ರೇನ್‌ನ ಡಯಾನಾ ಯಾಸ್ಟ್ರೆಮ್ಸ್ಕಾ, ಅರ್ಜಂಟೀನಾನ ನಾಡಿಯಾ ವಿರುದ್ಧ 6-1, 7-6 (7/1) ರಿಂದ ಜಯಿಸಿದರು.